AR
212

MADRAS GOVERNMENT ORIENTAL SERIES

No. CXIX

ಮನ್ಮಥ ವಿಜಯಂ

MANMATHA VIJAYAM

MADRAS GOVERNMENT ORIENTAL SERIES

PUBLISHED UNDER THE AUTHORITY OF
THE GOVERNMENT OF MADRAS.

General Editor
T. CHANDRASEKARAN, M.A., L.T.,
Curator, Government Oriental Manuscripts Library,
Madras.

No. CXIX

మన్మథ విజయం

MANMATHA VIJAYAM

Critically edited with Introduction

BY

H. SESHA IYENGAR,
(Retd. Lecturer in Kannada, University of Madras.)

GOVERNMENT ORIENTAL MANUSCRIPTS LIBRARY, MADRAS.

1954

[Price Rs. 2—12—0

PRINTED AT
THE SREEVATHSA PRESS
ROYAPETTAH, MADRAS.

INTRODUCTION

The Government of Madras took up for consideration the question of publication of the various manuscripts in different languages on subjects like Philosophy, Medicine, Science, etc., early in May, 1948. Important Manuscripts Libraries in the Madras Presidency were requested to send a list of unpublished manuscripts with them for favour of being considered by the Government for publication. The Honorary Secretary of the Tanjore Maharaja Serfoji's Sarasvathi Mahal Library, Tanjore, alone complied with this request. This list as well as a similar list of unpublished manuscripts in the Government Oriental Manuscripts Library, Madras, were carefully examined and a tentative selection of manuscripts suitable for publication was made. The Government in their Memorandum No. 34913/48-10, Education, dated 4—4—1949, constituted an Expert Committee with the Curator of the Government Oriental Manuscripts Library, Madras, as the Secretary, for the final selection of manuscripts suitable for printing and for estimating the cost of publication.

The following are the members of the Committee :—

1. Sri T. M. Narayanaswami Pillai, M.A., B.L.
2. ,, R. P. Sethu Pillai, B.A., B.L.
3. ,, C. M. Ramachandra Chettiar, B.A., B L.
4. ,, R. Krishnamoorthy, (Kalki).
5. Dr. N. Venkataramanayya, M.A., Ph. D.
6. Sri M. Ramanuja Rao Naidu, M.A.
7. ,, V. Prabhakara Sastri.
8. ,, N. Venkata Rao, M.A.
9. ,, H. Sesha Ayyangar.
10. ,, Masti Venkatesa Ayyangar.
11. ,, M. Mariappa Bhat, M.A., L.T.
12. Dr. C. Achyuta Menon, B.A., Ph. D.
13. Dr. C. Kunhan Raja, M.A., D. Phil.
14. ,, A. Sankaran, M.A., Ph.D., L.T.
15. Sri Polakam Rama Sastri.
16. ,, S. K. Ramanatha Sastri.

17. Dr. M. Abdul Haq, M.A., D. Phil., (Oxon.)
18. Afzul-ul-Ulama Hakim Khader Ahamed.
19. Sri P. D. Joshi.
20. „ S. Gopalan, B.A., B.L.
21. „ T. Chandrasekharan, M.A., L.T.

With the exception of Sri Masti Venkatesa Ayyangar, and Dr. C. Kunhan Raja, the above members continued to be members of the Expert Committee for 1950-51 also to which the following gentlemen were added in Govt. Memo. 7297-E/50-3, Edn., D/—19—'50 and Govt. Memo. No. 15875-E/50-4, Edn.' D'—7—9—'50.

1. Dr. A. Chidambaranatha Chettiar, M.A., Ph. D.,
2. Sri S. Govindarajulu, B.A., B.L., LL.B., Bar-at-law.
3. Capt. G. Srinivasamoorthy, B.A., B.L., M.B., and C.M.
4. Dr. Muhammad Hussian Nainar, M.A., Ph. D.,
5. Sri T. V. Subba Rao, B.A., B.L.,
6. Principal, College of Indian Medicine, Madras.

The members of the Committee formed into Sub-Committees for the various languages, Sanskrit, Tamil, Telugu, Kannada, Malayalam, Mahrathi and Islamic Languages. They met during the month of May, 1949, at Madras and at Tanjore to examine the manuscripts and make a selection. The recommendations of the Committee were accepted by the Government and they decided to call these publications as the "MADRAS GOVERNMENT ORIENTAL SERIES," and appointed the Curator, Government Oriental Manuscripts Library, Madras, as the General Editor of the publications under this series.

The following manuscripts were taken up for publication during 1949-50.

"A" From The Government Oriental Manuscripts Library, Madras

TAMIL

1. Kappal Sattiram
2. Anubhava Vaiddiya Murai
3. Attanakolahalam
4. Upadesa Kandam
5. Colan Purva Pattayam
6. Sivajnana Dipam

TELUGU

1. Ausadha Yogamulu
2. Vaidya Nighantuvu
3. Dhanurvidya Vilasamu
4. Yoga Darsana Visayamu
5. Khadga Laksana Siromani

SANSKRIT

1. Visanarayaniyam—(Tantrasarasangraha)
2. Bhargava Nadika
3. Hariharacaturangam
4. Brahmasutravrtti—Mitaksara
5. Nyayasiddhanta Tattvamrtam

MALAYALAM

1. Garbha Cikitsa
2. (a) Vastulaksanam
   (b) Silpavisayam
3. Mahasaram
4. Kanakkusaram
5. Kriyakramam
6. Kanakkusaram—(Balaprabodham)

KANNADA

1. Lokopakaram
2. Rattamatam

3. Asvasastram
4. Vividha Vaidya Visayagalu
5. Sangitaratnakara
6. Supasastra

ISLAMIC LANGUAGES

1. Jamil-Al-Ashya
2. Tibb-E-Faridi
3. Tahqiq-Al-Buhran
4. Safinat-Al-Najat

"B" FROM THE TANJORE MAHARAJA SERFOJI'S SARASVATHI MAHAL LIBRARY, TANJORE

TAMIL

1. Sarabendra Vaidya Murai (Diabetes)
2. Do. (Eyes)
3. Do. (Anaemia)
4. Do. (Svasakasam)
5. Agastiyar
6. Konkanarsarakku Vaippu
7. Tiruccirramalakkovaiyar with Padavurai
8. Talasamudram
9. Bharatanatyam
10. (a) Pandikeli Vilasa Natakam
    (b) Pururava Cakravarti Natakam
    (c) Madana Sundara Vilasa Natakam
11. Percy Macqueen's Collection of Folklore in the Madras University Library
12. Ramaiyan Ammanai

TELUGU

1. Kamandakanitisaramu
2. Taladasapranapradipika

3. Raghunatha Nayakabhyudayamu
4. Rajagopala Vilasamu
5. Ramayanamu by Katta Varadaraju

MAHRATHI

1. Natyasastra Sangraha
2. (a) Book of Knowledge
   (b) Folk Songs
   (c) Dora Darun Veni Paddhati
   (d) Asvasa Catula Dumani
3. (a) Pratapasimhendra Vijaya Prabandha
   (b) Sarabhendra Tirthavali
   (c) Lavani
4. Devendra Kuravanji
5. Bhakta Vilasa
6. Sloka Baddha Ramayana

SANSKRIT

1. Asvasastra with Tricolour illustrations
2. Rajamrganka
3. Anandakanam
4. Ayurvedamahodadhi
5. Gita Govinda Abhinaya
6. (a) Colacampu
   (b) Sahendra Vilasa
7. Dharmakutam—Sundra Kanda.
8. Jatakasara
9. Visnutattvanirnaya Vyakhya
10. Sangita Darpana
11. Bijapallava

During 1950, only the Sub-committees for TAMIL, TELUGU and KANNADA met in the month of July 1950 at Madras.

The following books were taken up for publication in the various languages during 1950-51.

TAMIL

1. Datcanayanar-Vaiddiya-Attavanai
2. Vaiddiyak Kalanciyam
3. Anubhava Vaiddiya Murai Vol. 3.

TELUGU

1. Saivacarasangrahamu
2. Anubhava Vaidyamu
3. Abhinayadarpanamu

SANSKRIT

1. Arogyacintamani
2. Tattvasara with Ratnasarini
3. Sutarathamrta Lahari
4. (a) Ratnadipika
   (b) Ratnasastra

MALAYALAM

1. Asvacikitsa
2. Phalasarasamuccaya

KANNADA

1. Vaidya Sara Sangraha

During 1951-52, only the Sub-committees for TAMIL, TELUGU and MALAYALAM met in the month of April 1951. The following books were taken up for publication in the various languages

TAMIL

1. Saptarisinadi
2. Karnatakarajakkal Savistara Caritram
3. Bharata Siddantam
4. Pillaippinivakatam
5. Anubhava Vaiddiyam Vol. 4
6. Mattuvakatam

TELUGU

1. Brahmavidya Sudharnayamu
2. Ragatalacintamani
3. Vaidyacintamani
4. Kumararamuni Katha
5. Katamaraju Katha

SANSKRIT

1. Devakeralam—Candrakala Nadi
2. Patanjala Yogasutra Bhasya Vivarana by Sri Sankaracarya

MALAYALAM

1. Kilivandusamvadam
2. Advaita Vedantam
3. Barhaspatyasutra with Malayalam commentary
4. Karanapaddhati

KANNADA

1. Sadgururahasyam

ARABIC

1. Shawakil-Ul-Hur

In Government Memorandum No. 18947-E/52-2, Edn., dated 7-8-1952, a few changes were made in the personnel of the Expert Committee :

The names of the following members were deleted :-

1. Sri V. Prabahakara Sastri
2. Professor M. Hiriyanna
3. ,, C. Achyuta Menon
4. ,, M. Abdul Haq

The following gentlemen were included as members of the Expert Committee :

1. Sri M. Somasekhara Sarma
2. Dr. V. Raghavan, M.A., Ph. D.
3. ,, R. Nagaraja Sarm, M.A., Ph. D.
4. ,, S. Krishnan Nayar, M.A., Ph. D.
5. Professor S. A. Bukhari, M.A.

The Sub-Committees for all the languages met during September 1952 for selecting manuscripts for publication.

The following manuscripts were taken up for publication during 1952-53 :

TAMIL

1. Saptarisinadi Volume II — VRSABHA LAGNA
2. Temple Inscriptions of South India

TELUGU

1. Sarirmu

KANNADA

1. Bijjalaraya Carite
2. Vaidyasara Sangrah Volume II

MALAYALAM

1. Vidyamadhaviyam
2. Sarvasadharana Cikitsa.
3. Visa Cikitsa and Visappattusaram

SANSKRIT

1. Nyayaratnam with the commentary Dyutimalika
2. Cikitsatilakam
3. Nrttaratnavali

The Government in their G.O.Ms. No. 1820 Education dated 4—8—1952 sanctioned a grant of rupees 9,000 to the Dr. V. Swaminatha Iyer's Library, Adyar, towards the publication of the following Tamil Manuscripts as part of the "Madras Government Oriental Series."

1. Tiruvacaka Vyakhyanam.
2. Mahabharata Cudamani

The following books were taken up for publication during 1953-54.

TAMIL

1. Saptarisinadi Volume III (MITHUNA LAGNA).
2. Temple Inscriptions of South India Volume II

TELUGU

1. Bharathasarasangraha

KANNADA

1. Manmathavijaya

MALAYALAM

1. Jnanapiyusam

SANSKRIT

1. Daivajnabharana

PERSIAN

1. Baharisthan Sukhan

It is hoped that the publication of most of the important manuscripts will be completed within the next few years.

Some of the manuscripts taken-up for publication are represented by single copies in the Library and consequently the mistakes that are found in them could not be corrected by comparing them with other copies. The editors have, however, tried their best to suggest correct readings. The wrong readings are given in round brackets and correct readings have been suggested in square brackets. When different readings are found, they have been given in the footnotes except in the case of a few books in which the correct readings have been given in the footnote or incorporated in the text itself.

The Government of Madras have to be thanked for financing the entire scheme of publication although there is a drive for economy in all the departments. My thanks are due to the members of the Expert Committee who spared no pains in selecting the manuscripts for publication. I have also to thank the various editors, who are experts in their own field, for readily consenting to edit the manuscripts and see them through the press. The various Presses that have co-operated in printing the manuscripts in the best manner possible also deserve my thanks for the patience exhibited by them in carrying out the corrections made in the proofs.

This edition is based on a paper manuscript preserved in the Government Oriental Manuscripts Library, Madras, under D. No. 294. The subject dealt with in this work is on erotics and it is written in classical campu style of a very high order. The author is Malla or Mallana whose date is about 1400 A-D according to Kavicarita.

Govt. Oriental Manuscripts Library,
Madras.

T. CHANDRASEKHARAN,
General Editor,

ಮುನ್ನುಡಿ

೧. ಮುದ್ರಣ ವಿಚಾರ

"ಮನ್ಮಥ ವಿಜಯ" ವೆಂಬ ಈ ಗ್ರಂಥವು ಮದ್ರಾಸ್ ಸರ್ಕಾರದ ಪ್ರಾಚೀನಹಸ್ತ ಲಿಖಿತ ಪುಸ್ತಕ ಭಾಂಡಾಗಾರದಲ್ಲಿ(Govt. Oriental Mss. Library) ಸಂಗ್ರಹಿಸಲ್ಪಟ್ಟು ಇಟ್ಟಿರುವ 294 ನಂಬರಿನ ತಾಳಪತ್ರಪ್ರತಿಯ ಆಧಾರದಿಂದ ತಯಾರಿಸಲ್ಪಟ್ಟ (12-2-1922) ಕಾಗದಪ್ರತಿ ಒಂದು ಮತ್ತು ಇದೇ ಲೈಬ್ರರಿಯ ಕ್ಯೂರೇಟರವರು ತಯಾರಿಸಿ ನನಗೆ ಕಳುಹಿಸಿ ಕೊಟ್ಟ ಕಾಗದದ ಪ್ರತಿಯೊಂದು ಇವೆರಡರ ಆಧಾರದಿಂದ ಮುದ್ರಿಸಲ್ಪಟ್ಟಿದೆ. ತಾಳಪ್ರತಿಯ ಓಲೆ ಗಳಲ್ಲಿ ಹಲವು ನುಸಿಹುಳುಗಳ ಬಾಯಿಗೆ ತುತ್ತಾಗಿ ಪುಡಿಪುಡಿಯಾಗಿ ಹೋಗಿವೆ. ಇದರಿಂದ ಗ್ರಂಥ ಪಾತವು ಹಲವೆಡೆಗಳಲ್ಲಿ ವಿಶೇಷವಾಗಿ ಕಾಣಬರುವುದು. ಇಷ್ಟಾದರೂ ಗ್ರಂಥವು ಮಾತ್ರ ಸಮಗ್ರ ವಾಗಿ ದೊರೆತಿರುವುದು ಕನ್ನಡಿಗರ ಭಾಗ್ಯೋದಯವೇ ಸರಿ. ಬೇರೆ ಮತ್ತೊಂದು ಪ್ರತಿಯು ದೊರಕದೇ ಹೋದುದರಿಂದ ಪ್ರಕೃತಮುದ್ರಿತ ಗ್ರಂಥದಲ್ಲಿ ಗ್ರಂಥಪಾತವೂ, ಅಶುದ್ಧಪಾಠಗಳೂ ಅನಿವಾರ್ಯವಾಗಿ ನಿಲ್ಲುವಂತಾಗಿವೆ. ಇಂಥಹ ಅಪೂರ್ವಗ್ರಂಥದ ಪ್ರಯೋಜನವು ಕನ್ನಡಿಗರಿಗೆ ದೊರಕಿದಷ್ಟು ಯಥಾಲಾಭವೆಂದು ನಿಶ್ಚಯಿಸಿ ಈ ಗ್ರಂಥವನ್ನು ಯಥಾಲಬ್ಧವಾಗಿ ಮುದ್ರಿಸಿದೆ.

೨. ವಿಷಯ ವಿಚಾರ

ಪ್ರಪಂಚದಲ್ಲಿ ತುಂಬಿರುವ ಪ್ರಾಣಿಜಾತದಲ್ಲಿ ಜ್ಞಾನವೆಂಬ ಅಮೂಲ್ಯವಸ್ತುವನ್ನು ಹೊಂದಿ ರುವ ಮನುಷ್ಯನೇ ಅತ್ಯುತ್ತಮನು. "ಜ್ಞಾನೇನ ಹೀನಃ ಪಶುಭಿಸ್ಸಮಾನಃ"ಎಂದು ಜ್ಞಾನಹೀನನನ್ನು ಪಶುಸಮಾನನೆಂದು ಪ್ರಾಜ್ಞರು ನಿಂದಿಸಿರುವರು. ಮನುಷ್ಯರಲ್ಲಿಯೂ ಸಕಲಶಾಸ್ತ್ರಾರ್ಥಗಳನ್ನು ತಿಳಿದ ಪಂಡಿತನು ಸರ್ವೋತ್ತಮನು. ಹೀಗೆ ಸಕಲ ಶಾಸ್ತ್ರಾರ್ಥಗಳನ್ನು ತಿಳಿದ ಪಂಡಿತರು ಮನು ಷ್ಯನಾಗಿ ಜನ್ಮವೆತ್ತಿದವನು ತನ್ನ ಜನ್ಮವನ್ನು ಸಾರ್ಥಕಗೊಳಿಸಲು ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಚತುರ್ವಿಧಪುರುಷಾರ್ಥಗಳನ್ನು ಆರ್ಜಿಸಬೇಕು. ಹಾಗೆ ನಾಲ್ಕು ಪುರುಷಾರ್ಥ ಗಳನ್ನು ಸಾಧಿಸಲು ಶಕ್ಯವಲ್ಲದಿದ್ದರೂ ಕೊನೆಯಪಕ್ಷ ಯಾವುದಾದರೊಂದನ್ನಾದರೂ ಸಂಪಾದಿಸಲೇ ಬೇಕು. ಇಲ್ಲವಾದರೆ ಅವನ ಹುಟ್ಟು ಆಡಿನ ಕುತ್ತಿಗೆಯಲ್ಲಿರುವ ಮೊಲೆಗಳಂತೆ ನಿರರ್ಥಕವೆಂದು ವಿಸ್ತರವಾಗಿ ಶಾಸ್ತ್ರಗಳ ಮೂಲಕ ಉದ್ಘೋಷಿಸಿರುವರು.

> ಧರ್ಮಾರ್ಥಕಾಮಮೋಕ್ಷಾಣಾಂ ಯಸ್ಯೈಕೋಽಪಿ ನ ವಿದ್ಯತೇ ।
> ಅಜಾಗಳಸ್ತನಸ್ಯೇವ ತಸ್ಯ ಜನ್ಮ ನಿರರ್ಥಕಂ ॥

ಎಂಬ ವಾಕ್ಯವು ಈ ವಿಷಯವನ್ನು ಸ್ಥಿರಗೊಳಿಸುವುದು.

ಈ ಪುರುಷಾರ್ಥಗಳಲ್ಲಿ ಧರ್ಮವೆಂಬುದರ ಸ್ವರೂಪವು ಹದಿನೆಂಟು ಧರ್ಮಶಾಸ್ತ್ರಗಳಲ್ಲಿ ವಿಸ್ತರವಾಗಿ (ಅಷ್ಟಾದಶಸ್ಮೃತಿಗಳಲ್ಲಿ) ವಿವರಿಸಲ್ಪಟ್ಟಿದೆ. ಹಾಗೆಯೇ ಅರ್ಥದ ಸ್ವರೂಪಾದಿಗಳು ಚಾಣಕ್ಯನೀತಿ ಮೊದಲಾದ ಅರ್ಥಶಾಸ್ತ್ರಗಳಲ್ಲಿ ವಿವರವಾಗಿ ನಿರೂಪಿತವಾಗಿದೆ. ಮೋಕ್ಷಶಾಸ್ತ್ರವೂ ಕೂಡ ವೇದವ್ಯಾಸಮಹರ್ಷಿಪ್ರಣೀತವಾದ ಶಾರೀರಕ ಮೀಮಾಂಸಾಶಾಸ್ತ್ರದಲ್ಲಿ (ಬ್ರಹ್ಮಸೂತ್ರದಲ್ಲಿ) ಪ್ರತಿಪಾದಿತವಾಗಿದೆ. ಈ ಬ್ರಹ್ಮಸೂತ್ರಗಳಿಗೆ ಅದ್ವೈತ ವಿಶಿಷ್ಟಾದ್ವೈತ ದ್ವೈತ ಮತಭೇದದಿಂದ ಮೂರು ಭಾಷ್ಯಗಳೂ, ಅವುಗಳ ವ್ಯಾಖ್ಯಾನಗಳೂ ಹೇರಳವಾಗಿ ಹುಟ್ಟಿವೆ. ಕಾಮಶಾಸ್ತ್ರವೂ

ಕೂಡ ವಾತ್ಸ್ಯಾಯನಮುನಿಪ್ರಣೀತ ಕಾಮಸೂತ್ರಗಳಲ್ಲಿ ವಿಶೇಷವಾಗಿ ಪ್ರತಿಪಾದಿತವಾಗಿದೆ. ಅಲ್ಲದೆ ಈ ಗ್ರಂಥವನ್ನೇ ಅನುಸರಿಸಿ ಸಂಸ್ಕೃತದಲ್ಲಿ ಕೊಕ್ಕೋಕಕೃತ "ರತಿರಹಸ್ಯ"ವೆಂಬ ಗ್ರಂಥವೂ "ರತ್ನಪ್ರದೀಪಿಕಾ" ಎಂಬ ಮತ್ತೊಂದು ಗ್ರಂಥವೂ ಅನಂಗರಂಗ ಮೊದಲಾದ ಇನ್ನೂ ಹಲವು ಗ್ರಂಥಗಳೂ ಇರುವಂತೆ ತಿಳಿಯಬರುವುದು. ಈ ಗ್ರಂಥಗಳೆಲ್ಲವೂ ಸಂಸ್ಕೃತ ಭಾಷೆ (ಗೀರ್ವಾಣ ಭಾಷೆ) ಯಲ್ಲಿ ಬರೆಯಲ್ಪಟ್ಟವೆ.

ಸಾಮಾನ್ಯವಾಗಿ ಕನ್ನಡ ತೆಲುಗು ತಮಿಳು ಮೊದಲಾದ ದೇಶಭಾಷೆಗಳಲ್ಲಿ ಶಾಸ್ತ್ರಗಳೆಲ್ಲವೂ ಸಂಸ್ಕೃತಭಾಷೆಯಿಂದಲೇ ಆರಿಸಲ್ಪಟ್ಟು ಗ್ರಂಥರೂಪದಲ್ಲಿ ಅನುವಾದಮಾಡಲ್ಪಟ್ಟವೆ. ಈಗ ಇಲ್ಲಿ ಮುದ್ರಿತವಾಗಿರುವ ಕನ್ನಡಭಾಷೆಯ "ಮನ್ಮಥವಿಜಯ"ವೆಂಬ ಈ ಗ್ರಂಥವೂ ಕೂಡ ವಿಶೇಷವಾಗಿ ಕೊಕ್ಕೋಕಕೃತ ರತಿರಹಸ್ಯವನ್ನೇ ಅನುವಾದಮಾಡಿರುವಂತೆ ತೋರಿಬರುವುದರಿಂದ ಇವೆರಡರಲ್ಲಿಯೂ ಸಮಾನವಾಗಿರುವ ಶ್ಲೋಕಗಳನ್ನು ಪರಿಶಿಷ್ಟ ಒಂದರಲ್ಲಿ ಕೊಟ್ಟಿದೆ.

೨. ಕವಿಕಾವ್ಯವಿಚಾರ

(a) ಕವಿಯವಿಚಾರ—ಈ ಮನ್ಮಥ ವಿಜಯವೆಂಬ ಈ ಗ್ರಂಥವನ್ನು ಬರೆದ ಕವಿಯು ತನ್ನ ಹೆಸರು "ಮಲ್ಲ" ನೆಂದು ಪೀಠಿಕಾಪ್ರಕರಣದಲ್ಲಿ (ಪ. ೧೧, ೧೨, ೧೩, ೧೪) ಈ ಪದ್ಯಗಳಲ್ಲಿ ಹೇಳಿಕೊಂಡಿರುವನು. ಆದರೆ ಈ ಗ್ರಂಥದ ಹೆಸರನ್ನೂ, ಕರ್ತೃವಿನ ಹೆಸರನ್ನೂ ಹೇಳುವ ಸಂದರ್ಭದಲ್ಲಿ ಇದೇ ಪೀಠಿಕಾಪ್ರಕರಣದ (ಪ. ೧೫) ಪದ್ಯದಲ್ಲಿಯೂ, ಪ್ರತಿಯೊಂದು ಆಶ್ವಾಸದ ಅಂತ್ಯ ಗದ್ಯಗಳಲ್ಲಿಯೂ "ಲಕ್ಷಣ ಕವಿ" ಎಂದು ಹೇಳಿಕೊಂಡಿರುವನು. ಇದು ಇವನ ಬಿರುದಾಗಿರಬಹುದೇ ಹೊರತು, ಹುಟ್ಟು ಹೆಸರಲ್ಲ.

ಈ ಕವಿಯು ಗ್ರಂಥಾದಿಯ ಮಂಗಳಪ್ರಕರಣದಲ್ಲಿ ಮೊತ್ತಮೊದಲು ಪ್ರತಿಪಾದ್ಯವಿಷಯಕ್ಕೆ (ಕಾಮಶಾಸ್ತ್ರ) ತಕ್ಕಂತೆ ಉಚಿತದೇವತೆಯಾದ ಮನ್ಮಥನನ್ನು ಸ್ತುತಿಸಿ, ಬಳಿಕ ಈಶ್ವರ, ಬ್ರಹ್ಮ, ವಿಷ್ಣು ಎಂಬ ತ್ರಿಮೂರ್ತಿಗಳನ್ನು ಸ್ತುತಿಸಿರುವುದರಿಂದ ಅದ್ವೈತಮತಕ್ಕೆ ಸೇರಿದವನೆಂದು ಊಹಿಸಬಹುದು. ಹೀಗೆ ತ್ರಿಮೂರ್ತಿಗಳನ್ನು ಸ್ತುತಿಸಿದ ಬಳಿಕ ಆದಿಶಕ್ತಿ ಗಣಪತಿಗಳನ್ನು ಸ್ತುತಿಸಿರುವುದರಿಂದ ಈಶ್ವರಪಂಚಾಯತನಕ್ಕೆ ಸೇರಿದವನೆಂದು ಹೇಳಬಹುದು (ಆದರೆ ಪಂಚಾಯತನದಲ್ಲಿ ಸೂರ್ಯನನ್ನು ಬಿಟ್ಟು. ಬ್ರಹ್ಮನನ್ನು ಸೇರಿಸಿಕೊಂಡಿರುವನು.)

ಈ ಕವಿಯು ಪೂರ್ವಕವಿಗಳಲ್ಲಿ ಮನಸಿಜ (ಸು. ಕ್ರಿ.ಶ.1000) ಸುಜನೋತ್ತಂಸ ಅಥವಾ (ಬೊಪ್ಪಣಪಂಡಿತ (ಸು. 1180) ರುದ್ರಾಂಕ (1180) ಪೊನ್ನ (ಸು. 951) II ನಾಗವರ್ಮ (1145) ಇವರನ್ನು ಸ್ತುತಿಸಿರುವುದಲ್ಲದೆ ಒಂದು ಪದ್ಯದಲ್ಲಿ ಕನ್ನಡವ್ಯಾಕರಣ (ಶಬ್ದಮಣಿದರ್ಪಣ) ಕರ್ತೃವಾದ ಕೇಶಿರಾಜನನ್ನು (ಸು. 1260) ಸ್ತುತಿಸಿರುವುದರಿಂದ ಈ ಕವಿಗಳಿಗಿಂತ ಈಚಿನವನೆಂದು ಹೇಳಬಹುದು. ಮೇಲೆಹೇಳಿದ ಕವಿಗಳಲ್ಲಿ ಕೇಶಿರಾಜನ ಕಾಲ ಕ್ರಿ.ಶ. 1260 ಆಗಿರುವುದರಿಂದ ಈ ಕವಿಯ ಕಾಲವೂ 1260 ಕ್ಕೆ ಈಚೆ ಇರಬೇಕು. ಈ ಕವಿಯನ್ನು ಇವನ ಹಿಂದಣವರಾರೂ ತಂತಮ್ಮ ಗ್ರಂಥಗಳಲ್ಲಿ ಹೊಗಳದಿರುವುದರಿಂದ ಇವನು ಯಾವ ಕಾಲಕ್ಕೆ ಮೊದಲು ಇದ್ದನೆಂದು ಊಹಿಸಲು ಶಕ್ಯವಿಲ್ಲ. ಆದರೆ ಈ ಗ್ರಂಥದಲ್ಲಿ ಕೆಲವು ಹೊಸಗನ್ನಡ ಪ್ರಯೋಗಗಳಿರುವುದರಿಂದ ಹೊಸಗನ್ನಡವು ವಿಶೇಷವಾಗಿ ಬಳಕೆಗೆ ಬಂದ 14 ನೆಯ ಶತಮಾನದ ಆದಿಯಲ್ಲಿ

ಈ ಕವಿಯು ಇದ್ದನೆಂದು ಊಹಿಸಬಹುದು. ಕವಿಚರಿತ್ರಕಾರರೂ ಇವನ ಕಾಲವನ್ನು 1400 ಎಂದು ಬರೆದು ಅದಕ್ಕೆ ಯಾವಕಾರಣವನ್ನೂ ಕೊಟ್ಟಿಲ್ಲ.

ಕವಿಯು ಪೀಠಿಕೆಯ ಪದ್ಯ ೧೧ ರಲ್ಲಿ ವೇದಶಾಸ್ತ್ರೇತಿಹಾಸಾದಿಗಳಲ್ಲಿ ಪ್ರಸಿದ್ಧನಾಗಿದ್ದ ಪುಟ್ಟಣಾಂಕ ಪಂಡಿತನು ತನ್ನ ವಿದ್ಯಾಗುರುವೆಂದು ಹೇಳಿಕೊಂಡಿರುವುದರಿಂದ ಇಂತಹ ಮಹಾಪಂಡಿತನ ಶಿಷ್ಯನಾದ ತಾನೂ ಮಹಾಪಂಡಿತನೆಂಬುದನ್ನು ವ್ಯಙ್ಗ್ಯಮರ್ಯಾದೆಯಿಂದ ಹೇಳಿಕೊಂಡಿರುವನು,

(b) ಕಾವ್ಯವಿಚಾರ

ಈ ಗ್ರಂಥಕ್ಕೆ ತಾಳಪ್ರತಿಯ ಆದಿಯಲ್ಲಿ "ಮನ್ಮಥವಿಜಯ" ವೆಂದು ಹೆಸರನ್ನು ಬರೆದಿರುವುದರಿಂದ ಆ ಹೆಸರನ್ನೇ ಇಲ್ಲಿ ಕೊಟ್ಟಿದೆ. ಆದರೆ ಕವಿಯು ಇದೇ ಗ್ರಂಥದ ಪೀಠಿಕಾಪ್ರಕರಣದ (ಪ್ರಥಮಾಶ್ವಾಸದ) 15 ನೆಯ ಪದ್ಯದಲ್ಲಿ

ಸ್ಮರವಿಜಯಂ ಕೃತಿವೆಸರಾ |
ದರಿಪರ್ ಶೃಂಗಾರಸಾರಕೋವಿದರೊಲವಿಂ ||
ವಿರಚಿಸಿದಂ ಲಕ್ಷಣಕವಿ |
ವರನೆನೆ ಮಿಗೆ ಮಚ್ಚಿ ಕೂರ್ತು ಪೊಗಟದರೊಳರೇ || ೧೫ ||

ಎಂದು ಗ್ರಂಥಕ್ಕೆ 'ಸ್ಮರವಿಜಯ' ಎಂದು ಹೇಳಿಕೊಂಡಿರುವುದರಿಂದ ಸ್ಮರವಿಜಯವೆಂದೂ ಹೇಳಬಹುದು. (ಸ್ಮರ ಮತ್ತು ಮದನ ಇವೆರಡು ಶಬ್ದಗಳೂ ಪರ್ಯಾಯಪದಗಳಾಗಿರುವುದರಿಂದ ಇವೆರಡು ಹೆಸರುಗಳಿಗೂ ಯಾವ ವ್ಯತ್ಯಾಸವೂ ತೋರುವುದಿಲ್ಲ)

ಇದು ೧೮ ಆಶ್ವಾಸಗಳನ್ನೊಳಕೊಂಡಿರುವ ಒಂದು ಚಂಪೂಗ್ರಂಥವಾಗಿದೆ. (ಗದ್ಯಗಳು ಅಷ್ಟು ಹೆಚ್ಚಾಗಿಲ್ಲ. ವಿರಳವಾಗಿವೆ—ತುಂಬಾ ಕಡಿಮೆಯಾಗಿವೆ) ಕವಿಯು ಆದಿಯಲ್ಲಿ ಮೊದಲನೆಯ ಆಶ್ವಾಸದಲ್ಲಿ (ಪೀಠಿಕಾಪ್ರಕರಣ) ಮನ್ಮಥನನ್ನೂ, ಬಳಿಕ ಕ್ರಮವಾಗಿ ಈಶ್ವರ ವಿಷ್ಣು ಬ್ರಹ್ಮ ಆದಿಶಕ್ತಿ, ಶಕ್ತಿಗಣಪ, ಸರಸ್ವತಿ ಇವರನ್ನೂ ಸ್ತುತಿಸಿ ಬಳಿಕ ಸಂಸ್ಕೃತ ಮಹಾಕವಿಗಳಾದ ಕಾಳಿದಾಸ ಬಾಣಮಯೂರರನ್ನೂ, ಅಗ್ಗಳದೇವ, ನೇಮಿಚಂದ್ರ, ಮನಸಿಜ, ಸುಜನೋತ್ತಂಸ, ರುದ್ರಾಂಕ, ಪೊನ್ನ, ಕೇಶಿರಾಜ ಈ ಕನ್ನಡ ಕವಿಗಳನ್ನೂ ಸ್ತುತಿಸಿ, ಸಕಲಶಾಸ್ತ್ರಜ್ಞನಾದ ಪುಟ್ಟಣಾಂಕಪಂಡಿತನು ತನ್ನ ವಿದ್ಯಾಗುರು ಎಂದು ಹೇಳಿ ತನ್ನ ಕವಿತ್ವದ ವಾಗ್ಧೋರಣೆಯನ್ನು ಶ್ಲಾಘಿಸಿ, ಕುಕವಿಗಳನ್ನು ನಿಂದಿಸಿ ತಾನುಮಾಡುವ ಕಾವ್ಯದ ಹೆಸರನ್ನೂ, ತತ್ಕರ್ತೃವಿನ (ತನ್ನ) ಹೆಸರನ್ನೂ ಹೇಳಿ ಅಂಗಜಕಳೆಯ ಸಾರತೆಯನ್ನು ಶ್ಲಾಘಿಸಿ, "ಈ ಅಂಗಜಶಾಸ್ತ್ರವನ್ನು ವರ್ಣಿಸಲು ಬ್ರಹ್ಮನಿಂದಲೂ ತೀರದಿರುವಾಗ ನೀನು ಹೇಗೆ ವಿವರಿಸುವೆ? ಎಂದು ತನ್ನನ್ನು ಆಕ್ಷೇಪಿಸಕೂಡದು, ಇದನ್ನು ಕೇಳಿದವರೆಲ್ಲರೂ ಮೆಚ್ಚಿ ಸಂತೋಷದಿಂದ ಆ ಆ ಎಂದು ಹೇಗೆ ಶ್ಲಾಘಿಸಬೇಕೋ" ಹಾಗೆ ಹೇಳುವೆನೆಂದು ಗ್ರಂಥರಚನಾವಿಷಯಿಕ ಪ್ರತಿಜ್ಞೆಯನ್ನು ಮಾಡಿ, ಪುರುಷಾರ್ಥಗಳಲ್ಲಿ ಕಾಮವೇ ಶ್ರೇಷ್ಠವೆಂದು (ಕಾಮದಿಂದಗ್ಗಳಸಾರತತ್ವಮಿಲ್ಲವೆಂದು) ಪ್ರತಿಪಾದಿಸಿ, ಸಮುಚಿತ ಕಾಮರಸಾನುಭವಕ್ಕೆ ಮನುಷ್ಯಜನ್ಮವು ಆವಶ್ಯಕವೆಂದು ಪ್ರತಿಪಾದಿಸಿ ಆ ಮನುಷ್ಯನು ಸ್ತ್ರೀಗರ್ಭದಲ್ಲಿ ನೆಲಸಿ ಬಳೆದು ಶಿಶುವಾಗಿ ಗರ್ಭದಿಂದ ಹೊರಗೆ ಬರುವ ಸ್ಥಿತಿಯನ್ನೂ ಕಾಲವನ್ನೂ ತಿಳಿಸಿ, ಸ್ತ್ರೀಪುರುಷ ನಪುಂಸಕರಾಗಿ ಹುಟ್ಟುವುದಕ್ಕೆ ಕಾರಣವನ್ನು

ನಿರೂಪಿಸಿ ಯೌವನಸ್ಥರಾದ ದಂಪತಿಗಳು ಕಾಮಸಾಮ್ರಾಜ್ಯವನ್ನು ಉಚಿತರೀತಿಯಲ್ಲಿ ಅನುಭವಿಸಲು ಆವಶ್ಯಕವಾಗಿ ತಿಳಿಯಬೇಕಾಗಿರುವ ಸ್ತ್ರೀಪುರುಷರ ಜಾತಿಕಳಾಂಶದೇಶಜಾದಿ ವಿಷಯಗಳನ್ನು ಕ್ರಮವಾಗಿ ಈ ಶಾಸ್ತ್ರದಲ್ಲಿ ನಿರೂಪಿಸಿರುವೆನೆಂದು ಹೇಳಿ ತನ್ನ ಬಿರುದುಮೊದಲಾದುವನ್ನು ತಿಳಿಸುವ ಆಶ್ವಾಸಾಂತ್ಯ ಗದ್ಯವನ್ನು ನಿರವಿಸಿ ಪೀಠಿಕಾರೂಪವಾದ ಈ ಪ್ರಥಮಾಶ್ವಾಸವನ್ನುಮುಗಿಸಿರುವನು.

ಎರಡನೆಯ ಆಶ್ವಾಸದಲ್ಲಿ ಅಬಲೆಯರ ಭೇದಗಳನ್ನೂ, ತತ್ಕಾಂತರ ತೆರವನ್ನೂ ಹೇಳುವೆನೆಂದು ಆರಂಭಿಸಿ ಪದ್ಮಿನಿ ಮೊದಲಾದ ನಾಲ್ಕುಜಾತಿಯ ಸ್ತ್ರೀಯರ ಹೆಸರು, ಅವರ ಲಕ್ಷಣ-ಇವುಗಳನ್ನು ವಿವರಿಸಿ, ಆಯಾ ಜಾತಿಯ ಸ್ತ್ರೀಯರು ಪ್ರೀತಿಸುವ ರತಿಬಂಧಗಳನ್ನೂ, ರತಿಗೆಳಸುವ ಭಾವಪ್ರಕಾರಗಳನ್ನೂ ಹೇಳಿ. ನಾಲ್ಕುಜಾತಿಯ ಸ್ತ್ರೀಯರಿಗೆ ತಕ್ಕ ಮದನ ಚಿತ್ರಕಾದಿ ನಾಲ್ಕು ಬಗೆಯ ನಾಯಕರ ಹೆಸರನ್ನೂ, ಅವರ ಲಕ್ಷಣಗಳನ್ನೂ ವಿವರಿಸಿ, ಜಾತ್ಯಧಿಕಾರವೆಂಬ ಈ ಎರಡನೆಯ ಆಶ್ವಾಸವನ್ನು ಉಪಸಂಹರಿಸಿರುವನು.

ಮೂರನೆಯ ಆಶ್ವಾಸದಲ್ಲಿ ಸ್ತ್ರೀಯರ ಅಂಗಗಳಲ್ಲಿ ಶುದ್ಧಪಕ್ಷದ ಪಾಡ್ಯವಾದಿಯಾಗಿ ಅಮಾವಾಸ್ಯೆಯ ವರೆಗೆ ತೋರಿಬರುವ ಚಂದ್ರಕಳಾಂಶವನ್ನೂ, ಮನ್ಮಥನ ಸಮ್ಮೋಹನಾದಿ ಪಂಚಬಾಣಗಳನ್ನೂ ಮನ್ಮಥನು ಹಿಂದೆ ಯೋಗಸಮಾಧಿಯಲ್ಲಿದ್ದ ಶಿವನನ್ನು ಗೆಲ್ಲಲು ಸಿದ್ಧಪಡಿಸಿಕೊಂಡಿದ್ದ ಕುಂದ, ಸಿಂಧುವಾರ ಮೊದಲಾದ ಹದಿನಾರುಬಗೆಯ ಅಸ್ತ್ರರೂಪ ಪುಷ್ಪಗಳ ಹೆಸರನ್ನೂ, ಕೊನೆಗೆ ಮನ್ಮಥನು ಅವುಗಳೊಳಗೆ ಕರ್ನೆಯ್ದಿಲ್ ಮೊದಲಾದ ಐದುಬಗೆಯ ಪುಷ್ಪಗಳೇ ತನ್ನಜಗಜ್ಜಯಕ್ಕೆ ಸಾಕೆಂದು ನಿಶ್ಚಯಿಸಿ ಸ್ವೀಕರಿಸಿದುದನ್ನೂ ಹೇಳಿ ಮತ್ತೆ ಮತಾಂತರದಿಂದ ಚಿತ್ತಜಕಳಾವಿವರಣವನ್ನೂ ತಿಳಿಸಿ ಶುಕ್ಲಪಕ್ಷದ ಪಾಡ್ಯಮೊದಲಾಗಿ ಕೃಷ್ಣಪಕ್ಷದ ಅಮಾವಾಸ್ಯೆಯವರೆಗೆ ಕಾಮಕಳಾದ್ರವಣ ಪ್ರಸಕ್ತಿಯನ್ನು ವಿವರಿಸಿ ಕಳಾಧಿಕಾರವೆಂಬ ಈ ಮೂರನೆಯ ಆಶ್ವಾಸವನ್ನು ಉಪಸಂಹರಿಸಿರುವನು.

ನಾಲ್ಕನೆಯ ಆಶ್ವಾಸದಲ್ಲಿ ಕ್ರಮವಾಗಿ ಸುರನರಗಂಧರ್ವ ಮೊದಲಾದ ಹನ್ನೆರಡುಬಗೆಯ ಅಂಶಗಳುಳ್ಳ ಸ್ತ್ರೀಯರ ಸ್ವರೂಪವನ್ನೂ, ಗುಣಗಳನ್ನೂ ವಿವರಿಸಿ ಅಂಶಾಧಿಕಾರವೆಂಬ ಈ ನಾಲ್ಕನೆಯ ಆಶ್ವಾಸವನ್ನು ಉಪಸಂಹರಿಸಿರುವನು

ಐದನೆಯ ಆಶ್ವಾಸದಲ್ಲಿ ಆಂಧ್ರ, ತುಳುವ ಮಲೆಯಾಳ ಮೊದಲಾದ ೫೬ ದೇಶಗಳಲ್ಲಿ ಜನಿಸಿರುವ ಸ್ತ್ರೀಯರ ರೂಪ, ಸ್ವಭಾವ ಗುಣಭಾವ ಕ್ರಿಯೇಂಗಿತಗಳನ್ನು ವಿವರಿಸಿ ದೇಶಜವಿಭಾಗ ಸ್ತ್ರೀವರ್ಣನಾಧಿಕಾರವೆಂಬ ಈ ಐದನೆಯ ಆಶ್ವಾಸವನ್ನು ಮುಗಿಸಿರುವನು.

ಆರನೆಯ ಆಶ್ವಾಸದಲ್ಲಿ ವಾತಪಿತ್ತಶ್ಲೇಷ್ಮ ಪ್ರಕೃತಿಗಳೆಂಬ ಮೂರುಬಗೆಯ ಸ್ತ್ರೀಯರ ರೂಪಸ್ವಭಾವಗುಣಶೀಲಾದಿಗಳನ್ನೂ, ಮಿಶ್ರಪ್ರಕೃತಿಗಳ ಲಕ್ಷಣವನ್ನೂ ವಿವರಿಸಿ ಪ್ರಕೃತಿಭೇದ ವರ್ಣನಾಧಿಕಾರವೆಂಬ ಈ ಏಳನೆಯ ಆಶ್ವಾಸವನ್ನು ಮುಗಿಸಿರುವನು.

ಎಂಟನೆಯ ಆಶ್ವಾಸದಲ್ಲಿ ಅಭ್ಯಸಜನ, ಸದೃಶಜ ಮೊದಲಾದ ಸ್ತ್ರೀಯರ ನಾಲ್ಕುಬಗೆಯ ಮನಸ್ಸುಖ ಪ್ರೀತಿಗಳನ್ನುವಿವರಿಸಿ ಕೂಟದಲ್ಲಿ ಅತಿಸೌಖ್ಯವನ್ನು ಕೊಡುವ ಸ್ತ್ರೀಯರ ಸ್ವಭಾವವನ್ನು ವಿವರಿಸಿ ಅನುರಾಗವಿಲ್ಲದಿರುವ ಮತ್ತು ವಿರಕ್ತಿಯುಳ್ಳ ಸ್ತ್ರೀಯರ ಹತ್ತುಬಗೆಯ ಅವಸ್ಥೆಗಳನ್ನೂ ವಿವರಿಸಿ ಸ್ತ್ರೀಯರ ಮೋಹಭಾವೇಂಗಿತ ಸ್ವರೂಪವು ಅಪರಿಮಿತವಾಗಿರುವುದರಿಂದ ತನಗೆ ತಿಳಿದ

ಷ್ಟನ್ನು ಇಲ್ಲಿ ವಿವರಿಸಿರುವೆನು. ಉಳಿದುವನ್ನು ಕಾಮಕಲಾಪಂಡಿತರು ಊಹಿಸಿಕೊಳ್ಳುವುದೆಂದು ಮೋಹಭಾವೇಂಗಿತವರ್ಣನಾಧಿಕಾರವೆಂಬ ಈ ಎಂಟನೆಯ ಆಶ್ವಾಸವನ್ನು ಉಪಸಂಹರಿಸಿರುವನು.

ಒಂಬತ್ತನೆಯ ಆಶ್ವಾಸದಲ್ಲಿ ಸ್ತ್ರೀಪುರುಷರ ಗುಹ್ಯೇಂದ್ರಿಯದ ಪ್ರಮಾಣವನ್ನನುಸರಿಸಿ ಶಶ ವೃಷ ಹಯರೆಂಬ ಮೂರುಬಗೆಯ ಪುರುಷರನ್ನೂ, ಕುರಂಗಿ ಹಯ ಹಸ್ತಿ–ಗಳೆಂಬ ಮೂರು ಬಗೆಯ ಸ್ತ್ರೀಯರನ್ನೂ ತಿಳಿಸಿ ಈ ಎರಡುಬಗೆಯ ಸ್ತ್ರೀಪುರುಷರಿಗೆ ಸಮಾನುಲೋಮವಿಲೋಮಗಳಿಂದ ಸಂಭವಿಸಬಹುದಾದ ಒಂಬತ್ತುಬಗೆಯ ಸುರತವಿಶೇಷಗಳನ್ನೂ, ಲಘು ಮಧ್ಯ ಚಿರಗಳೆಂಬ ಮೂರುಬಗೆಯ ಕಾಲವಿಶೇಷಗಳನ್ನೂ, ಸಮಾನ, ಉಚ್ಚ, ನೀಚ ಅತ್ಯುಚ್ಚ ಎಂಬ ನಾಲ್ಕುಬಗೆಯ ಸುರತಕ್ರಮವನ್ನೂ ವಿವರಿಸಿ ಹಿಂದೆ ಹೇಳಿದ ೯ ಬಗೆಯ ಸುರತಗಳೂ ಪ್ರಮಾಣ, ಕಾಲ, ವೇಗಗಳನ್ನನುಸರಿಸಿ ೨೭ ಬಗೆಯಾಗುವುವೆಂದು ಹೇಳಿ ಪ್ರಮಾಣಕಾಲವೇಗಕ್ರಮಾಧಿಕಾರವೆಂಬ ಈ ಒಂಬತ್ತನೆಯ ಆಶ್ವಾಸವನ್ನು ಕೊನೆಗಾಣಿಸಿರುವನು.

ಹತ್ತನೆಯ ಆಶ್ವಾಸದಲ್ಲಿ ರತಿಗೇಹದ ಸ್ವರೂಪವನ್ನೂ, ರತಿಕೇಳಿಗೆ ತಕ್ಕ ದೇಶಸಾಮಗ್ರಿಗಳನ್ನೂ, ಪೆಣ್ಗೂಟಕ್ಕೆ ತಕ್ಕ ಕಾಂತನ (ನಾಯಕನ) ಸ್ವಭಾವಗುಣಶೀಲಾದಿಗಳನ್ನೂ, ಆತನ ಸಹಾಯಕ್ಕೆ ಒದಗುವ ನಾಗರಿಕ ಮೊದಲಾದ ನಾಲ್ಕುಬಗೆಯ ನರ್ಮಸಚಿವರ ಗುಣಶೀಲಸ್ವಭಾವಾದಿಗಳನ್ನೂ, ನಾಯಕನು ಮಾಡತಕ್ಕ ವಿನೋದಗೋಷ್ಠಿಯ ಕ್ರಮವನ್ನೂ, ಸ್ವಾಧೀನಜವಿರೋಧಾದಿ ನಾಲ್ಕುಬಗೆಯ ಗುಹ್ಯನಾಡೀಕ್ರಮದ ವಿವರಣವನ್ನೂ, ಉತ್ತಮಾಧಮಮಧ್ಯಮವೆಂಬ ತ್ರಿವಿಧರತಿಮೂರ್ಛಾಕ್ರಮವನ್ನೂ ತಿಳಿಸಿ ಮರ್ಮಭೇದಾದಿಕಾರವೆಂಬ ಈ ಹತ್ತನೆಯ ಆಶ್ವಾಸವನ್ನು ಮುಗಿಸಿರುವನು.

ಹನ್ನೊಂದನೆಯ ಆಶ್ವಾಸದಲ್ಲಿ ವಿವಿಧ ರತಿಗಳಿಗೂ ಮೊದಲು ನಡೆಸತಕ್ಕ ಅಜಾತರತದಲ್ಲಿ (ರತಕ್ಕೆ ಮೊದಲು) ಸಂಭೂತಗಳಾದ ಸ್ಪೃಷ್ಟಕವೇ ಮೊದಲಾದ ನಾಲ್ಕುಬಗೆಯ ಆಲಿಂಗನಭೇದಗಳನ್ನೂ, ಜಾತರತದಲ್ಲಿ (ರತವು ನಡೆದ ಬಳಿಕ) ಸಂಭೂತಗಳಾದ ಸ್ತನಸಂಶ್ಲೇಷ ಮೊದಲಾದ ಎಂಟುಬಗೆಯ ಆಲಿಂಗನ ಭೇದಗಳನ್ನೂ ವಿವರಿಸಿ ಇವೆರಡೂ ಸೇರಿ ಹನ್ನೆರಡು ಬಗೆಯ ಆಲಿಂಗನಂಗಳೆಂದು ಹೇಳಿ ಆಲಿಂಗನವರ್ಣನಾಧಿಕಾರವೆಂಬ ಈ ಹನ್ನೊಂದನೆಯ ಆಶ್ವಾಸವನ್ನು ಉಪಸಂಹರಿಸಿರುವನು.

ಹನ್ನೆರಡನೆಯ ಆಶ್ವಾಸದಲ್ಲಿ ನಿಮಿತಕ ಮೊದಲಾದ ೧೨ ಬಗೆಯ ಚುಂಬನ ಭೇದಗಳನ್ನು ವಿವರಿಸಿ ಮತ್ತೆ ಸಂಕ್ರಾಂತಂ ಮೊದಲಾಗಿ ನಾಲ್ಕು ಭೇದವೆಂದು ಹೇಳಿ ಅವುಗಳ ಸ್ವರೂಪವನ್ನು ವಿವರಿಸಿ ಈ ಬಗೆಯಲ್ಲಿ ೧೬ ಬಗೆಯ ಚುಂಬನವಿಷಯಗಳನ್ನು ತಿಳಿಸಿದನೆಂದು ಚುಂಬನಾಧಿಕಾರವೆಂಬ ಈ ಹನ್ನೆರಡನೆಯ ಆಶ್ವಾಸವನ್ನು ಕೊನೆಮುಟ್ಟಿಸಿರುವನು.

ಹದಿಮೂರನೆಯ ಆಶ್ವಾಸದಲ್ಲಿ ನಖಕ್ಷತಗಳ ಸ್ವರೂಪವನ್ನೂ ಅವುಗಳ ಹದಿನಾರು ಭೇದಗಳ ಸ್ವರೂಪವನ್ನೂ ಅವುಗಳನ್ನು ಪಡೆಯತಕ್ಕ ತೊಡೆ ನಡು ಮೊದಲಾದ ಅಂಗವಿಭಾಗ ಸ್ಥಳಗಳನ್ನೂ ತಿಳಿಸಿ, ಬಳಿಕ ದಂತಕ್ಷತನಡೆಯುವ ಹಲ್ಲುಗಳ ಸ್ವರೂಪಸ್ವಭಾವಗಳನ್ನೂ, ಹನ್ನೆರಡುಬಗೆಯ ದಂತಕ್ಷತಗಳ ಹೆಸರನ್ನೂ ಹೇಳಿ ನಖದಂತಕ್ಷತಾಧಿಕಾರವೆಂಬ ಈ ೧೩ ನೆಯ ಆಶ್ವಾಸವನ್ನು ಉಪಸಂಹರಿಸಿರುವನು.

ಹದಿನಾಲ್ಕನೆಯ ಆಶ್ವಾಸದಲ್ಲಿ ರತ್ಯಾಸನಬಂಧಗಳೆಂಬ ಒಳ ಬಗೆಗಳಲ್ಲಿ ಕೊಕ್ಕೋಕದಲ್ಲಿ ಹೇಳಿರುವಂತೆ ನಾಲ್ವತ್ತೊಂಬತ್ತನ್ನು ಮಾತ್ರ ವಿವರಿಸಿ, "ತನಗೆ ತಿಳಿದಷ್ಟನ್ನು ವಿವರಿಸಿರುವೆನು, ಉಳಿದುವನ್ನು ಒಳ ಸಂಖ್ಯಾಪ್ರಮಾಣಮಪ್ಪವರೆಗಂ ರತಿಸಾಧಕರ್ ಊಹಿಸಿಕೊಳ್ವ"ದೆಂದು ಹೇಳಿ ರತಾಧಿಕಾರವೆಂಬ ಈ ಹದಿನಾಲ್ಕನೆಯ ಆಶ್ವಾಸವನ್ನು ಉಪಸಂಹರಿಸಿರುವನು.

ಹದಿನಯ್ದನೆಯ ಆಶ್ವಾಸದಲ್ಲಿ ಧರ್ಮಾರ್ಥಕಾಮಪುರುಷಾರ್ಥ ಸಾಧನೆಗಾಗಿ ಪುರುಷನು ಸವರ್ಣಸ್ತ್ರೀಯನ್ನು ವರಿಸಬೇಕೆಂದು ಹೇಳಿ ವರಿಸುವುದಕ್ಕೆ ಯೋಗ್ಯೆಯಾದ ಸಲ್ಲಕ್ಷಣದ ಕನ್ಯೆಯ ಸ್ವರೂಪವನ್ನೂ, ವರಿಸಲಯೋಗ್ಯೆಯಾದ ದುರ್ಲಕ್ಷಣದ ಕನ್ಯೆಯ ಲಕ್ಷಣವನ್ನೂ, ಪತಿವ್ರತೆಯರ ಮತ್ತು ವ್ಯಭಿಚಾರಿಣಿಯರ ಲಕ್ಷಣವನ್ನೂ ತಿಳಿಸಿ ತಂತಮ್ಮ ಭಾರ್ಯೆಯರ (ಅಥವಾ ಅಂತಃಪುರ ಸ್ತ್ರೀಯರ)ರಕ್ಷಣೆಗಾಗಿ ನಿಯೋಗಿಸಲಯೋಗ್ಯನಾದ ಪುರುಷನ ಗುಣಶೀಲಾದಿಗಳನ್ನೂ, ನಿಯೋಗಿಸಲು ಯೋಗ್ಯನಾದ ಪುರುಷನ ಲಕ್ಷಣವನ್ನೂ ಹೇಳಿ ಮನೆವಾಳ್ತಿ ಮಾಡುವ ಹೆಂಗುಸಿನಲ್ಲಿರಬೇಕಾದ ಸುಗುಣಗಳು ಅಗಣಿತವಾಗಿರುವುದರಿಂದ ನಾನು ನನಗೆ ತಿಳಿದಷ್ಟುಮಟ್ಟಿಗೆ ಹೇಳಿರುವೆನೆಂದು ಭಾರ್ಯಾಧಿಕಾರವೆಂಬ ಈ ಆಶ್ವಾಸವನ್ನು ಉಪಸಂಹರಿಸಿರುವನು.

ಹದಿನಾರನೆಯ ಅಧ್ಯಾಯದಲ್ಲಿ ಸ್ತ್ರೀಯರು ಪಾದರವನ್ನು (ಪಾರದರವನ್ನು) ನಡೆಸಲು ಕಾರಣವನ್ನೂ, ಜಾರೆಯರ ಲಕ್ಷಣವನ್ನೂ, ಅಬಲೆಯರು ನೆರೆಯಲೊಡಂಬಡದಿರುವ ಪುರುಷನ ಮತ್ತು ಮೋಹಗೊಳ್ಳುವ ಪುರುಷನ ಸ್ವಭಾವಗುಣಶೀಲಾದಿಗಳನ್ನೂ ಹೇಳಿ, ಸ್ತ್ರೀಯರನ್ನು ನೆರೆಯಲು ಸಾಧಿಸಬೇಕಾದ ಉಪಾಯಗಳನ್ನೂ, ಸ್ತ್ರಿಯರನ್ನೊಲಿಸಲು ಸಹಾಯಕರಾದ ದೂತಿ ಮೊದಲಾದ ಹನ್ನೆರಡುಮಂದಿಯ ಹೆಸರಗಳನ್ನೂ ಹೇಳಿ ಕುಲಟಾಧಿಕಾರವೆಂಬ ಈ ಆಶ್ವಾಸವನ್ನು ಮುಗಿಸಿರುವನು.

ಹದಿನೇಳನೆಯ ಆಶ್ವಾಸದಲ್ಲಿ ಸ್ತ್ರೀಯರು ವೇಶ್ಯೆಯರಾಗಲು ಕಾರಣವನ್ನೂ, ವೇಶ್ಯೆಗೆ ಭೂಷಣಗಳಾದ ಗುಣಗಳನ್ನೂ, ಬೇಟಕ್ಕೆ ಆಗರವಾದ ವಿಷಯಗಳನ್ನೂ, ವೇಶ್ಯೆಯರಲ್ಲಿ ಉತ್ತಮ ಮಧ್ಯಮನೀಚೆಯರ ಲಕ್ಷಣವನ್ನೂ, ಸದ್ವಿಟ ಕುವಿಟರ ಲಕ್ಷಣವನ್ನೂ, ಅನುರಕ್ತೆಯಾದ ಮತ್ತು ಅನನುರಕ್ತೆಯಾದ ವೇಶ್ಯೆಯರ ಗುಣಶೀಲಸ್ವಭಾವಾದಿಗಳನ್ನೂ ಹೇಳಿ ವೇಶ್ಯಾಧಿಕಾರವೆಂಬ ಈ ಆಶ್ವಾಸವನ್ನು ಉಪಸಂಹರಿಸಿರುವನು.

ಹದಿನೆಂಟನೆಯ ಆಶ್ವಾಸದಲ್ಲಿ ಸ್ತ್ರೀಪುರುಷರನ್ನು ಪರಸ್ಪರವಾಗಿ ಬಸಗೆಯ್ಯುವ ಯಂತ್ರ ತಂತ್ರ ಮಂತ್ರ ಔಷಧಿಗಳನ್ನೂ, ವಾಜೀಕರಣ ವಿಷಯವನ್ನೂ ಹೇಳಿ ಕೊನೆಯಲ್ಲಿ ಕವಿಯು ತನ್ನ ಕವಿತ್ವದ ಪ್ರಶಂಸೆಯನ್ನು ಮಾಡಿ ಈ ತನ್ನ ಕಾವ್ಯವು ಚಿರಸ್ಥಾಯಿಯಾಗಿ ಭೂಲೋಕದಲ್ಲಿ ಪಸರಿಸಲಿ ಎಂದು ಆಶೀರ್ವಾದರೂಪವಾದ ಅಂತ್ಯಮಂಗಳದೊಡನೆ ಕಾವ್ಯವನ್ನು ಉಪಸಂಹರಿಸಿರುವನು.

ವಿ ಷ ಯ ಸೂ ಚಿ

ಅ. ಸಂ.	ವಿಷಯಂ	ಪ. ಸಂ.	ಪು. ಸಂ.
I	**ಪ್ರಥಮಾಶ್ವಾಸಂ—ಪೀಠಿಕಾಪ್ರಕರಣಂ**		1—4
	೧. ದೇವತಾಸ್ತುತಿ ರೂಪಮಂಗಳಂ	೧–೭	
	೨. ಪೂರ್ವಕವಿಸ್ತುತಿ	೮–೧೦	
	೩. ಕವಿ(ಮಲ್ಲನ)ಯಗುರು ಮತ್ತು ವಾಗ್ಗುಂಭಾತಿಶಯ	೧೧–೧೨	
	೪. ಕುಕವಿನಿಂದೆ	೧೩–೧೪	
	೫. ಕಾವ್ಯ ಮತ್ತು ಕಾವ್ಯಕರ್ತೃವಿನ (ತನ್ನ) ಪೆಸರ್	೧೫	
	೬. ಮಲ್ಲನ ಈ ಕಾವ್ಯದ ಪೆರ್ಮೆ	೧೬–೧೭	
	೭. ಕಾಮತತ್ವದ ವೆಗ್ಗಳತನ	೧೮	
	೮. ಮನುಷ್ಯಜನ್ಮಾವತರಣಂ	೧೯–೨೧	
	೯. ಪ್ರಕೃತವಿಷಯೋಪಸಂಹಾರಂ	೨೨	
II	**ದ್ವಿತೀಯಾಶ್ವಾಸಂ—ಜಾತ್ಯಧಿಕಾರಂ**		5—7
	೧. ಪದ್ಮಿನಿಮೊದಲಾದ ನಾಲ್ಕುಜಾತಿಯಸ್ತ್ರೀಯರ ಪೆಸರ್	೧–೨	
	೨. ಪದ್ಮಿನಿಜಾತಿಸ್ತ್ರೀಲಕ್ಷಣಂ	೩	
	೩. ಚಿತ್ತಿನಿ(ತ್ರಿಣಿ)ಸ್ತ್ರೀ ,,	೪	
	೪. ಶಂಖಿನಿಸ್ತ್ರೀ ,,	೫	
	೫. ಹಸ್ತಿನಿಸ್ತ್ರೀ ,,	೬	
	೬. ಆಯಾಜಾತಿಗೆ ಪ್ರೀತಿಪುಟ್ಟುವ ತಿಥಿಗಳ್	೭	
	೭. ಈ ನಾಲ್ಕುಜಾತಿಯವರುಂ ಪ್ರೀತಿಸುವರತಿ ಬಂಧಂಗಳ್	೮	
	೮. ನಾಲ್ಕು ಜಾತಿಯವರಿಗೆ ರತೀಚ್ಛೆಯಜಾವಗಳ್	೯–೧೦	
	೯. ಈ ನಾಲ್ಕುಜಾತಿಯವರಿಗೂ ತಕ್ಕ ಮದನಾದಿ ನಾಲ್ಕು ಜಾತಿ ನಾಯಕರ ಕ್ರಮವಾದ ಪೆಸರ್ಗಳ್,	೧೧	
	೧೧. ಮದನನಲಕ್ಷಣಂ	೧೨	
	೧೨. ಚಿತ್ರಕನಲಕ್ಷಣಂ	೧೩	
	೧೩. ದಮನನ ಲಕ್ಷಣಂ	೧೪	
	೧೪. ಮಾಳವನ ಲಕ್ಷಣಂ	೧೫	
	೧೫. ಮಿಶ್ರಜಾತಿ ಲಕ್ಷಣಂ	೧೬	
	೧೬. ಉಪಸಂಹಾರಂ	೧೭	
III	**ತೃತೀಯಾಶ್ವಾಸಂ—ಕಳಾಧಿಕಾರಂ**		8—11
	೧. ಸಿತಾಸಿತಪಕ್ಷದ್ವಯಾದಿಯಾಗಿ ಚಂದ್ರಕಲೆಗಳುದಿಸುವ ಸ್ತ್ರೀಯರ ಅಂಗೋಪಾಂಗಂಗಳ್	೧–೨	

ಆ. ಸಂ.	ವಿಷಯಂ	ಪ. ಸಂ.	ಪು. ಸಂ
	೨. ಪೆಣ್ಣೊಸರುವ ವಿಧಾನಂ	೩	
	೩. ವನಿತೆಯರಂಗದೊಳಗಂಗಜಕಳೆಯ ಶುಕ್ಲಪಕ್ಷದ ಪದಿನೆಯ್ದುರ ಪೆಸರ್ಗಳ್	೪	
	೪. ಬಹುಳಪಕ್ಷದ ಪದಿನೆಯ್ದುರ ಪೆಸರ್ಗಳ್	೫	
	೫. ಮನೋಜಾಂಬು ಪಾಯ್ವ ಉರಃಕಚಾದಿ ಪಂಚಸ್ಥಾನಂಗಳ್	೬	
	೬. ಸಮ್ಮೋಹನ ಮೊದಲಾದ ಸ್ಮರನ ಪಂಚಬಾಣಂಗಳ್	೭	
	೭. ಮನ್ಮಥನಿಗೆ ಅಸ್ತ್ರಗಳಾದ ೧೬ ಬಗೆಯ ಕುಂದಾದಿ ಪುಷ್ಪಂಗಳ್	೮	
	೮. ಈ ಹದಿನಾರರಲ್ಲಿ ಕರ್ನೆಯ್ದಿಲ್ ಮೊದಲಾದ ಐದೇ ಸಾಕೆಂದು ಮನ್ಮಥನು ತೃಪ್ತಿಗೊಂಡುದು	೯	
	೯. ಮತಾಂತರದಲ್ಲಿ ಹೇಳಿರುವ ಚಂದ್ರಕಳೆಯಿರುವ ಷೋಡಶ ಸ್ಥಾನಂಗಳ್	೧೦–೧೧	
	೧೦. ಶುಕ್ಲಪಾಡ್ಯ ಮೊದಲಾಗಿ ಪೂರ್ಣಿಮಾವಾಸ್ಯೆವರೆಗೆ ಕಾಮಜಲದ್ರವಣಕ್ಕೆ ಕ್ರಿಯಾಕಲಾಪಂಗಳ್	೧೨–೨೫	
	೧೧. ಋತುವಾಗಿ ಮಿಂಡ ದಿನಗಳಾರಂಭಿಸಿ ಸ್ತ್ರೀಯಗ ಉಂಗುಟವಿಡಿದು ಚಂದ್ರಕಳೆಯನ್ನು ಲಕ್ಷಿಸಿ ಪೆಣ್ಣೊಲವಂ ಪಡೆವುದು	೨೭	
	೧೨. ಉಪಸಂಹಾರಂ	೨೭	
IV	**ಚತುರ್ಥಾಶ್ವಾಸಂ—ಅಂಶಾಧಿಕಾರಂ**		12—13
	೧. ಸುರನರಮೊದಲಾದ ಪನ್ನೆರಡಂಶಂಗಳ ಪೆಸರ್	೧	
	೨. ಸುರಾಂಶದವಳ ಲಕ್ಷಣಂ	೨	
	೩. ಮನುಷ್ಯಾಂಶದವಳ ಲಕ್ಷಣಂ	೩	
	೪. ಗಂಧರ್ವಾಂಶದವಳ ಲಕ್ಷಣಂ	೪	
	೫. ಯಕ್ಷಾಂಶದವಳ ಲಕ್ಷಣಂ	೫	
	೬. ದೈತ್ಯಾಂಶದವಳ ಲಕ್ಷಣಂ	೬	
	೭. ಮುನ್ಯಂಶದವಳ ಲಕ್ಷಣಂ	೭	
	೮. ಕಿನ್ನರಾಂಶದವಳ ಲಕ್ಷಣಂ	೮	
	೯. ಗರ್ದಭಾಂಶದವಳ ಲಕ್ಷಣಂ	೯	
	೧೦. ಕಾಕಾಂಶದವಳ ಲಕ್ಷಣಂ	೧೦	
	೧೧. ಕಪಿಯಂಶದವಳ ಲಕ್ಷಣಂ	೧೧	
	೧೨. ಭುಜಗಾಂಶದವಳ ಲಕ್ಷಣಂ	ಬಿಟ್ಟುಹೋಗಿದೆ	

ಆ. ಸಂ.	ವಿಷಯಂ	ಪ. ಸಂ.	ಪು. ಸಂ.
	೧೩. ಪಿಶಾಚಾಂಶದವಳ ಲಕ್ಷಣಂ	೧೨	
	೧೪. ಮಿಶ್ರಾಂಶದವರ್ಗಳ ಲಕ್ಷಣಂ	೧೩	
V	**ಪಂಚಮಾಶ್ವಾಸಂ—ದೇಶಜವಿಭಾಗಸ್ತ್ರೀವರ್ಣನಾಧಿಕಾರಂ**		14—20
	೧. ಅಸ್ಪಷ್ಟಾರ್ಥಂ	೧–೨	
	೨. ಆಂಧ್ರಸ್ತ್ರೀಲಕ್ಷಣಂ	೩	
	೩. ತುಳುವಿತಿಯ ಲಕ್ಷಣಂ	೪	
	೪. ಮಲೆಯಾಳದವಳ್	೫	
	೫. ಸ್ಪಷ್ಟವಿಲ್ಲ	೯	
	೬. ಲಾಟದವಳ್	೧೦	
	೭. ಕಾಶ್ಮೀರದವಳ್	೧೧	
	೮. ಸ್ಪಷ್ಟವಿಲ್ಲ	೧೨-೧೪	
	೯. ಪಾಕ? ದೇಶದವಳ್	೧೫	
	೧೦. ಆರ್ಯದವಳ್	೧೬	
	೧೧. ಸ್ಪಷ್ಟವಿಲ್ಲ	೧೭-೧೯	
	೧೨. ಮಗಧದೇಶದವಳ್	೧೯	
	೧೩. ಗುರ್ಜರದೇಶದವಳ್	೨೦	
	೧೪. ಸ್ಪಷ್ಟವಿಲ್ಲ	೨೨	
	೧೫. ಪಾರಶೀಕದೇಶದವಳ್	೨೩	
	೧೬. ಚೀನದೇಶದವಳ್	೨೫	
	೧೭. ವನಚರಾಖ್ಯದೇಶದವಳ್	೭೫	
	೧೮. ವಿಂಧ್ಯಭೂವಲಯದವಳ್	೭೬	
	೧೯. ಉತ್ಕ(ತ್ಪ)ಲ ದೇಶದವಳ್	೨೭	
	೨೦. ವಂಗದೇಶದವಳ್	೨೮	
	೨೧. ಖಸದೇಶದವಳ್	೨೯	
	೨೨. ವೆಂಗಿನಾಡವಳ್	೩೦	
	೨೩. ನೇಪಾಳದವಳ್	೩೧	
	೨೪. ಅಂಗದೇಶದವಳ್	೩೨	
	೨೫. ಚಕ್ರಕೋಟದವಳ್	೩೩	
	೨೬. [1]ಮಗಧದೇಶದವಳ್	೩೪	
	೨೭. ಮುಕುಂದದೇಶಸಂಭವೆ	೩೫	
	೨೮. ಗೌಳದೇಶದವಳ್	೩೬	
	೨೯. ಸೌರಾಷ್ಟ್ರದವಳ್	೩೭	

1. ೧೯ ನೆಯ ಪದ್ಯದಲ್ಲಿಯೂ ಮಗಧದೇಶ ಎಂದಿದೆ.

ಅ. ಸಂ.	ವಿಷಯಂ	ಪ. ಸಂ.	ಪು. ಸಂ.
	೩೦. ಕಾಮಾಕ್ಷಿವಿಹಿತದೇಶದವಳ್	೩೮	
	೩೧. ಪಾರಿಯಾತ್ರದೇಶದವಳ್	೩೯	
	೩೨. ಮಾಳವೀದೇಶದವಳ್	೪೦	
	೩೩. ಆಭೀರದೇಶದವಳ್	೪೦	
	೩೪. ಕಳಿಂಗದೇಶದವಳ್	೪೧	
	೩೫. ಮಥುರೆಯವಳ್	೪೨	
	೩೬. ಬರ್ಬರದವಳ್	೪೩	
	೩೭. ಕೋಶ(ಸ)ಲಾವನಿಯವಳ್	೪೪	
	೩೮. ಮಧ್ಯದೇಶದವಳ್	೪೫	
	೩೯. ಉಪಸಂಹಾರಂ	೪೬	
VI	ಷಷ್ಠಾಶ್ವಾಸಂ—ಪ್ರಕೃತಿಭೇದವರ್ಣನಾಧಿಕಾರಂ		21
	೧. ವಾತ ಪಿತ್ತ ಶ್ಲೇಷ್ಮಗಳೆಂಬ ಮೂರುಬಗೆಯ ಪ್ರಕೃತಿಗಳ್	೧	
	೨. ಮಾರುತ (ವಾತ) ದೇಹಿಯ ಲಕ್ಷಣಂ	೨	
	೩. ಪಿತ್ತಮೊಂದಿರ್ಪದೇಹಿಯ ಲಕ್ಷಣಂ	೩	
	೪. ಕಫಪ್ರಕೃತಿಯ ದೇಹಿಯ ಲಕ್ಷಣಂ	೪	
	೫. ಮಿಶ್ರಪ್ರಕೃತಿಗಳ ಲಕ್ಷಣಂ	೫	
VII	ಸಪ್ತಮಾಶ್ವಾಸಂ—ಪ್ರಾಯೋಪಭೇದವರ್ಣನಾಧಿಕಾರಂ		22—23
	೧. ಸಾಮಾನ್ಯ ಪ್ರತಿಜ್ಞೆ	೧	
	೨. ವಯೋವಿಶೇಷದ ಸಂಖ್ಯೆಗನುಸಾರವಾಗಿ ಬಾಲಿಕೆ, ಮುಗ್ಧೆ, ಮಧ್ಯಮೆ, ಪ್ರೌಢೆ, ವೃದ್ಧೆ ಎಂಬಯ್ವರ ಪೆಸರ್ಗಳ್	೨	
	೩. ಬಾಲಿಕೆಯ ಲಕ್ಷಣಂ	೩	
	೪. ಮುಗ್ಧೆಯ ಲಕ್ಷಣಂ	೪	
	೫. ಮಧ್ಯೆಯ ಲಕ್ಷಣಂ	೫	
	೬. ಪ್ರಗಲ್ಭೆಯ ಲಕ್ಷಣಂ	೬	
	೭. ವೃದ್ಧೆಯ ಲಕ್ಷಣಂ	೭	
	೮. ಈ ಅಯ್ದುಬಗೆಯವರಂ ನಾಯಕಂ ವಶಪಡಿಸಿಕೊಳ್ಳಲಾಚರಿಸಬೇಕಾದ ಕ್ರಮಂ	೮	
VIII	ಅಷ್ಟಮಾಶ್ವಾಸಂ—ಮೋಹಭಾವೇಂಗಿತವರ್ಣನಾಧಿಕಾರಂ		24--26
	೧. ಕಾಂತಾಮನಃಸುಖಪ್ರೀತಿಯ ಚತುರ್ವಿಧಂಗಳ(ಅಭ್ಯಸನಜ, ಸದೃಶಜ, ಅಭಿಮಾನಜ, ವೈಷಯಿಕ) ಪೆಸರ್ಗಳ್	೧	

ಅ. ಸಂ.	ವಿಷಯಂ	ಪ. ಸಂ.	ಪು. ಸಂ.
	೨. ಅಭ್ಯಾಸಜನದ ಲಕ್ಷಣಂ	೨	
	೩. ಸಾದೃಶ್ಯಜದ ಲಕ್ಷಣಂ	೩	
	೪. ಅಭಿಮಾನಸಂಭವದ ಲಕ್ಷಣಂ	೪	
	೫. ವೈಷಯಿಕದ ಲಕ್ಷಣಂ	೫	
	೬. ಸುರತದಲ್ಲಿ ರತಿಸೌಖ್ಯಮನೀವ ಸ್ತ್ರೀಯರ ಲಕ್ಷಣಂಗಳ್	೬	
	೭. ಪ್ರೀತಿಯುಳ್ಳ ಸ್ತ್ರೀಯ ಲಕ್ಷಣಂ	೭-೮	
	೮. ಪ್ರೀತಿಸದ ಸ್ತ್ರೀಯ ಲಕ್ಷಣಂ	೯-೧೧	
	೯. ಪ್ರೀತಿಸಿದ ಸ್ತ್ರೀಯ ಪತ್ತವಸ್ಥೆಗಳ್	೧೨	
	೧೦. ಪ್ರೀತಿಸದ (ವಿರಕ್ತೆಯಾದ) ಸ್ತ್ರೀಯ ಪತ್ತವಸ್ಥೆಗಳ್	೧೩	
	೧೧. ಮೋಹಭಾವೇಂಗಿತಂಗಳ್ ಅಪರಿಮಿತಂ ಎಂದು ಉಪಸಂಹಾರಂ	೧೪	
IX	ನವಮಾಶ್ವಾಸಂ—ಪ್ರಮಾಣವೇಗಕಾಲಕ್ರಮಾಧಿಕಾರಂ		27—29
	೧. ಸಾಮಾನ್ಯ ಪ್ರತಿಜ್ಞೆ	೧	
	೨. ಗುಹ್ಯೇಂದ್ರಿಯ ಪ್ರಮಾಣವನ್ನನುಸರಿಸಿ ಶಶ ವೃಷ ಹಯರೆಂಬ ಮೂವರು ನಾಯಕರ ಮತ್ತು ಹಯ ಹಸ್ತಿ ಹಯರೆಂಬ ಸ್ತ್ರೀಯರ ಗುಹ್ಯಪ್ರಮಾಣಂಗಳ್	೨	
	೩. ಶಶಾದಿಗಳಿಗೆ ಕುರಂಗ್ಯಾದಿಗಳ ಸಮಾನುಲೋಮ ವಿಲೋಮಗತಿಯಿಂದ ೯ ಬಗೆಯ ಸುರತಂಗಳ್	೩	
	೪. ಮಂದ ಮಧ್ಯ ಚಂಡ ಎಂಬ ಮೂರು ಬಗೆಯ ವೇಗವುಳ್ಳವರ ಲಕ್ಷಣಂ	೪	
	೫. ಆದಿ ಮಧ್ಯಾಂತ ಲಘುಮಧ್ಯಚಿರಕಾಲತ್ರಯದಿಂದ ಶ್ಲಥಮಧ್ಯ ಲಘುವೇಸರ ನಾಯಿಕೆಯರ ಲಕ್ಷಣಂ	೫-೬	
	೬. ಬಾಲೆ ಮೊದಲಾದವರ್ ಶ್ಲಥಾವಸ್ಥೆಯಂ ಹೊಂದುವ ಕ್ರಮಂ	೭-೮	
	೭. ಕೂಟದಲ್ಲಿ ಭೂರಿವೀರ್ಯವೊಸರಲು ಸ್ಮರಿಸತಕ್ಕ ವಸ್ತುಗಳು ಮತ್ತು ಪ್ರಾಣಿಗಳು	೯	
	೮. ಸಮಾನುಯೋಗ, (ಉತ್ತಮ) ಉಚ್ಚ ನೀಚ ರತಿ, (ಮಧ್ಯಮ) ಅತ್ಯುಚ್ಚರತ(ನೀಚ)ಗಳ ವಿಚಾರ	೧೦	
	೯. ನೀಚಧ್ವಜದಿಂದುಂಟಾಗುವ ದೋಷಂ	೧೧	
	೧೦. ಉಚ್ಚಧ್ವಜಾಭಿಘಾತದ ದೋಷಂ	೧೨-೧೩	
	೧೧. ಒಂಬತ್ತುಬಗೆಯ ರತವು ಪ್ರಮಾಣಕಾಲವೇಗಕ್ರಮಂಗಳಿಂದ ಗುಣಿಸಲ್ಪಟ್ಟು ೨೭ ಪ್ರಕಾರವೆಂಬುದು	೧೪	

ಅ. ಸಂ.	ವಿಷಯಂ	ಪ. ಸಂ.	ಪು. ಸಂ.
X	**ದಶಮಾಶ್ವಾಸಂ—ಮರ್ಮಭೇದಾಧಿಕಾರಂ**		30—32
	೧. ಸಾಮಾನ್ಯಪ್ರತಿಜ್ಞೆ	೧	
	೨. ರತಿಗೇಹವಿರಬೇಕಾದ ಸ್ಥಳ, ಅದರ ಸಿಂಗಾರ, ಅದರಲ್ಲಿರಬೇಕಾದ ವಸ್ತುಗಳ ಸಂಗ್ರಹಂ	೨-೩	
	೩. ಶೃಂಗಾರಕ್ಕೆ ತಕ್ಕ ನಾಯಕನ ಲಕ್ಷಣಂ	೪	
	೪. ನಾಯಕನ ಸಹಾಯರ್ಕಳಪ್ಪ ನಾಲ್ವರಲ್ಲಿ ನಾಗರಿಕನ ಲಕ್ಷಣಂ	೫	
	೫. ವಿಟನ ಲಕ್ಷಣಂ	೬	
	೬. ವಿದೂಷಕನ ಲಕ್ಷಣಂ	೭	
	೭. ಪೀಠಮರ್ದ(ಕ)ನ ಲಕ್ಷಣಂ	೮	
	೮. ನಾಯಕವಿನೋದಗೋಷ್ಠೀಕ್ರಮಂ	೯-೧೩	
	೯. ಮಾನಿನಿಯರ ಕೂಟದಲ್ಲಿ ನಾಲ್ದೆಱದ ಗುಹ್ಯನಾಡೀಕ್ರಮಂಗಳ್– ಸಾಜ, ಸ್ವಾಧೀನಜ, ವಿರೋಧ, ಪರಾಧೀನಂಗಳ್	೧೪	
	೧೦. ಈ ನಾಲ್ಕುಕ್ರಮದ ಲಕ್ಷಣಂಗಳ್	೧೫	
	೧೧. ತ್ರಿವಿಧ ರತಿಮೂರ್ಛೆಗಳ ಮತ್ತು ಅವುಗಳ ಲಕ್ಷಣಂಗಳ್	೧೬–೧೯	
	೧೨. ಉಪಸಂಹಾರಂ	೨೦–೨೧	
XI	**ಏಕಾದಶಾಶ್ವಾಸಂ—ಆಲಿಂಗನಾಧಿಕಾರಂ**		33—35
	೧. ಅಜಾತಜಾತಕೇಳಿಗಳಿಗೆ ಮೊದಲೆನಿಸಿದ ನಾಲ್ಕು ಮತ್ತು ಎಂಟು ಬಗೆಯ ಆಲಿಂಗನಂಗಳ್	೧	
	೨. ಅಜಾತಕೇಳಿಗೆ ಸಂಬಂಧಿಸಿದ ಸ್ಪೃಷ್ಟಕಾದಿ ನಾಲ್ಕು ಬಗೆಯಾಲಿಂಗನಂಗಳ್	೨	
	೩. ಜಾತಕೇಳಿಗೆ ಸಂಬಂಧಿಸಿದ ಸ್ತನಸಂಶ್ಲೇಷ' ಮೊದಲಾದ ೮ ಬಗೆಯ ಆಲಿಂಗನಂಗಳ್	೩	
	೪. ಅಜಾತಕೇಳಿಯ ಸ್ಪೃಷ್ಟಕ ಲಕ್ಷಣಂ	೪	
	೫. ,, ವಿದ್ಧಕ ಲಕ್ಷಣಂ	೫	
	೬. ,, ಘೃಷ್ಟಕ ಲಕ್ಷಣಂ	೬	
	೭. ,, ಪೀಡನಕ ಲಕ್ಷಣಂ	೭	
	೮. ಜಾತಕೇಳಿಯ ಸ್ತನಾಶ್ಲೇಷಲಕ್ಷಣಂ	೮	
	೯. ,, ಲತಾವೇಷ್ಟನಕ ಲಕ್ಷಣಂ	೯	
	೧೦. ,, ಜಘನೋಪಗೂಹನ ಲಕ್ಷಣಂ	೧೦	
	೧೧. ,, ಊರೂಪಗೂಹನ ಲಕ್ಷಣಂ	೧೧	

ಅ. ಸಂ.	ವಿಷಯ	ಪ. ಸಂ.	ಪು. ಸಂ
	೧೨. ,, ವೃಕ್ಷಾಧಿರೂಢ ಲಕ್ಷಣಂ	೧೨	
	೧೩. ,, ತಿಲತಂಡುಲಕ ಲಕ್ಷಣಂ	೧೩	
	೧೪. ,, ಕ್ಷೀರನೀರ ಲಕ್ಷಣಂ	೧೪	
	೧೫. ,, ಲಾಲಾಟಿಕ ಲಕ್ಷಣಂ	೧೫	
	೧೬. ಇಂತು ೧೨ ಬಗೆಯ ಆಲಿಂಗನಂಗಳ ಉಪಸಂಹಾರಂ	೧೬	
XII	**ದ್ವಾದಶಾಶ್ವಾಸಂ—ಚುಂಬನಾಧಿಕಾರಂ**		36—38
	೧. ನಿಮಿತಕಾದಿ ಪನ್ನೆರಡು ಬಗೆಯ ಚುಂಬನಂಗಳ್	೧	
	೨. ನಿಮಿತಕಾದಿ ಲಕ್ಷಣಂ	೨	
	೩. ಸ್ಫುರಿತ ಲಕ್ಷಣಂ	೩	
	೪. ಅಧರ ಲಕ್ಷಣಂ	೪	
	೫. ಉತ್ತರ ಲಕ್ಷಣಂ	೫	
	೬. ವಿಘಟಿತ ಲಕ್ಷಣಂ	೬	
	೭. ಘಟ್ಟಿತ ಲಕ್ಷಣಂ	೭	
	೮. ಸಂಘಟಿತ ಲಕ್ಷಣಂ	೮	
	೯. ಜಿಹ್ವಕ ಲಕ್ಷಣಂ	೯	
	೧೦. ಪೀಡಿತಕ ಲಕ್ಷಣಂ	೧೦	
	೧೧. ಭ್ರಾಂತ ಲಕ್ಷಣಂ	೧೧	
	೧೨. ತಿರ್ಯಕ್ಕಿನ ಲಕ್ಷಣಂ	೧೨	
	೧೩. ಅನುವದನ ಲಕ್ಷಣಂ	೧೩	
	೧೪. ಚುಂಬನಸ್ಥಾನಂಗಳ್	೧೪	
	೧೫. ಮತ್ತೆ ಚುಂಬನದ ಸಂಕ್ರಾಂತಾದಿ ನಾಲ್ದೆಱಂ	೧೫	
	೧೬. ಸಂಕ್ರಾತದ ಲಕ್ಷಣಂ	೧೬	
	೧೭. ಅವಕಥಿತದ ಲಕ್ಷಣಂ	೧೭	
	೧೮. ಪ್ರಾತಿಬೋಧ್ಯ ಮತ್ತು ಸಾ(ಛಾ)ಯಿಕಗಳ ಲಕ್ಷಣಂ	೧೮	
	೧೯. ಉಪಸಂಹಾರಂ	೧೯	
XIII	**ತ್ರಯೋದಶಾಶ್ವಾಸಂ—ನಖದಂತಕ್ಷತಾಧಿಕಾರಂ**		39—40
	೧. ಸಾಮಾನ್ಯ ಪ್ರತಿಜ್ಞೆ	೧	
	೨. ನಖವ್ರಣದ ಲಕ್ಷಣಂ	೨	
	೩. ಪುಲಿಯುಗುರಾಕಾರಮೊದಲಾದ ಹದಿನಾಱುಬಗೆಯ ನಖಕ್ಷತರೇಖೆಗಳ ಲಕ್ಷಣಂ	೩	
	೪. ನಖಕ್ಷತದೆಡೆಗಳ್	೪	
	೫. ಯಾವಯಾವ ನಖಕ್ಷತವನ್ನು ಯಾವಯಾವ ಅಂಗಗಳಲ್ಲಿರಿಸಬೇಕೆಂಬ ನಿಯಮ	೫	

ಅ. ಸಂ.	ವಿಷಯಂ	ಪ. ಸಂ.	ಪು. ಸಂ.
	೬. ಶಶಪ್ಲುತಾದಿಗಳ ಲಕ್ಷಣಂ	೬	
	೭. ನಖಕ್ಷತದ ಉಪಸಂಹಾರ	೭	
	೮. ಕ್ಷತಿಮಾಡುವ ದಂತಲಕ್ಷಣಂ	೮	
	೯. ಹನ್ನೆರಡುಬಗೆಯ ದಂತಕ್ಷತಂಗಳ್	೯	
	೧೦. ದಂತಹತಿಯ ಲಕ್ಷಣಮುಂ ಪೆಸರುಂ	೧೦	
	೧೧. ಉಪಸಂಹಾರಂ	೧೧	
XIV	**ಚತುರ್ದಶಾಶ್ವಾಸಂ—ರತಾ(ತ್ಯ)ಧಿಕಾರವರ್ಣನಂ**		41—48
	೧. ಉತ್ತಾನಕ ಮೊದಲಾದ ಪಂಚವಿಧ ವಿಧಾನಗಳ ಸಾಮಾನ್ಯಲಕ್ಷಣಂ	೧	
	೨. ಗ್ರಾಮ್ಯವೇ ಮೊದಲಾದ ೪೯ ಬಂಧಗಳ ಪೆಸರ್ಗಳ್	೨-೫೧	
	೩. ರತಿಯಲ್ಲಿ ಪ್ರವರ್ತಿಸುವ ಪ್ರಸುತಕಂ ಮೊದಲಾದ ನಾಲ್ದೆಱದ ತಾಡನಂ	೫೧	
	೪. ಪ್ರಸುತ, ವಿಮುಷ್ಟಿ, ಅಪಹಸ್ತ, ಸಮತಳವೆಂಬ ನಾಲ್ಕು ಬಗೆಯ ತಾಡನ ಕ್ರಮಂಗಳ್	೫೨-೫೩	
	೫. ಕ್ವಣಿತ ಮೊದಲಾದ ಐದುಬಗೆಯ ರತಿಕೂಜಿತಂಗಳ ಪೆಸರ್	೫೪	
	೬. ಸ್ತನಿತ, ಸೂತ್ಕೃತ, ರೋದನ ಕ್ವಣಿತಂಗಳ ಲಕ್ಷಣಂ	೫೫	
	೭. ಫೂತ್ಕೃತ,ಹೂಂಕೃತ, ಶ್ವಸಿತಂಗಳ ಲಕ್ಷಣಂ	೫೬-೫೭	
	೮. ನವಿಲಂಚೆ ಪರಭೃತ ಪಾರಿವ ಲಾವಕವೆಂಬ ಪಂಚ ಪಕ್ಷಿಗಳ ಸ್ವನಮಂ ಪೋಲ್ವ ರತಿಕೂಜಿತಂ	೫೯	
	೯. ಪ್ರಸಿದ್ಧಗಳಾದ ಕೆಲವು ರತಿಬಂಧಗಳನ್ನು (೪೯)ನ್ನು ನಾನು ಇಲ್ಲಿ ಹೇಳಿರುವೆನು. ೮೪ ಕ್ಕೆ ಬೇಕಾಗಿರುವ ವುಳಿದ ಬಂಧಗಳನ್ನು ರತಿಸಾಧಕರು ತಿಳಿದುಕೊಳ್ಳ ಬೇಕು ಎಂದು ಉಪಸಂಹೃತಿಮಾಡಿರುವನು	೫೯	
XV	**ಪಂಚದಶಾಶ್ವಾಸಂ—ಭಾರ್ಯಾಧಿಕಾರಂ**		49—50
	೧. ಸವರ್ಣಕನ್ಯೆಯನ್ನು ವರಿಸಬೇಕು	೧	
	೨. ವಿವಾಹಕ್ಕೆ ತಕ್ಕ ಕನ್ಯೆಯ ಸುಲಕ್ಷಣಂ	೨	
	೯. ವಿವಾಹಕ್ಕೆ ತಗದ ಕನ್ಯೆಯ ದುರ್ಲಕ್ಷಣಂ	೩	
	೪. ಭೋಗಿಗಳು ಸುರತಮಾಡುವ ಪ್ರಕಾರಂ	೪	
	೫. ಮನೆವಾಳ್ತಿಗೆ ತಕ್ಕ ಸ್ತ್ರೀಯ ಲಕ್ಷಣಂ	೫	
	೬. ಮನೆವಾಳ್ತಿಗೆ ತಗದ ಸ್ತ್ರೀಯ ಲಕ್ಷಣಂ	೬	
	೭. ಅಸಜ್ಜನ ಸ್ತ್ರೀಯ ಲಕ್ಷಣಂ	೭	
	೮. ಸತಿಗೆ ಕಾಪಿಡಲರ್ಹನಾದ ಪುರುಷನ ಲಕ್ಷಣಂ	೮	
	೯. ಸತಿಗೆ ಕಾಪಿಡಲನರ್ಹನಾದ ಪುರುಷನ ಲಕ್ಷಣಂ	೯	
	೧೦. ಉಪಸಂಹಾರಂ	೧೦	

ಅ. ಸಂ.	ವಿಷಯಂ	ಪ. ಸಂ.	ಪು. ಸಂ.
XVI	**ಷೋಡಶಾಶ್ವಾಸಂ—ಕುಲಟಾಧಿಕಾರಂ**		51—52
	೧. ಸ್ತ್ರೀಯರು ಪಾದರವಾಚರಿಸಲು ಕಾರಣಂ	೧	
	೨. ಸ್ತ್ರೀಯರು ಪಾಣ್ಬೆಯರಾಗಲು ಕಾರಣಂ	೨	
	೩. ಜಾರಸ್ತ್ರೀಯ ಲಕ್ಷಣಂ	೩-೪	
	೪. ಕೂಟಕ್ಕೆ ಅನರ್ಹೆಯಾದ ಸ್ತ್ರೀಯ ಲಕ್ಷಣಂ	೫	
	೫. ಸ್ತ್ರೀಯರು ಪ್ರೀತಿಸದಿರಲು ಪುರುಷನಲ್ಲಿರುವ ದುರ್ಗುಣಂಗಳ್	೬	
	೬. ಸ್ತ್ರೀಯರು ಸೋಲಲು ತಕ್ಕ ಪುರುಷನ ಲಕ್ಷಣಂ	೭	
	೭. ಕಾಮುಕ ಪ್ರಜವೊಂದುವ ಎಳೆವೆಣ್ಗಳ ಲಕ್ಷಣಂ	೮	
	೮. ಸ್ತ್ರೀಯರನ್ನು ಸಾಧಿಸಲು ಸಾಧಕನಾಚರಿಸತಕ್ಕ ಕ್ರಮಂ	೯	
	೯. ಸ್ತ್ರೀಯ ಸಂಗವನ್ನು ಏರ್ಪಡಿಸಲು ಸಾಹ್ಯವೆಸಗುವ ದೂತಿ ಮೊದಲಾದ ಸ್ತ್ರೀಯರ ಪೆಸರ್	೧೦	
	೧೦. ಚದುರವಿಟನು ತನ್ನನ್ನು ಪ್ರೀತಿಸಿದ ಸ್ತ್ರೀಯರನ್ನೂ ಅಳಿಯರಿಂದ ತಿಳಿಸಿ ನೆರೆಯಬೇಕೆಂಬುದು	೧೧	
XVII	**ಸಪ್ತದಶಾಶ್ವಾಸಂ—ವೇಶ್ಯಾಧಿಕಾರಂ**		53—55
	೧. ವೇಶ್ಯೆಯರಾಗಲು ಕಾರಣಂ	೧	
	೨. ವೇಶ್ಯೆಗೆ ಭೂಷಣಮಪ್ಪ ವಿಷಯಂಗಳ್	೩	
	೩. ಬೇಟಕ್ಕೆ(ಕಾಮೋದ್ದೀಪನಕ್ಕೆ) ಆಗರವಾದ ವಸ್ತುಗಳು ಮತ್ತು ಗುಣ, ಸ್ವಭಾವಾದಿಗಳು	೪-೫	
	೪. ರಕ್ತೆಯಾಗಿರುವ ವೇಶ್ಯಾಲಕ್ಷಣಂ	೬	
	೫. ವಿರಕ್ತೆಯಾಗಿರುವ ವೇಶ್ಯೆಯ ಲಕ್ಷಣ	೭	
	೬. ವಿಟಲಕ್ಷಣಂ	೮	
	೭. ಕುವಿಟಲಕ್ಷಣಂ	೯	
	೮. ಉತ್ತಮವಿಟ ಲಕ್ಷಣಂ	೧೦	
	೯. ವೇಶ್ಯೆಯರಲ್ಲಿ ಉತ್ತಮಾಧಮಮಧ್ಯಮೆಯರು	೧೧	
	೧೦. ಉತ್ತಮ ಪೆಣ್ಣಿನ ಲಕ್ಷಣಂ	೧೨	
	೧೧. ಮಧ್ಯಮಸ್ತ್ರೀಯ ಲಕ್ಷಣಂ	-೩	
	೧೨. ನೀಚೆಯಾದ ಪೆಣ್ಣಿನ ಲಕ್ಷಣಂ	೧೪	
	೧೩. ಉಪಸಂಹಾರಂ	೧೫	
XVIII	**ಅಷ್ಟದಶಾಧಿಕಾರಂ—ವಶ್ಯಾಧಿಕಾರಂ**		56—60
	೧. ಇಚ್ಛೆಗೆ ಸೇರದಿರುವ ಸ್ತ್ರೀಪುರುಷರನ್ನು ಪರಸ್ಪರ ವಾಗಿ ವಶಪಡಿಸುವ ಕ್ರಿಯೆ	೧	

ಅ. ಸಂ.	ವಿಷಯಂ	ಪ. ಸಂ.	ಪು. ಸಂ.
	೨. ವಶೀಕರಣ ಮಂತ್ರಂ	೨-೬	
	೩. ವಶೀಕರಣ ಯಂತ್ರಂ	೭-೯	
	೪. ವಶೀಕರಣೌಷಧಂಗಳ್	೧೦-೧೩	
	೫. ನಲ್ಮೆಪೆರ್ಚ್ಚುವ ವಿಧಾನಂ	೧೪-೧೬	
	೬. ನೆರೆವ ಶಕ್ತಿವರ್ಧಕೌಷಧಂ	೧೭	
	೭. ವೀರ್ಯಂಪೆರ್ಚುವೌಷಧಂ	೧೮-೧೯	
	೮. ವೀರ್ಯಸ್ತಂಭನೌಷಧಂ	೨೨-೨೩	
	೯. ಮೋಹನವಂ ವೃದ್ಧಿಯಾಗಿಸುವ ಔಷಧಂ	೨೪-೨೫	
	೧೦. ಯೋನಿವಿಸ್ತಾರಕ್ಕೆ ಔಷಧಂ	೨೬-೨೮	
	೧೧. ಗ್ರಂಥೋಪಸಂಹಾರಂ	೩೨	
	೧೨. ಕವಿಕಾವ್ಯ ಪ್ರಶಸ್ತಿ	೩೩-೩೫	
ಪರಿಶಿಷ್ಟ ೧			61—64

ಶುದ್ಧಿಪತ್ರಂ

ಪುಟ	ಪಙ್ಕ್ತಿ	ಅಶುದ್ಧಂ	ಶುದ್ಧಂ
೮	೮	ಲೆಡಗು.... ನ	ಲಡಿಗುಲ್ಫಜಾನು
,,	೯	ಮುಟ್ಟೆ	ಮೂರ್ಧ
,,	೧೨	ಚ....	ಚಪೇಟಾದಾನ...
,,	೧೩	ಪೆಣ್ಣೊಸೊರ್ಗು	ಪೆಣ್ಣೊಸರ್ಗು
೧೪	೧೪	ಮಂಥ್ರ	ಮಾಂಥ್ರ
,,	೧೮	ತೇಳುವಿ	ತುಳುವಿ
೨೫	೧೭	ತತ್ರ್ರಿಯ	ತತ್ರಿ ಯ
೩೬	೨೯-೩೦	ತಳದಿಂ | ದನಯ	ತಳದಿಂ | ದೆ ನಯ
೩೭	೪	ಸಂಘಟಿತಂ	ಸಂಪುಟಕಂ
೩೯	೨	ದಂತನಖಕ್ಷತಾ	ನಖದಂತಕ್ಷತಾ
೪೭	೨೩	ರಾಕೃತ	ರವಕೃತ
,,	೨೮	ರೊೀ | ದನ	ರೋ | ದನ
,,	೩೩	ಸ್ವನಿತ	ಶ್ವಸಿತ
೫೫	೬	ಮಂತ್ರತಂತ್ರ	ಯಂತ್ರಮಂತ್ರ

ಶ್ರೀಃ

ಮನ್ಮಥ ವಿಜಯಂ*

ಪ್ರಥಮಾಶ್ವಾಸಂ

ಪೀಠಿಕಾ ಪ್ರಕರಣಂ

ಶಾ|| ಶ್ರೀಮನ್ಮೋಹನಮಂತ್ರದೇವಿಯರಿರಲ್ ಪಕ್ಕಂಗಳೊಳ್ ಚೈತ್ರಚೂ |
ತಾಮಾತ್ಯರ್ ನಿಲೆ ಪಿಂದೆ ಮುಂದಳಿಕುಳಂ ಸಂಗೀತಮಂ ಪಾಡೆ ಶೈ ||
ತ್ಯಾಮೋದಂ ಮೃದುಯಾನದಿಂ ಮರುತನೋಲೈಸಲ್ ಪ್ರಿಯಳ್ಗೂಡಿಯು |
ದ್ದಾಮಂ (ಸು)ಸ್ಥಿತನಾಗಿ ರಂಜಿಸುವ ಕಾಮಂ ಮಾಳ್ಕೆ ಮಾಂಗಲ್ಯಮಂ || ೧ ||

ಮ||ಸ್ರ|| ಜಗದುತ್ಪತ್ತಿಸ್ಥಿತಿತ್ವ ಪ್ರಳಯಮನಿನಿಸಂ ಲೀಲೆಯಿಂ ತೋಱಿದೆನ್ನೊಳ್ |
ಮುಗುಳಂಬಂ ತೊಟ್ಟನೆಚ್ಚುಬ್ಬೆಗದಿನುರಿಪಿ ತತ್ಕಾಲದೊಳ್ ಕಾಂತೆ ಸೋಂಕಲ್ ||
ಸೊಗಸಂ ತಳ್ಕೈಸಿ ಲೇಸಂ ನೆನೆದು "ರತಿಗೆ ನೀಂ ಗಂಡನಾಗೆಲ್ಲರಂಗಂ |
ಬುಗು ಪೋಗೆಂ"ದಂಗಜಂಗೊಲ್ದ ಭಯಕರಮನಿತ್ತೀಶನೀಗೊಳ್ಪನೆಂದುಂ || ೨ ||

ಉ|| ಕಾಮನ ಕೀರ್ತಿಯಂ ಬೆಳಸೆ ಪೇರುರದೊಳ್ ಸಿರಿ ತತ್ಪ್ರತಾಪಮಂ ||
ಹೇಮನಿಭಾಂಬರದ್ಯುತಿ ನಿಮಿರ್ಚೆ ಪದದ್ವಯದೊಳ್ ಸುರೇಂದ್ರಮು ||
ಖ್ಯಾಮರಮೌಳಿಕೋಟಿಯಿರೆ ರಂಜಿಸೆ ಕಿಱ್ಪೊಡೆಯೊಳ್ ಜಗತ್ರಯಂ |
ಪ್ರೇಮದೆ ಪೊರ್ಕುಳಿೞೊಳ್ ಬಿದಿ ಯಿರಲ್ ಮೆಱೆವಚ್ಯುತನೀಗೆ ರಾಗಮಂ || ೩ ||

ಮ||ಸ್ರ|| ವಿಮಲಜ್ಞಾನಪ್ರಕಾಶಂ ನಿಖಿಳಬಹುಕಳಾಶಾಸ್ತ್ರಕೋಶಂ ವಿವೇಕ |
ಕ್ಷಮನಾಗಿರ್ದನ್ನುಮಂ ಸೋಲಿಸಿ ನನೆಗಣೆಯಿಂದೆಚ್ಚು ನಿಚ್ಚಂ ವಚಃ ಸ್ತ್ರೀ ||
ರಮಣೀಮೋಹಾಂಧಕಾರಂಗಲಿಸಿದತನುವೇಂ ಸಾಯೊ ಎಂದು ತಾಂಶಿತೂ ? |
ಸುಮವೊಂದೊಂದಾಗಿ ಕೂಗಲ್ ಬಗೆದ ಕಮಲಜಂ ಮಾಳ್ಕೆ ದೀರ್ಘಾಯುವೊಳ್ಪಂ
|| ೪ ||

ಚಂ|| ಸ್ಮರನ ಮಹೇಂದ್ರಜಾಲಕೊಳಗಾಗೆ ಜಗತ್ಪ್ರಭುಗಳ್ಗೆ ಬೇೞ್ಬೇ |
ಅರಸಿಯರೆಂಬಿನಂ ಸಿರಿ ಸರಸ್ವತಿಯೆಂದಿನಿತೇಂಬ ನಾಮದಿಂ ||
ಹರಿಯಜರುದ್ರರೊಳ್ ಮೆಱೆವ ಮೋಹನರೂಪೆಸೆವಾದಿಶಕ್ತಿ ಕೂ |
ರ್ತಿರು ನಿರುತಂ ಮದೀಯಮತಿಯೊಳ್ ಕೃತಿಪೂರಣಮಪ್ಪ ಕಾರಣಂ || ೫ ||

---

* ಶ್ರೀಮತ್ಸರಸ್ವತ್ಯೈನಮಃ || ಶ್ರೀ ಗಣೇಶಾಯ ನಮಃ || — ಎಂದು ಹಸ್ತಲಿಖಿತ ಪ್ರತಿಯ ಆದಿಯಲ್ಲಿದೆ.

ಶಾ|| ವಾಮಾಂಕಸ್ಥಿತವಾಮಲೋಚನೆಯ ಗಾಢಾಲಿಂಗನಂ ಕೊರ್ವಿಪ |
ಣ್ಣಾಮೋದಂಬಡೆದಿರ್ಪ ಮೋಹಕಥನುರ್ಬಾಣಂ ತ್ರಿಶೂಲಾಂಕುಶಂ ||
ಭೀಮಾಕಾರಕುಠಾರಪಾಶವಳವಟ್ವಾ ದೀರ್ಘಹಸ್ತವ್ರಜಂ |
ಪ್ರೇಮಾನಂದದಿನೀಗೆ ಶಕ್ತಿಗಣಪಂ ನಿರ್ವಿಘ್ನಮಂ ಸಂತತಂ || ೬ ||

ಮ|| ಚತುರಾಸ್ಯಂ ಜಡಜಸ್ಥನಂಗಜಹರಂ ಕಾಡೊಳ್ ಸಮಂತಿರ್ಪನ |
ಚ್ಯುತನೆಂದುಂ ಸಿರಿಯಿಂದೆ ಗರ್ವಿತನವಂ ಭೂಭಾರಕಜ್ಞಾನಿ ಗೀ ||
ಷ್ಪತಿ ಪಾಣ್ಬಂ ಗೊಳವಂ ಕಳಾವಳಿಯ ? ನೆಂದಿಂತೆಲ್ಲಿಯುಂ ನಿಲ್ಲದ |
ಪ್ರತಿಮಂ ಸತ್ಕವಿ **ಮಲ್ಲನೊ**ಳ್ಮೊಗದೆ ನಿಂದಳ್ ವಾಣಿ ಸಲ್ಲೀಲೆಯಿಂ || ೭ ||

ಕಂ|| ಸಕ್ಕದದ ಭಾಷೆಯೊಳ್ ನೆಗ |
ೞ್ದಕ್ಕರಿಗರ್ **ಕಾಳಿದಾಸ ಬಾಣ ಮಯೂರರ್** ||
ಚೊಕ್ಕಳಿಕೆಯಿಂದೆ ಮನ್ಮನ |
ವೊಕ್ಕುದ್ಯನ್ಮತಿವಿಶಾಲಮಂ ಸತ್ಕೃಪೆಯಿಂ || ೮ ||

ಮ||ಸ್ರ|| ಇಳೆಯೊಳ್ ಕರ್ಣಾಟಭಾಷಾವಿದರೆನಲೆಸೆವೊಳ್ಗಬ್ಬಿಗರ್ ತಾವೆನಿಪ್ಪ |
ಗ್ಗಳದೇವಂ ನೇಮಿಚಂದ್ರಂ ಮನಸಿಜ ಸುಜನೋತ್ತಂಸ ರುದ್ರಾಂಕ ಪೊನ್ನಂ ||
ಕಳೆಯಾಣ್ಮಂ **ನಾಗವರ್ಮಾ**ದ್ಯನುಪಮಗುಣಿಗಳ್ ನೂತನಬ್ರಹ್ಮರೆಮ್ಮೊಳ್ |
ವಿಳಸದ್ವಾಗ್ವೃತ್ತಿಯಂ ಕಾಲ್ಬುರಮೆಸಗುವಿನಂ ಮಾೞ್ಕೆ ಕಾರುಣ್ಯದಿಂದಂ || ೯ ||

ಕಂ|| ನಿರುತಂ ಕರ್ಣಾಟಕದೊಳ್ |
ಪರಕಿಸೆ ಶಬ್ದಜ್ಞನಾವನೊರ್ವನೆ **ಲೋಕ** ||
ಕ್ಕರಿದಲ್ತೆ **ಭಾಪ್ಪು**! ಕವಿಕುಂ |
ಜರ **ಕೇಶವರಾಜ** ಗೋಚರಿಸು ಮನ್ಮನದೊಳ್ || ೧೦ ||

ಚಂ|| ಚತುರಚತುರ್ಮುಖಂ ಶ್ರುತಕೃತಿಪ್ರಮುಖಂ ವರವೇದಶಾಸ್ತ್ರವಿ |
ಶ್ರುತಮತಿ ಕಾಮತತ್ವ ಭರತಾಗಮಶಬ್ದವಿಚಾರ ಕಾವ್ಯಪ ||
ದ್ಧತಿರಸರಾಗಭಾವ ರಮಣೀಯಕರಂ ಕವಿ **ಪುಟ್ಟಣಾಂಕ** ಪಂ |
ಡಿತನೆನಲಾತನಿಂದಱಿವು ಪೊಣ್ಮಿದ **ಮಲ್ಲನ**ದೇಂ ಕೃತಾರ್ಥನೋ || ೧೧ ||

ಮ|| ಇನಿವಿಲ್ಜೇವೊಡೆ ತುಂಬಿಯಿಂಚರದ ಸದ್ಗಾನಂ ಪ್ರಿಯುಳ್ಳೂಟದೊಳ್ |
ಮನಮೊಲ್ದೋದುವ ಮುದ್ದುಗೆಯ್ತ ವತನುಶ್ರೀಮಂತ್ರವಾದಂ ವಚೋ ||
ವನಿತಾಮೋಹನವಲ್ಲಕೀಧ್ವನಿ ಸಖೀವಾರ್ತಾನಿರೂಪಂಗಳೆಂ |
ಬಿನೆಗಂ ಕನ್ನಡಗಬ್ಬಡೊಳ್ ಸವಿಯನೀಗುಂ ಮಲ್ಲನೊಳ್ವಾತುಗಳ್ || ೧೨ ||

ಮ|| ಉರಿವರ್ ಗರ್ವದಿನಿರ್ಪ್ಪರಜ್ಞರುಱಿ ಕಾಯ್ವರ್ ದುರ್ವಿದಗ್ಧರ್ ಕರಂ |
ಜಱೆವರ್ ದುರ್ಜನರೊಳ್ದಪರ್ ಕುಕವಿಗಳ್ ದ್ವಿಡ್ಭಾವದಿಂದಂ ಕನ ||
ಲ್ದಿಱಿವಂತಾಟಪರೋವೊ ! ಸತ್ಕೃತಿಯನೋ ಓದಿಂ(ದಂ)ತವಗಾ೯ವನ ? |
ಳ್ಕಱೊಳೀ ಕೈತವಶಿಕ್ಷೆಯಂ ಬಗೆಯ[ದೀ] ಯ . . . ಲ್ಮನಂ [ದಂದನೋ] || ೧೩ ||

ಕಂ|| ಈಕ್ಷಿಸೆ ಸಾಜಂ ಸತ್ಕಾ |
ವ್ಯೇಕ್ಷುರಸಂಬಡೆದ ಕುಕವಿಜಂಬುಕನಂತಿ ||
ದಾರ್ಕ್ಷಣದಿನೊಳ್ದುದಲ್ಲದೊ |
ಡಕ್ಷೂಣಲಸತ್ಸುಖಂ ಮನಂಬೊಕ್ಕಪುದೇ || ೧೪ ||

ವ|| ಅದಂತಿರ್ಕೆ :—

ಕಂ|| **ಸ್ಮರವಿಜಯಂ** ಕೃತಿವೆಸರಾ |
ದರಿಪರ್ ಶೃಂಗಾರಸಾರಕೋವಿದರೊಲವಿಂ ||
ವಿರಚಿಸಿದಂ **ಲಕ್ಷ್ಮಣಕವಿ** |
ವರನೆನೆ ಮಿಗೆ ಮೆಚ್ಚಿ ಕೂರ್ತು ಪೊಗೞದರೊಳರೇ || ೧೫ ||

ಮ|| ಪಿರಿದುಂ ಪ್ರಾಣಿಗಳುಳ್ಳೊಡಂ ಬಗೆವೊಡಾದಂ ಮಾನವಾಕಾರಮು |
ರ್ವರೆಯೊಳ್ ದುಸ್ತರಮಿಂತಿದೆಂದುಱಿ ಗೃಹಸ್ಥಾಭಾರದಿಂ [ಸೌ]ಖ್ಯಮಂ ||
ನಿರುತಂ ಪೆತ್ತು ಮುನೀಶ್ವರರ್ ನಡೆದಮಾರ್ಗಂ ಲಕ್ಷಣಕ್ಕೊಂದಿರ |
ಲ್ಕೊರೆದಂ ಸತ್ಕವಿ **ಮಲ್ಲ**ನಂಗಜಕಳಾವಿಸ್ತಾರಮಂ ಸಾರಮಂ || ೧೬ ||

ಶಾ|| ಮುಂ ಪೇೞ್ದಂಗಜಶಾಸ್ತ್ರಮಂ ಪವಣಿಸಲ್ ಬೊಮ್ಮಂಗೆಯುಂ ತೀರದಿ |
ರ್ದುಂ ಪೋ ನೀನುಸಿರ್ದಂದವೇನೆನಲು ಕೇಳ್ದೊಲ್ದಿಲ್ಲರಾ ಆ ! ಎನಲ್ ||
ಸಂಪೂರ್ಣಂ ಬರೆದೀ ಲಸತ್ಕೃತಿರಸಾಸಾರಂ ಪೊನಲ್ ಪರ್ವೆ ನ |
ಲ್ಪೆಂಪಿಂ **ಮಲ್ಲ**ನೊಱಲ್ದೊಡರ್ಚಿದಿನಿವಾತನ್ಯರ್ಗದೇಂ ಬರ್ಕುಮೋ || ೧೭ ||

ಆವಂ ಮೋಕ್ಷದ ಬಟ್ಟೆಗಂಡನೆರ್ದೆಯೊಳ್ ಥಟ್ಟುರ್ಚಲ್ಕೆದಂಬು ರಾ |
ಜೀವಾಕ್ಷಂ ಬಿದಿ ಶಂಕರಾದಿಗಳುರಂ ವಕ್ತ್ರಾಬ್ಜವರ್ಧಾಂಗದೊಳ್ ||
ಮೂವಣ್ಣಕ್ಕೊಳಗಾದರಂಗಭವನುದ್ಯತ್ಕೀರ್ತಿಯಿಂ ತಾವೆನಲ್ |
ಜೀವರ್ಗಿಂ ಪೆಱತುಂಟೆ ಸಾರತರತತ್ವಂ ಕಾಮದಿಂದಗ್ಗಳಂ || ೧೮ ||

ವ|| ಅಂತವರ್ಸಾಯುಜ್ಯಸಂಪದೋಪಕರಣಮಪ್ಪ ತಚ್ಛಾಸ್ತ್ರದಾದಿಯೊಳ್ ಮಾನುಷ್ಯ ಜನನಮೆಂತೆಂದೊಡೆ :—

ಮ||ಸ್ರ|| ತರುಣೀ . . . . ರಂಕುಕ್ಷಿಯೊಳೊಗೆದ ಲಸದ್ರಕ್ತದೊಳ್ ಲಿ . . . . |
ಬೆರಸಲ್ಕಾರಯ್ದು ಪತ್ತುಂ ನಿಶೆಯೊಳೆ ಕಲಿಲಂ ಬುದ್ಬುದಂ ಶೋಣಿತಂ ಮಿ ||
ಕ್ಕಿರಡೇೞುಂ ನಕ್ತದಿಂದಂ ಕರಣಪಿಶಿತಮಿರ್ಪ್ಪತ್ತಿರುಳ್ ತೀರಲಂಗಾಂ |
ಕುರದಿರ್ಪ್ಪತ್ತೇೞುನಕ್ತಂ ದೊರೆಕೊಳಲೆಸೆಗುಂ ತಿಂಗಳೊಳ್ ಪಂಚತತ್ವಂ || ೧೯ ||

ಸಲೆಮಾಸಂ ದ್ವಿತ್ರಿಚಾತುರ್ಗುಣವೆರಡೆರಡಾಗಾತ್ರಮೇದೋಸ್ಥಿಮಜ್ಜಾಂ |
ಗುಲಿಕೇಶಂ ತೋರ್ಪ ವಕ್ತ್ರಂ ಗುಣಗಿರಿಗಣದೊಳ್ ವಾಯುಸಂಚಾರರಂಧ್ರಂ ||
ನೆಲೆಗೊಳ್ಗುಂ ಕರ್ಣನಾಸಾಜಠರದೆಡೆಗಳೊಳ್ ಸಂಧಿಯೊಂದಿರ್ಕ್ಕುಮೆಂಟ |
ಕ್ಕೊಗಲವಿಂದೊಂಭತ್ತಱೊಳ್ ಪೇಸುತೆ ಶಿಶು ಬಿಡುಗುಂ ಗರ್ಭಮಂ ಚಿಂತೆಯಿಂದಂ
|| ೨೦ ||

ಚಂ॥ ವನಿತೆಯ ಗರ್ಭವಾಸದೊಳಗಸ್ರ ಜಲಾರ್ಗಳಮಾಗಿರಲ್ಕೆ ಪೆಣ್ |
ಜನಿಸುಗುಮಿಂದ್ರಿಯಂ ಬಹುಳಮೊಂದಿರೆ ಪುಟ್ಟುಗುಮೆಯ್ದೆ ಗಂಡು ರೂ ॥
ಪನುನಯದಿಂದೆ ತದ್ರುಧಿರಶುಕ್ಲ ಯುಗಂ ಸಮಮಾಗಿರಲ್ಕೆ ಮು |
ನ್ನಿನ ಕೃತಪಾಪಲೇಪದೆ ನಪುಂಸಕನಾಗೊಗೆಗುಂ ಧರಿತ್ರಿಯೊಳ್ ॥ ೧೧ ॥

ವ॥ ಅದು ಕಾರಣದಿಂ ಮಾನುಷ್ಯದೊಳನೇಕದುಷ್ಕರಕಂಟಕಶತಮಂ ಕಳೆದುರ್ವಿಯೊಳ್ ನೂತನ . . . . ತಿ . . . . . . ರೂಪ ಸಂಪನ್ನತೆವೆತ್ತ ಜೌವನಿಗ ದಂಪತಿಗಳ್ |

ಮ॥ ಪರಮಾಯುಷ್ಯ ಶತಂಬರಂ ಬರಿಸಮಂ ನಿಷ್ಕಾರಣಂ ನೀಗದಾ |
ದರದಿಂ ಜಾತಿ ಕಳಾಂಶದೇಶ ಜನಿಸ . . . . ॥
. . . . ತೋನ್ನತಧರ್ಮಬಾಹಿರ . . . . |,
ವರ ಮಂತ್ರೌಷಧಮಾತ್ರದಿಂ ಪಡೆ [ವುದಂತಾ] ಕಾಮಸಾಮ್ರಾಜ್ಯಮಂ ॥ ೧೨ ॥

ಗದ್ಯಂ

ಇದು ವಿದಿತಮದನ ಮುದ್ರಾಂಕಿತ ವಿದೂರಜನನಿಬಂಧನ
ಕಾರಾಗಾರಮುಮಭಿನವನಾಯಕನಾಯಿಕಾ
ಶೃಂಗಾರಸಾರೋದ್ಧಾರಮುಂ ಸಕಲ
ವಿಬುಧಸೇವ್ಯಮಾನಮುಂ
ಲಕ್ಷಣ ಕವೀಂದ್ರ
ವಿರಚಿತಮು
ಮಪ್ಪ
ಮನ್ಮಥ ವಿಜಯದೊಳ್
ಪ್ರಥಮಾಶ್ವಾಸಂ–ಪೀಠಿಕಾ ಪ್ರಕರಣಂ
ಸಂಪೂರ್ಣಂ.
—ಮಂಗಳ ಮಹಾಶ್ರೀ—

ದ್ವಿತೀಯಾಶ್ವಾಸಂ*

ಜಾತ್ಯಧಿಕಾರಂ

ಕಂ॥ ಇಂತಾದ ಪೀಠಿಕಾತದ |
ನಂತರ ಮಬಲೆಯರಜಾತಿಭೇದಮುಮಂ ತ ॥
ತ್ಕಾಂತರ ತೆಱನಂ ವಿದ್ವ |
ತ್ಸಂತತಿಗಱಿಸಂತು ಪೇೞ್ವೆಪೆಂ ಕ್ರಮದಿಂದಂ ॥ ೧ ॥

ಎನೆ ನಾಲ್ಕುಜಾತಿಯಱ ಮಾ |
ನಿನಿಯರ್ಗಂ ರೂಪವಿಭ್ರಮದೆ **ಪದ್ಮಿನಿ ಚಿ** ॥
ತ್ತಿನಿ ಮತ್ತಂ **ಶಂಖಿನಿ ಹ** |
ಸ್ತಿನಿ ಯೆಂದತ್ಯುತ್ತಮಾದಿ ಹೀನಂಬರೆಗಂ ॥ ೨ ॥

ಮ॥ಸ್ರ॥ ಜಲಜಾಸ್ಯಂ ತತ್ಸುಗಂಧಾಕೃತಿರತಿಸಲಿಲಂ ಶ್ರೀಫಲೋದ್ಯತ್ಕುಚಂ ಕೋ |
ಕಿಲನಾದಂ ಹಂಸಯಾನಂ ಮೃದುಲಘುತರಭ್ರೂಕರ್ಣ ಸತ್ಕುಂತಲಂ ಪಿ ॥
ಪ್ಪಲವರ್ಣಾಕಾರಗುಹ್ಯಂ ಚಕಿತಮೃಗದೃಶಂ ಲಜ್ಜೆಮೇಣ್ ಶ್ಯಾಮವರ್ಣಂ |
ತಿಲಪುಷ್ಪಘ್ರಾಣಮಾ ಪಾಂಡುರಭರಣಮಯಂ ಪದ್ಮಿನೀನಾರಿಗಕ್ಕುಂ ॥ ೩ ॥

ಚಂ॥ ಪೊಳೆವಲರ್ಗಣ್ ಚಕೋರನಿನದಂ ಮಧುಗಂಧರತಾಂಬು ದೇಹಮು |
ಜ್ಜ್ವಳಿಪ ಘನಸ್ತನೋಷ್ಮಕಟಿ ಬಾಹ್ಯರತೇಚ್ಛೆ ಸುಗೀತಗೋಷ್ಠಿ ಕೋ ॥
ಮಲಕರ ಕಾಕಜಂಘೆ ಕಿಱಿದೊಳ್ಪಣಿಸುರ್ವಿದ ಕಾಮಮಂದಿರಂ |
ಸೆಳೆನಡು ಚಿತ್ರಚೀನವಸನಂ ಸತಿ ಚಿತ್ತಿನಿಗಾದಮೊಪ್ಪುಗುಂ ॥ ೪ ॥

ಮ॥ಸ್ರ॥ ಅತಿದೀರ್ಘ.... ಶೋದ್ಯತ್ತನು ಬಹು ಸೆರೆಯೆದರ್ಗಂದಮೊಂದಿರ್ಪ ಪೂರ್ವಂ |
ನತಮಧ್ಯಂ ನೀಳ್ದಪಾದಂ ಖರನಿನದ. . . ದ್ರಸ್ರವತ್ಕಾಮವೇಶ್ಮಾ ॥
ಕೃತಚಿತ್ತಂ ನಿಮ್ನಗುಹ್ಯಂ ಕಿಱಿದುಣಿಸು ಲಸದ್ರಕ್ತಭೂಷಾಳಿ ಚೂರ್ಣೋ |
ರ್ಜಿತಗಂಧಂ ಭೂರಿರೋಮಂ ಚಪಲತೆ ಮೆಱೆಗುಂ ಶಂಖಿನೀ ಸ್ತ್ರೀಗೆ ನಿಚ್ಚಂ ॥ ೫ ॥

ಮ॥ ತನಿಗೆಂಪಾದ . . . . ವಿಶಾಲತರಗುಹ್ಯಂ ಪೋದಮಾನಂ ಮಹ |
ತ್ತನು ದುಶ್ಚೇಷ್ಟೆ ಕಟೂಕ್ತಿ ಸೂಕ್ಷ್ಮನಯನಂ ವಕ್ರಕ್ರಮಂ ಗದ್ಗದ ॥
ಧ್ವನಿ ಪತ್ತಿರ್ದ ಕೊರಲ್ಪ್ರಮಧ್ಯ ಮುರುಭೋಗಂ ಸತ್ಕಷಾಯೋಷ್ಣಭೋ |
ಜನದಾರ್ತಂ ಗಜದಾನಗಂಧಮೆಸೆದಿರ್ಕ್ಕುಂ ಹಸ್ತಿನೀನಾರಿಯೊಳ್ ॥ ೬ ॥

ಮಲ್ಲಿಕಾಮಾಲೆ॥ ಪ್ರೀತಿಪದ್ಮಿನಿಗಾವಗಂ ದಿನಸಂಖ್ಯೆಚಿತ್ತಿನಿಗಬ್ಧಿ ದಿ |
ಗ್ದೈವಕೃತಕರ್ಮಗಜೇಷು ಭಾಸ್ಕರರಿಂ ತ್ರಯೋದಶ ವಹ್ನಿ ಜೈ ॥
ವಾತೃಕಂ ಮೃಡನಿಂದೆ ಶಂಖಿನಿಗಪ್ಪುದಾ ಮನುಪರ್ವ ಸಂ |
ಜಾತಸಂಜ್ಞೆಗಳಿಂದೆ ಹಸ್ತಿನಿಗಕ್ಕು ಮಿಾಕ್ರಮಮೊಂದಿ ದಲ್ ॥ ೭ ॥

---

*ಶ್ರೀಮದಜಿತಜಿನಾಯ ನಮಃ—ಎಂದು ಪ್ರತಿಯೊಂದು ಆಶ್ವಾಸದ ಆದಿಯಲ್ಲಿಯೂ ಜಿನನಮಸ್ಕಾರದ ಶಬ್ದಗಳು ಕಂಡುಬರುವುವು.

ಕಂ|| ಎನಿಸುಂ ಪದ್ಮಿನಿ ಪದ್ಮಾ |
ಸನದಿಂ ನಾಗರಕಬಂಧದಿಂ ಚಿತ್ತಿನಿ ಶಂ ||
ಖಿನಿ ವೇಣುದಾರಿತದೆ ಹ |
ಸ್ತಿನಿ ತಣಿಕುಂ ಸ್ಕಂಧಪಾದದಿಂ ಕೂಡುವಿನಂ || ೮ ||

ವಿದಿತಂ ಪದ್ಮಿನಿ ಕಡೆ ಜಾ |
ವದೆ ಚಿತ್ತಿನಿಯಗ್ರಜಾವದಿಂದೆರಡನೆ ಜಾ ||
ವದೊಳುಱೆ ಹಸ್ತಿನಿ ಮೂಜಾ |
ವದೆ ಶಂಖಿನಿ ಪತಿಯ ಕೂಟದೊಳ್ ಪರಿಣಮಿಕುಂ || ೯ ||

ಮ|| ಮೊದಲೊ . . . . ಕಾಂತಸ . . . ಯೋ |
ಗದೊಳೆಂದುಂ ನೆಱೆ ಮೋಹಿ ಚಿತ್ತಿನಿ . . . . ಂಜಾತೆ ತಾಂ ಮೋಹದೊಳ್ ||
ವಿದಿತಂ ಶಂಖಿನಿ ಮೋಹವೆಳ್ಳನಿತನೊಲ್ಲಳ್ ಹಸ್ತಿನೀನಾರಿ ಚಿ |
ತ್ತ್ರದೊಳಿಂ . . . . ಮಧ್ಯೆ . . . ನೆರೆಗೆ ನಾಲ್ಕುಂ ಜಾತಿಯುಂ ಸಂತತಂ || ೧೦ ||

ಕಂ|| ಅನುರಕ್ತಭಾವದಿಂ ಪ |
ದ್ಮಿನಿ ಮೊದಲಾಗಿರ್ಪ ನಾಲ್ಕು ಜಾತಿ ಸ್ತ್ರೀಯ ||
ರ್ಗಿನಿಯರ್ ವರ್ತಿಪರಿಂತು ಮ |
ದನ ಚಿತ್ರಕ ದಮು[ನ ಮಾಳ] ವಾಖ್ಯರೆನಿಪ್ಪರ್ || ೧೧ ||

ಮ|| ತಿಲಪುಷ್ಪೋಪಮನಾಸಿಕಂ ಮೃಗಮದಾಮೋದಂ ದಯಾಳುತ್ವಮು |
ಜ್ವಲಶೃಂಗಾರಮುದಾರವೃತ್ತಿನವಿರ್ಗಳ್ಪೊಳ್ವಾತು ಮೆಲ್ಸೋಂಕು ಕೋ ||
ಮಲಹಸ್ತಾಂಘ್ರಿಸುವರ್ಣವರ್ಣತನು ಗೀತಾಕರ್ಣನಾಸಕ್ತಿ ಕೀ |
ರ್ತಿಲತಾವೃದ್ಧಿಯಿನೊಪ್ಪುವಂ **ಮದನ**ನೆಂಬಂ ಪದ್ಮಿನೀವಲ್ಲಭಂ || ೧೨ ||

ಚಂ|| ಘನಕೃಶಸೂಕ್ಷ್ಮದೀರ್ಘವಿಕೃತಿತ್ವಮನೆಯ್ದಿದ ಹೇಮಪುತ್ರಿಕಾ |
ತನು ವಿವಿಧಾಂಬರಾಭರಣಭೂಷಣವಾಱಿದ ಕತ್ತುರಿಗಂಪು ದಿವ್ಯಭೋ ||
ಜನರುಚಿ ರೋಮಸಂಜನಿತಜಂಘೆಯನಂಗಮತೋಕ್ತಿ ಚಿತ್ತಿನೀ |
ಸ್ತನಪರಿರಂಭಮುಖ್ಯ ಬಹುಭೋಗದೆ **ಚಿತ್ರ**ಕನಾಮ ಮೊಪ್ಪುಗುಂ ||

ಮ|| ಗುರುದೀರ್ಘಾಂಘ್ರಿಗಳೋಷ್ಠನಾಸಿಕ ವದಭ್ರಾಸ್ಯೋರುಹನ್ಯಾದಿ ಗಾ |
ತ್ರರುಹಂ ಕರ್ಪುರಗಂಪು ಮೇಣು ನವವರ್ಣಾಕಾರಮುಂ ಮತ್ತೆ ತೀ ||
ಕ್ಷ್ಣರತಾಗ್ರಂ ಕರಿಕುಂಭಜಾನು ಕಿಱುಗಣ್ಣೆಂದುಂ ನವಿರ್ಪುಟ್ಟದಿ |
ಪ್ಪರಮಿರ್ಗಲ್ಲದೆ ಶಂಖಿನೀಶ **ದಮ**ನಾಖ್ಯಂ ಭೂತಳಕ್ಕೊಪ್ಪುಗುಂ || ೧೪ ||

ತ್ವರಿತೋಗ್ರಾಂಗಬಳಂ ಪಿತಾಗವಮ(?)ನಂ ಕಾರ್ಕಶ್ಯರೋಮಂ ಘನೋ |
ದರವಕ್ತ್ರಂ ಮಧುವಾಸಿತಂ ಕುಟಿಲಭಾವಂ ಸ್ಥೂಲದೀರ್ಘಧ್ವಜಂ ||
ಪಿರಿದುಂ ಚಂಪಕಪುಷ್ಪನೀಲನಿಭವರ್ಣಂ ಪುಂಗವೋದ್ಯೋಗತ |
ತ್ಪರಸಂಮರ್ದದೆ ಹಸ್ತಿನೀರತಿಗೆ ಲೋಲಂ **ಮಾಳವಂ** ರಂಜಿಕುಂ || ೧೫ ||

ಕಂ|| ಈ ನಾಲ್ಕುಂ ತೆಱದಲ್ಲದ |
ನೂನಗುಣೋಪೇತಮಾದೊಡದು ಸಂಕೀರ್ಣಂ ||
ತಾನಕ್ಕಂತರ್ಜಾತಿ |
ಸ್ತ್ರೀನಿವಹಕ್ಕಂ ತದಾತ್ಮಪುರುಷರ್ಗೆಂದುಂ || ೧೬ ||

ಜಾತಿವಿಭೇದಮನರ್ಗಳೆ |
ಕಾತರದಿಂ ಕೂರ್ತು ನೆರೆವ ನೆಱೆ ದಿನ ಕಾಲ ಮನಃ ||
ಪ್ರೀತಿ ವಿಶೇಷಂಗಳುಮಂ |
ಮಾತೇಂ ಪೂರಿಸಿದೆನಂಗಜಾತಾಗಮದೊಳ್ || ೧೭ ||

ಗದ್ಯಂ

ಇದು ವಿದಿತಮದನ ಮುದ್ರಾಂಕಿತ ವಿದೂರಜನನಿಬಂಧನ
ಕಾರಾಗಾರಮುಮಭಿನವನಾಯಕನಾಯಿಕಾ
ಶೃಂಗಾರಸಾರೋದ್ಧಾರಮುಂ ಸಕಲ
ವಿಬುಧಸೇವ್ಯಮಾನಮುಂ
ಲಕ್ಷಣ ಕವೀಂದ್ರ
ವಿರಚಿತಮು
ಮಪ್ಪ
ಮನ್ಮಥ ವಿಜಯದೊಳ್
ದ್ವಿತೀಯಾಶ್ವಾಸಂ—ಜಾತ್ಯಧಿಕಾರಂ
ಸಂಪೂರ್ಣಂ.
—ಮಂಗಳ ಮಹಾಶ್ರೀ—

ತೃತೀಯಾಶ್ವಾಸಂ*

ಕಳಾಧಿಕಾರಂ

ಕಂ|| ತಿಳಿಗಱುವರ್ ಕಾಮಿನಿಯ |
ಗೊೞಳವಾದ ಕಳಾವಿಭೇದಮಂ ಚಂದ್ರಕಳಾ ||
ವಳಿಯ ಸಹಾಯಮನಿಂತಾ |
ಕುಳಮಿಲ್ಲದೆ ಪೇೞ್ವೆನಂಗಜಾತಾಗಮದೊಳ್ || ೧ ||

ಚಂ|| ತರದೆ ಸಿತಾಸಿತದ್ವಿತಯಪಕ್ಷದ ಪಾಡ್ಯಮದಾದಿಯಾಗಿ ಪೆ |
ರ್ವೆರಲೆಡಗು . . . ನಜಘನಂ ಸುೞಿ ಪೊೞ್ಕುೞುರಸ್ಸ್ಥಲಂ ಪಯೋ ||
ಧರ ಭುಜ ಕಂಠದೊತ್ತು ಕದಪುಂ ತುಟಿ ಕಣ್ ಪಣೆ ನೆತ್ತಿ ಮುಟ್ಟಮುಂ |
ದಿರೆ ತಿಥಿ ವಾಮದಿಂ ಬಳಸಿ ಲಕ್ಷಿಸು ಕಾಂತೆಯೊಳಿಂದು ಕಾಂತಿ[ಯಂ] || ೨ ||

ಮ||ಸ್ರ|| ಕಚಬಂಧಂ . . . ಳದೃಕ್ಚುಂಬನ ಮಧರವದಂ ಗಂಡಸಾಲ್ಕುಳ್ದು (?) ರೇಖಾ |
ರಚನಾದೋರ್ಮೂಲಕಂಠಂ ಗ್ರಹಿತಕುಚವುರಸ್ತಾಂಡನಂ ನಾಭಿಸಂಘ ||
ಟ್ಟಚ . . . ಳಮನಗೃಹಂ ಜಾನುಗುಲ್ಫಾಂಘ್ರಿ ಜಂಘಾ ||
ದ್ಯುಚಿತಾಘಾತಂಗಳಿಂ ಪೆಣ್ಣೊ ಸೊರ್ಗುಮಮುರ್ದುಕೆಯ್ಯ್ ಸೋಂಕಿದಿಂದೂಪಲಂ
ಬೋಲ್ || ೩ ||

ಪರಿ–ಷಟ್ಪದಿ || ವನಿತೆಯ ರಂಗದೊಳಂಗಜಕಳೆ ಮೋ |
ಹಿನಿ ಜೃಂಭಿನಿಯುತ್ಪ್ರೀತಿಸುಖೋಮ ||
ಘನವುನ್ಮಾದಂ ಮಾನಸವೆಸೆವ ಜ್ವಾಲಾತೇಜಮಯಂ ||
ಜನಿತವಿದುತ್ತಂ ಕೂ . . . . ರಾ ||
ವಿನುತಸುದಾಮದ ಸಂಮಧುರಗಳಿಂ ||
ದೆನೆ ಪದಿನೈದೆನಿಸುವಿನಂ ಪೆಸರ್ಗಳನತನುಕಳಾವಿದರು || ೪ ||

ಭೋಗ-ಷಟ್ಪದಿ|| ಕುಸುಮಸರಸಕಳೆಸೆದರು |
ಸಸಿಕಳೆವೆಸರ್ಗಳನ್ನೃತಮಾನುಷ ಪೂ |
ತು . . . ತುಮ್ಮಿಪುಟೆ . . . ಷ್ಟಿಮಿಗೆ ಶಶಿದ್ರುತಿನಿ ||
ಶಶಿನಿಚಂದ್ರಿಣಿ ಕಾಂತಮಿಂ |
ಪೆಸೆವ ಜ್ಞಾನಂ ಪ್ರೀತಿ ರಾ |
ಜಿಸುವ ಕಾಮದ ಪೂರ್ಣಪೂರ್ಣತಿಗಳೆಂದು || ೫ ||

ತುರಂಗವೃ|| ನಂಬು ನೀಂ . . . ಮಿತ್ರಮೈತ್ರಮಿಸುನಾಮದಿಂ |
ದೆಂಬ ಪಂಚಬಾಣಮಂ ನಿಜಾಕ್ಷಿಚಾಪದಿಂ ಸರ ||
ಲ್ಗಿಂಬುವೆತ್ತು ರೋತ್ಕಚಾಕ್ಷಿಮೂರ್ಧಗುಹ್ಯದೊಳ್ ಮನೋ |
ಜಾಂಬು ಪಾಯ್ದುಗ್ಗಿಮಂಬುಜಾಕ್ಷಿಗಾಜ್ಯಮಗ್ನಿ ಗಂಡವೋಲ್ || ೬ ||

---

*ಶ್ರೀಮಚ್ಛಂಭವ ಜಿನಾಯನಮಃ.

ಕಂ|| ಘನಸಮ್ಮೋಹನ ಸಂತಾ |
ಪನ ಸಂದೀಪನ ವಶೀವ ಸಂಶೋಷಣ ಸಂ ||
ಜನಿತದ್ರಾವಣ ಮೆನೆ ಕಾ |
ಮನ ಸಮ್ಮ್ಯಙ್ಮಂತ್ರಪಂಚಬಾಣಾಖ್ಯಂಗಳ್ || ೭ ||

ಮ||ಸ್ರ|| ಶಿವನಂ ಮುಂ ಗೆಲ್ದ ಕಾಲಂ ದೊರೆಕೊಳಿಸಿದ ಬಪ್ಪಸ್ತ್ರವಂಗೋದ್ಭವಂಗಾ |
ದುವು ಕುಂದಂ ಸಿಂಧುವಾರಂ ಕುಮುದಕುವಲಯಂ ಪದ್ಮರಕ್ತಾಂಬುಜಾತಂ ||
ನವಶೀರ್ಷಂ ಚಂಪಕಂ ಕೇತಕಿ ವರಕದಳೀ ಮಲ್ಲಿಕಾ ಜಾತಿ ಚೂತಾಂ |
ಕ ವಶೋಕಂ ಪೊನ್ನೆ ದಲ್ ಪಾದರಿ ಯೆನೆ ಸತತಂ ಧಾತ್ರಿಯೊಳ್ ಷೋಡಶಾಖ್ಯಂ ||೮||

ಕಂ|| ನೆಗೞ್ದ ಶರಂಗಳಯ್ದೇ |
ಜಗಮಂ ಗೆಲೆ ಸಾಲ್ಗುಮೆಂದು ಕಮ್ಮಂಗಣೆಯಂ ||
ತೆಗೆದಂ ಕರ್ನೆಯ್ದಿಲ್ ಮ |
ಲ್ಲಿಗೆ ತಾವರೆ ಯಸುಗೆ ಮಾಮರಂಗಳನವಱೊಳ್ || ೯ ||

ಕಂ|| ಮತ್ತೆ ಮತಾಂತರಮುಂಟಾ |
ಗುತ್ತಿರೆಯುಂ ಸಾರಮಾತೆಱಮದಾದೊಡೆಯುಂ ||
ಬಿತ್ತರಿಸುವೆನತಿಮುದದಿಂ |
ಚಿತ್ತಜಕಳೆಯಱುವರೊಲ್ದು ಕೈವಾರಿಪಿನಂ || ೧೦ ||

ಚಂ|| ಸತಿಯರ ಮೂರ್ಧ್ನವಕ್ತ್ರವಮಳ್ಗೆಯ್ ಕುಚವೂರುಯುಗಂ ಸುನಾಭಿ ಲ
ಜ್ಜಿತದೆಡೆ ಭಾಳ ಕುಕ್ಷಿ ಯಡಿ ಬೆರ್ ಭುಜಮೂಲನಿತಂಬ ಪಾದದೊಳ್ ||
ಪ್ರತಿದಿನಮೊಲ್ದು ಕೃಷ್ಣ ಸಿತಪಕ್ಷದೊಳೇ ಕ್ರಮದಿಂ ಸ್ಮರಾಗಮೋ |
ದ್ಧತಱುಱುದೇಱು ಜಾನಿಸುಗೆ ಪೆರ್ಗೆರೆಯೊಳ್ ನೆರೆ ಷೋಡಶಸ್ಥಳಂ || ೧೧ ||

ಚಂ|| ಸರಸದೆ ಲಲ್ಲೆವಾತುಗಳನಾಗಿಸಿ ಮುಂದಲೆಯಂ ತುಡುಂಕಿ ಮುಂ |
ಗುರಲನವುಂಕಿ ತೋಳೆಳೆದು ಚುಂಬಿಸಿಯೊಷ್ಠಕಪೋಲಮಂ ತಗು ||
ಳ್ದಿರೆ ಪುಳಕಾಳಿ ಕೂರುಗುರ್ವೊಲನೊಡ . . . **ಪಾಡ್ಯ**ದೊಳ್ |
ಬೆರಸೆ ಮೃಗಾಕ್ಷಿಯರ್ಗತನುಕೂಪಜಲಂ ಪೊಱಪೊಣ್ಮಿ ಸೂಸುಗುಂ || ೧೨ ||

ಚಂ|| ಉಗುರ್ಗಳಿನೊತ್ತಿ ತೋಳ ಮೊದಲೊಳ್ ಬರಿಯೊಳ್ ಗೆರೆವೊಯ್ದು ಕಂಠ ದೃ |
ಗ್ಯುಗ ಕುಚಚೂಚುಕಂ ಕದಪು ಚೆಂದುಟಿಯೊಳ್ಮಿಗೆ ಚುಂಬನಂಗಳಂ ||
ಸೊಗಯಿಸಿ ತೀರ್ಚೆ ಚಪ್ಪಲರ್ವಿನಂ ಮೊಲೆತೆಕ್ಕೆಗೆ ಸಾರ್ದು ಕೂಡೆ ಪೊ |
ಣ್ಮುಗುಮಬಲಾಜನಕ್ಕು**ಭಯವಾಸರ**ದೊಳ್ಮದನಾಂಬುಧಾರೆಗಳ್ || ೧೩ ||

ಚಂ|| ನೆಗಪಿ ಕುರುಳ್ಗೆ ಕೆಯ್ದುಡುಕಿ ಪೀನ ಕುಚದ್ವಯಮಂ [ತೃತೀಯೆಯೊಳ್] |
(ಮೊಗಮಂ) ನಮರ್ಚೆ ಪಾರ್ಶ್ವದೆಡೆಗೊಂದಿಸಿ ಕೂರುಗುರೊಯ್ಯನೋಷ್ಠಮಂ ||
ಮಿಗೆ ಸವಿದಪ್ಪಿ ತೋಳ್ಮೊದಲಸಿಂತು ಪ್ರತಿಜ್ಞೆಯೊಳೊಲ್ದು ಕೂಟದೊಳ್ |
ನೆಗಳ್ವಿನಮಂಗಜಾಂಬು ಕೆಱಿಬಿರ್ಚಿದವೋಲ್ ಸತಿಯರ್ಗೆ ಪೊಣ್ಮುಗುಂ || ೧೪ ||

ಕಂ॥ ಮುಡಿಯರಸಪ್ಪಿಯೆ ಪೆರ್ಮ್ಮೆಲೆ |
ವಿಡಿದಧರಾಮೃತವನೀಂಟಿ ತೋಳ್ಮೊದಲೆಡೆಯೊಳ್ ॥
(ಪಿಡಿ) ದುಗುರನೊತ್ತಿ ಚುಂಬಿಸು |
ತೊಡಗೂಡಲ್ **ಚೌತಿ**ಯೊಳ್ಸ್ಮರೋದಕಮೊಸರ್ಗುಂ ॥ ೧೫ ॥*

ಚಂ॥ ಬಿಡದಮರ್ದಪ್ಪಿ ಬಾಹುಯುಗದಿಂ ಪುಳಕಾಂಕುರಮುಣ್ಮೆ ನಲ್ಮೆಯಿಂ |
ನುಡಿಯೆ ಬೆಡಂಗುವೀಱಿ ನಖದಿಂ ಕುಚದೊಳ್ಪೆಡೆಯೊತ್ತಿಯಂಕದೊಳ್ ॥
ಪಡೆದು ಸುರೇಖೆಯಂ ಸವಿದು ಚೆಂದುಟಿಯಂ ನೆರೆಯಲ್ಕೆ **ಷಷ್ಠಿ**ಯೊಳ್ |
ಕೊಡನೊಡೆದಂತೆ ಝುಲ್ಲನಿೞಿಗುಂ ಸತಿಯರ್ಗೆ ರತಾಂಬು ಮರ್ಮದೊಳ್ ॥ ೧೬ ॥

ಮ॥ ತಳದಿಂ ಕಾಮನಿವಾಸಮಂ ತಡವಿ ಗಾಢಾಲಿಂಗಸಂಗೆಯ್ದು ಹೃ |
ದ್ಗಳಕಂಠಸ್ಥಳಪಾರ್ಶ್ವದೊಳ್ ಸುಱಿಸಿ ಬಾಸುೞ್ದೋರೆ ಚಂಚನ್ನಖಾ ॥
ವಳಿಯಿಂ ಬಿಂಬಫಲಾದರೋಷ್ಠಮನಲಂಪಿಂದೀಂಟಿ ಸಂಭೋಗಿಸಲ್ |
ತಳರ್ಗುಂ **ಸಪ್ತಮಿ**ಯಲ್ಲಿ ಪೆಣ್ಪಡೆಗೆ ಕಂದರ್ಪಾಂಬುಧಾರಾಪ್ಲವಂ ॥ ೧೭ ॥

ಉ॥ ಭಾವೆಯರೊಳ್ ಕೊರಲ್ದೊಡರ್ದು ನಾಣೆಡೆನಾಳಿಕೆಲಂಗಳೊಳ್ |
ತೀವಿ ನಖಾಂಕಮಂ ಕುಚತಟಾಂತರಮಂ ತಡೆವುತ್ತೆ ಮುದ್ದುಗೊಂ ॥
ಡೋವದೆ ಪಲ್ಗಳಿಂದರದ ಮಧ್ಯಮನೀಡಿಱಿದುರ್ವೆ ರೋಮದಿಂ |
ಪಾವರಿಪನ್ನ**ಮಷ್ಟಮಿ**ಯೊಳಿಂತೊಡಗೂಡೆ ಪದಂ ತುಳುಂಕುಗುಂ ॥ ೧೮ ॥

ಮ॥ ತವಕಂ ಪುಟ್ಟೆ ಕುಚಂಗಳಂ ಪಿಡಿದು ಬಲ್ಪಿಂದೋಷ್ಠಪೀಯೂಷಮಂ |
ಸವಿದಾನಂದದೆ ಹಸ್ತದಿಂದೆಳವಿ ನಾಭೀಮೂಲಮಂ ತದ್ವಿಪ ॥
ಕ್ಷವನುದ್ಯನ್ನಖರಾಸ್ತ್ರದಿಂದೊರೆದು ಮೆಯ್ಯೊಳ್ವಾಷ್ಕಣ . . . ಶಿತೀ |
ವುವಿನಂ ಕ್ರೀಡಿಸೆ ಪೊಣ್ಮುಗುಂ **ನವಮಿ**ಯೊಳ್ ಪೆಣ್ಗಳ್ಗೆ ಕಾಮದ್ರವಂ ॥ ೧೯ ॥

ಕಂ॥ ಪರಿರಂಭಿಸಿ ನುಣ್ಗೊರಲೊಳ್ |
ಕರಜವನಿಟ್ಟೆಳವಿ ಬೆನ್ನುರಂ ಕಟಿಕುಚದೊಳ್ ॥
ಕರಮಂ ಪಣೆಯಂ ಚುಂಬಿಸಿ |
ನೆರಯಲ್ ಸತಿಯರ್ಗೆ **ದಶಮಿ**ಯೊಳ್ ದ್ರವಮಿೞಿಗುಂ ॥ ೨೦ ॥

ಪೀರ್ದಮರ್ದುಟಿಯಂ ತಳ್ಕಿಗೆ |
ಸಾರ್ದುರಮಂ ಮೋದಿ ಪಿಡಿದು ಕುಚಮಂ ಬಲ್ಪಿಂ ॥
ಪೋರ್ದ್ದೊಡವೆರಸಲ್ ಕಾಮಂ |
ಗೋರ್ದಬಲೆಯರೊಡನೆ ತೊಱೆವ**ರೇಕಾದಶಿ**ಯೊಳ್ ॥ ೨೧ ॥

ಸಾಧಿಸಿ ಪೆಣ್ಗಳನಪ್ಪು |
ತ್ತಾದರದಿಂ ನೋಡಿ ಗಂಡಮಂ ಚುಂಬಿಸಿಯಾ ॥
ಸ್ವಾದಿಸಿಯಧರಾಮೃತಮಂ |
ದ್ವಾದಶಿಯೊಳ್ ನೆರೆಯೆ ಕಾಮಮೊಸರ್ಗುವನೋಘಂ ॥ ೨೨ ॥

*ಪಂಚಮೀದಿವಸದ ಕಾರ್ಯಪ್ರಕಾರವು ಮೂಲದಲ್ಲಿ ಗಳಿತವಾಗಿದೆ.

ವಿನಯೋಕ್ತಿಯಿಂ **ತ್ರಯೋದಶಿ** |
ದಿನದೊಳ್ ಮೊಲೆವಿಡಿದು ಗಂಡಮಂಡಲದೊಳ್ ಚುಂ ॥
ಬನಮಂ ತೀರ್ಚಿ ಕೊರಲ್ಗುಗು |
ರ್ಗೊನೆದಾಗಿಸಿ ನೆರೆಯೆ ಸತಿಯರೊಡಲಂ ಮಱೆವರ್ ॥ ೨೩ ॥

ಸವಿದಧರಾಮೃತಮಂ ಮದ |
ನವಾಸದೊಳ್ ತಿರಿಪಿ ಬೆರಲನಂಸದೊಳುಗುರ್ವೊ ॥
ಯ್ಲವಿಸಿ **ಚತುರ್ದಶಿ**ಯೊಳ್ ಕೂ |
ಡುವಿನಂ ಪೆಣ್ಬಡೆಗೆ ಕಾಮಜಲಮುಚ್ಚಳಿಕುಂ ॥ ೨೪ ॥

(ಒಗೆಗುಂ) **ಪುಣ್ಣಮೆ**ಗಮವಾ |
ಸಿಗಳೊಳ್ ಮದನಾಂಬು ಕಾಂತೆಯರ್ಗುಗುರ್ಗೊನೆಯಂ ॥
ಪೆಗಲೊಳೆಳೆದತನುಗೃಹಮಂ |
ಪುಗಿಯಿಸಿ ಬೆರಲಿಟ್ಟು ತೀಡಿ ಕೂಟಮನೆಸಗಲ್ ॥ ೨೫ ॥

ವ॥ ಅದಲ್ಲದೆಯುಂ : —

ಕಂ॥ ಋತುವಾಗಿ ಮಿಂದ ದೆವಸಂ |
ಪ್ರತಿಪದಿ ತಾನಾಗಲುಂಗುಟಂ ಬಿಡಿದಿಂದು ॥
ದ್ಯುತಿಯಿಂ (ಲಕ್ಷಿ) ಸಿ ಮಂತ್ರ |
ಪ್ರತತಿಯುತಂ ಪಡೆಗೆ ಬಹುಳದಿಂ ಪೆಣ್ಣೊಲವಂ ॥ ೨೬ ॥

ಅಱಿಗತನುಶಾಸ್ತ್ರವಿದನಂ |
ತಿಱದೆ ಕಲಾಸ್ಥಾನಭೇದಮಂತ್ರಕ್ರಿಯೆಯಂ ॥
ನೆಱೆ ದಿವಸಕ್ರಮಮಂ ಮು |
ನ್ನಱದಾಚಾರ್ಯರ್ಕ್ಕಳುಸಿರ್ದ ವೈಕಲ್ಪಿತಮಂ ॥ ೨೭ ॥

ಗದ್ಯಂ

ಇದು ವಿದಿತಮದನ ಮುದ್ರಾಂಕಿತ ವಿದೂರಜನನಿಬಂಧನ
ಕಾರಾಗಾರಮುಮಭಿನವನಾಯಕನಾಯಿಕಾ
ಶೃಂಗಾರಸಾರೋದ್ಧಾರಮುಂ ಸಕಲ
ವಿಬುಧಸೇವ್ಯಮಾನಮುಂ
ಲಕ್ಷ್ಮಣ ಕವೀಂದ್ರ
ವಿರಚಿತಮು
ಮಪ್ಪ
ಮನ್ಮಥ ವಿಜಯದೊಳ್
ತೃತೀಯಾಶ್ವಾಸಂ — ಕಳಾಧಿಕಾರಂ
ಸಂಪೂರ್ಣಂ.
— ಮಂಗಳ ಮಹಾಶ್ರೀ —

ಚತುರ್ಥಾಶ್ವಾಸಂ*

ಅಂಶಾಧಿಕಾರಂ

ಕಂ|| ಪರಿವಿಡಿಯಿಂದಂಗನೆಯರ್ |
ಸುರನರಗಂಧರ್ವಯಕ್ಷರಾಕ್ಷಸಮುನಿ ಕಿ ||
ನ್ನರಗರ್ದಭವಾಯುಸವಾ |
ನರಭುಜಗಪಿಶಾಚ [ಕಾಖ್ಯ] ಪನ್ನೆರಡಂಶಂ ||೧||

ಚಂ|| ಗರುವಿಕೆ ದಾನಶಕ್ತಿ ಪತಿಭಕ್ತಿ ಗುಣೋನ್ನತಿ ಪೊರ್ದಿದಿಪ್ಪರಂ |
ಪೊರೆವ ಸುಬುದ್ಧಿ ನಿರ್ಮಲವಿಭೂಷಣಮುಜ್ವಲಪಂಕಜಾನನಂ ||
ಪರಿಮಳಿಪಂಗಸುಂದರತೆ ಸತ್ಪರತಂ ವಿನಯೋಕ್ತಿ ಭಾಗ್ಯವಿ |
ಸ್ತರಮಭಿಮಾನವೃತ್ತಿ ಮನದುತ್ಸವಮೊಪ್ಪೆ ಸುರಾಂಶವಂತವಳ್ ||೨||

ಕಂ|| ದೇವಾರ್ಚನೆ ತನುದಂಡನೆ |
ಭಾವೋದ್ಭವಕೇಳಿಯುತ್ಸವಂ ಪ್ರಿಯಜನಸಂ |
ಭಾವನೆ ಪಟ್ಟುರಿಸ್ಯಾದ್ವಾ |
ದಾವಳಿಯೊಳವಾದೊಡಱಿ ಮನುಷ್ಯಾಂಶದವಳ್ ||೩||

ರತಿರಾಗಂ ಕನಕಚ್ಛವಿ |
ಚತುರೋಕ್ತಿಸುಗಂಧಭೂಷಣಾಂಬರಮಾಲ್ಯಾ |
ಪ್ರತತಿಗೀತಪ್ರಯುಕ್ತ್ಯೋ |
ದ್ಧತೆ ಗಂಧರ್ವಾ [ಂಶದಾಕೆಯೆಂದಱಿಗೆ ಬುಧರ್] ||೪||

. . . . |
. . . . ||
. . . . ಥಂ |
ನಿರುಪಮಚತುರತ್ವದಬಲೆಯಕ್ಷಾಂಶದವಳ್ ||೫||

ಅತಿಸಾಸಿತೋ . . . . |
. . . . ||
. . . . |
. . . . ದೈತ್ಯಾಂಶಂ ||೬||

ಸರಸಾಲಾಪಂ ನಿರ್ಮ |
ತ್ಸರವಿನಯವಿವೇಕಮಾ . . . . ||
. . . . |
. . . . ಮುನ್ಯಂಶದವಳ್ ||೭||

---

*ಶ್ರೀಮದಭಿನಂದನ ಜಿನಕ್ರಮಾರವಿಂದಾಭ್ಯಾಂ ನಮಃ ||
೮|| ಗರ್ದಭವಾಯುಸ (?)—ಎಂದು ಆಶ್ವಾಸಾದಿಯಲ್ಲಿದೆ.

ಮಂಡನ ಪೂಮಾಲೆಗೊಱಿವ ಮತ್ಸರಿಸುವ ಮುಂ |
ಕೊಂಡ . . . . ||
. . . . |
. . . . ||೮||

. . . . |
. . . . . ತ್ವವಪಮಾನಂ ಮ ||
ತ್ಸರದುಶ್ಚರಿತ್ರವತಿ ನಿಷ್ಠುರ ಸುರತ |
. . . . ||೯||

. . . . |
. . . . ||
. . . . ನೊ |
ಙ್ಪರುವಕ್ರಕಟಾಕ್ಷಮೆಸೆವ ಪೆಣ್ ಕಾಕಾಂಶಂ ||೧೦||

. . . . |
. . . . ||
. . . . |
. . . . ಎಂದಿದಳ್ಕಪಿಯಂಶಂ ||೧೧||

ಕಡುನಿದ್ರೆಗೆಯ್ದು ನಿಜಪ |
. . . . ||
. . . . . ಪುಸಿನಾ |
ಙ್ಕೆಡಿಸಿಯೊಡಲನತ್ಯಶಸಂ . . . ಮಧುಮಾಂಸಂ ||೧೨||

. . . . |
. . . . ಗಂಧರ್ವಾಖ್ಯೆ ಯಕ್ಷದಿವಿಜಾಂ[ಶ ಸಮು] ||
ದ್ಭವೆಯ . . . . . |
. . . . ||೧೩||

ಗದ್ಯಂ

ಇದು ವಿದಿತಮದನ ಮುದ್ರಾಂಕಿತ ವಿದೂರಜನನಿಬಂಧನ
ಕಾರಾಗಾರಮುಮಭಿನವನಾಯಕನಾಯಿಕಾ
ಶೃಂಗಾರಸಾರೋದ್ಧಾರಮುಂ ಸಕಲ
ವಿಬುಧಸೇವ್ಯಮಾನಮುಂ
ಲಕ್ಷಣ ಕವೀಂದ್ರ
ವಿರಚಿತಮು
ಮಪ್ಪ
ಮನ್ಮಥ ವಿಜಯದೊಳ್
ಚತುರ್ಥಾಶ್ವಾಸಂ — ಅಂಶಾಧಿಕಾರಂ
ಸಂಪೂರ್ಣಂ.

—ಮಂಗಳ ಮಹಾಶ್ರೀ—

ಪಂಚಮಾಶ್ವಾಸಂ

ದೇಶಜವಿಭಾಗ ಸ್ತ್ರೀವರ್ಣನಾಧಿಕಾರಂ

ಕಂ|| . . . . |
. . . . ||
. . . . |
. . . ನನುಕ್ರಮದಿನುಚಿತ ಸಂಜ್ಞೆಗಳಿಂದಂ || ೧ ||

ಮ|| ನನೆಗೋಲುವ . . . . |
. . . ನ ಸನ್ಮಂದಿರೆ ನನ್ನಿಗಾಕರೆ ಕಳಾವಿಸ್ತಾರೆ ಸತ್ಕೀರ್ತಿ ಭಾ ||
ಜನೆ . . . . |
. . . . || ೨ ||

ಕಂ|| . . . . |
. . . . ಯಮಾರ್ಗಂ ||
ಮನ್ನಣೆಯ ಮಾತು ಲಲಿತಾಂ |
ಗನ್ನೇರ್ಪಟ್ಟಿಸಗುಮಂಧ್ರ . . . . . || ೩ ||

. . . . |
. . . . ||
. . . . ವೃತ್ತಿಕಾಯ್ದುಚಾಪಲ
ವನೃತಂ ಮಧು . . . ತೀಳುವಿತಿಗೆಸೆಗುಂ || ೪ ||

. . . . |
. . . . ||
. . . . |
. . . . ಮಲೆಯಾಳದವಳ್ || ೫ ||

ಸ್ವೈರಂ ವ್ಯವಹಾರ . . . . |
. . . . ||
. . . . |
. . . . || ೬ ||

ಸುರತೋತ್ಸವಮೊಪ್ಪುವ ಸಿಂ |
ಗರದೊಳ್ ಕಡುಜಾಣ್ಮೆಯುಚ್ಚ ಪೊಸ ಮೊ . . . ||
. . . . |
. . . . || ೭ ||

. . . . |
ರತಿಕಲಹಾಸಕ್ತೆ ವಿಮಲಮಾನಿಯತಿ ಮದೋ ||
ದ್ಧತೆ ಕೋಮಲ . . . . . |
. . . . || ೮ ||

. . . . |
. . . . ವೆ ಭೂರಿಕಾಮದ್ರವೆ ಸಾ ||
ಹಿತ್ಯಪ್ರಿಯೆ ವಾಗ್ವೈಭವೆ |
ಯತ್ಯಂತ ಜನಾನುರಕ್ತೆ . . . . . . || ೯ ||

. . . . |
. . . . ಸ ||
ದ್ಗಾತ್ರೆ ಬಹುದ್ರವೆ ನವಮುಖ |
ಚಿತ್ರಿತೆ ವಾಕ್ಪಟು ವಿಲಾಸವತಿ ಲಾಟದವಳ್ || ೧೦ ||

. . . . |
. . . . ||
. . . . |
ಸೊಬಗಿನ ಮೆಲ್ಪು ಸಿ[ತ್ರೆ](ರಿ)ಯವಳೆ ಕಾಶ್ಮೀರದವಳ್ || ೧೧ ||

ತಣಿವಿಲ್ಲದ ಕೂಟಂ ಮನ |
ಕಣ . . . . ||
. . . . |
. . . . ಣತಿಯರೊಳ್ || ೧೨ ||

ನಗು ನುಡಿ ಕಣ್ಸನ್ನೆಗಳಿಂ |
ಬಗೆಬುದ ಕುಲದೆರ್ದೆ·ವಿಭಿನ್ನನ . . ||
. . . . |
. . . . || ೧೩ ||

. . . ಡನವೆಳೆಲೆಡೆ ಗುಂಡುಗಳಿ |
ಗೊಡ್ಡುತಿರ್ದೆ ತೋರ್ಪಂ ಸಂಚಲಚಿತ್ತಂ ನಿಷ್ಕು(ರ)ರತಿಯೊಳಿಕೆ . . . ||
. . . . |
. . . . || ೧೪ ||

. . . . |
. . . . ||
ಡಲ್ಮುಡಿದನ್ನೆ ಪೆರ್ದೆಲೆಯತಿ |
ಕಲ್ಮಷಮನದಬಲೆ ಪಾಕದೇಶಕೆ ಸಲ್ವಳ್ || ೧೫ ||

ರತಿರ . . . . |
. . . . ||
. . . . |
. . . ತಕ್ಕೊಕ್ಕ್ತಿ ಹುರುವತಿಯಾರ್ಯದವಳ್ || ೧೬ ||

ಪಱಿವ ಸುರತಕ್ಕೆ ನಾಣ್ದೆ |
. . . . ||
. . . . |
. . . . ಜದವಳ್ || ೧೭ ||

ಸುರತೋತ್ಸವೆ ಮದ್ಯಮುಕಾ |
ತರೆ ಮಾಂಸಾಶಿನಿ ಕುರೂ . . . . ||
. . . . |
. . . . || ೧೮ ||

. . . ಕು ತಣಂ ಮೇ |
ಗಡರ್ದ ಕುಚಂ ಗೀತಗೋಷ್ಠಿ ನಿರ್ಮಲಚಿತ್ತಂ ||
ಬಿಡುಗಣ್ ಪದ್ಮಾಮೋದಂ |
. . . . || ೧೯ ||

. . . . |
. . . . ಪೀನನ ||
ಸ್ತನೆ ಸತ್ಯವಾಣಿ ಸತಿ ಸ |
ಜ್ಜನೆಯೆನಿಕುಂ ಮಗಧದೇಶದವಳನವರತಂ || ೨೦ ||

. . . . |
. . . . ||
. . . . |
. . . . . . ಮೆಯ್ದೆ ಗುರ್ಜರದವಳೊಳ್ || ೨೧ ||

ಸವಿನುಡಿ ಪೀನಕುಚಂ ರತಿ |
ರವ ಕಂಪೋ . . . . ||
. . . . |
. . . . || ೨೨ ||

ಕಡುಗೆಂಪಳಲ್ವಮೊಲೆ ಪಾ |
ಯ್ದೊಡಲ . . . . ಗನತ್ವಸನಂ ||
ನಿಡು . . . ಗು ಪಾಱುಗೆಯ್ತುದ |
ಮಡದಿಯರುಱೆ ಪಾರಶೀಕದವರೆಂದೆನಿಪರ್ || ೨೩ ||

ಆರಕ್ತವರ್ಣೆ ಮಾಂಸಾ |
ಹಾರೆ ವಿಶಾಲಾಕ್ಷಿ ಮೃದ್ವಿ ಲಜ್ಜಾನ್ವಿತೆ ಯಾ ||
ವಾರವಿದೆ ಯುಥದಿಸಮುಗಂ |
ಭೀರೆ ಕಳಾನಿಪುಣೆಯೆನಿಸುವಳ್ ಚೀನದವಳ್ || ೨೪ ||

ತ್ವರಿತಗತಿ ಸುರ್ಕುಗೊಂದಲ್ |
ಗುರುಕುಚ ವಸಿತಾಂಗವಧಿಕಸುರತಂ ಪಿಸುಣಾ ||
ದರದ ನುಡಿಯುಳ್ಳ ಶೋಭಾ |
ಕರಾಂಗಿಯರ್ ವಚನರಾಖ್ಯದೇಶಸ್ತ್ರೀಯರ್ || ೨೫ ||

ಕಳಶಕುಚೆ . . . ಬ್ದ ಶುಚಿ ನಿ |
ರ್ಮಳಗಾತ್ರೆಗುಣಾನುಬಂಧಿರತ್ಯುತ್ಸವ ನಿ ||
ರ್ಮಳಚಿತ್ತೆ ರೂಪವತಿ ಸಂ |
ಚಳನೇತ್ರ ವಿಲೋಲೆ ವಿಂಧ್ಯಭೂವಳಯದವಳ್ || ೨೬ ||

ಪುರುಷಾಯತನಿಧುವನ ತ |
ತ್ಪರೆ . ದ ಬೆಡಂಗಿ ಶುದ್ಧೆ ಮಾನೋನ್ನತೆ ಕಾ ||
ತರೆ ವಂಶವರ್ಣವರ್ಜಿತೆ |
ಕರಜಕ್ಷತಗಾತ್ರೆ ಯುತ್ಪ(ತ್ಕ)ಲದೊಳುದಿಸಿದವಳ್ || ೨೭ ||

ಸಿತಗೆ ಕಡುಹಾಱು ನಿಷ್ಠುರೆ |
ಮತಿವಿಕಳೆ ಸಮಾನಯೋಗಸಂತುಷ್ಟೆ ಮದೋ ||
ದ್ಧತೆ ಕಾತರಾಕ್ಷಿಯೇನಾ |
ಕೃತಯುತೆ ಸಂಭಾಷಿತಾತ್ಮೆಯೆನೆ ವಂಗದವಳ್ || ೨೮ ||

ಅತಿದೀರ್ಘ ವಿಕಟ ಕಠಿನಾ |
ಕೃತಿ ಯುಣ್ಮ್ರವ ಕಾಯ್ಪಿನಿಂ ಕಳಂಕತೆ ಯಾರ್ದ್ರೀ ||
ಕೃತಮದನಮಂದಿರಂ ರತಿ |
ಚತುರತೆ ಖಸದೇಶದಬಲೆಯರ್ಗೊಳವಕ್ಕುಂ || ೨೯ ||

ಎಸೆವ ಸುಸಿಲ್ ನೆಗಟ್ದ ಕಳಾ |
ಕುಶಲವಿಕಾಸತೆ ವಿಲೋಲಲೋಚನ ಚತುರೋ ||
ಕ್ತಿ ಸಮುಜ್ವಲತನುಧೂರ್ತಿತ |
ಹಸನತೆ . ನೀಱೆ ವೆಂಗಿನಾಡವಳೆನಿಕುಂ || ೩೦ ||
ಮತಿವಂತೆ ಕಾಮುಗೃಹವಿ |
ಶ್ರುತೆ ಯತಿನಿಷ್ಕಪಟಚಿತ್ತೆ ಯಭಿಮಾನಗುಣಾ ||
ನ್ವಿತೆ ರೂಢಿವೆತ್ತ ಸೌಂದರ |
ಚತುರೆ ಯೆನಲ್ ಸಂದ ಕಾಂತೆ ನೇಪಾಳದವಳ್ || ೩೧ ||

ತವದ . . .ಶ ಸ . . .ಚನಂ ಸಂ |
ತವಣೆಯ ನುಡಿ ಸಚ್ಚರಿತ್ರವಂಗಜರಾಗಂ ||
ಧವಳಾಕ್ಷಿ ನಗೆಮೊಗಂ ಗಾ |
ಡಿ ವಿವೇಕಂ ಸಾಜವಂಗದೇಶದ ಸ್ತ್ರೀಯೊಳ್ || ೩೨ ||

ಎಡೆಯಾದ ಪಲ್ಗಳಿಲ್ಲರೊ |
ಳೊಡನಾಟಂ ದುಷ್ಟಚೇಷ್ಟೆ ಕುತ್ಸಿತಮನ ವಿ |
ಟ್ಟೆಡೆಯೊಳೆ ಕೊಂಕುಗುರುಳ್ ಕೂ |
ರ್ತುಡುಗಿದ ನಾಣ್ ಚಕ್ರಕೋಟದಬಲೆಗೆ ಸಾಜಂ || ೩೩ ||

ಮಿಾಂಬೊಣರ್ಗಣ್ಣಸಿತಕುಚಂ |
ರಂಭೋರು ಸುವರ್ಣವರ್ಣವಲ್ಪಾಹಾರಂ ||
ಬಿಂಬಫಲೋಷ್ಠಂ ಮೃದುರತ |
ಸಂಭೋಗಂ ಮಗಧಸಂಭವೆಯರೊಳ್ ತೋರ್ಕುಂ || ೩೪ ||

ಚೆಲ್ಲಾಟಂ ಕಲಹಂ ರತಿ |
ಸಲ್ಲೀಲೆ ನಖಾಂಕತಾಡನ ಪ್ರೀತಿಕರಂ ||
ಬಲ್ಲತನಂ ಸಿರಿ ಕೈಗೈ |
ವುಲ್ಲಾಸದ ಚೆಲ್ವೆಯರ್ ಮುಕುಂದ ಸ್ತ್ರೀಯರ್ || ೩೫ ||

ಪೀನಕುಚಂ ಬಡನಡು ವ |
ಜ್ಞಾನನ ವತ್ಯುಚ್ಚನಾಸಿಕಂ ಗಜಗಮನಂ ||
ಮಿಾನಾಕ್ಷಿ ಕಳಶ ಕುಚವ |
ತ್ಯಾನಂದದ ಕೋಮಲಾಂಗಿಯರ್ ಗೌಳದವರ್ || ೩೬ ||

ರತಿಚಾಟುಚುಂಬನಪ್ರಿಯೆ |
ಕ್ಷತಕೃತ್ಯವಿನೋದಲಿ(ಶಿ)ೀಲೆ ಬಹು ಕಾಮುಸಮ ||
ರ್ಪಿತ ಸುಪ್ರೌಢಿ ಸರೋಜಾ |
ಯತಲೋಚನೆ ಪೀನಜಘನೆ ಸೌರಾಷ್ಟ್ರದವಳ್ || ೩೭ ||

ಕೃತಮಂತ್ರತಂತ್ರ ದೈವ |
ಜ್ಞತೆ ವಿದ್ರೂಪೆಸೆವ ಜಾಣ್ಮೆ ಪಾರುತರಂ ಸು ||
ವ್ರತೆ ಶಾಪಾನುಗ್ರಹ ಸ |
ನ್ನುತೆಯರ್ ಕಾಮಾಕ್ಷಿಹಿತ ವಿಷಯದಂಗನೆಯರ್ || ೩೮ ||

ಕುಲವರ್ತನೆ ಮನದಾಣ್ಮನೊ |
ಳೊಲವೊಳ್ನುಡಿ ನಿರ್ವಿಕಾರವಂಗಜರಾಗಂ ||
ಸಲೆ ಸಂದ ಕಾಂತೆಯರ್ ಪಾ |
ಟಲದೇಶದ ಪಾರಿಯಾತ್ರದೊಳೊ . . .ಸುಗುಂ || ೩೯ ||

. . . . .ಲ್ಮೆ ಕೂರ್ತು ಮೆಯ್ಯೊ |
ಡ್ಡುವ ಕೂರುಗುರ್ಗಳ್ಗೆ ಪೆಱಗುಗೈವ . . . . ||
. . . . . .ತ್ಸವೆಯರ್ ಮಾ |
ಳವಿಯಾಭೀರದ್ವಯೋರ್ವಿಯಬಲಾನೀಕಂ || ೪೦ ||

ಅನುರಾಗಮುಪರಿಸಂವೇ |
ಶನ ವತ್ಯಭಿಮಾನಹಾನಿ ನಖಂಡನಚುಂ ||
ಬನಾರ್ತೆಯರ್ . . . .ಭೂ |
ವಿಸುತೋತ್ಕಳಿಕಾಕಳಿಂಗದೇಶ ಸ್ತ್ರೀಯರ್ || ೪೧ ||

ಪರನಿಂದೆಯಾತ್ಮನುತಿಮ |
ಥ್ಯರಯಂಬನವೇಯ ಸತಿಗೆ ನಿತ್ಯಂ ಮಂದಂ ||
ತ್ವರಿತಂ ಮೃದುತರಗಾತ್ರಂ |
ದೊರೆಕೊಳ್ಗುಂ . . . ಮಧುರೆಯಬಲಾವಳಿಯೊಳ್ || ೪೨ ||

ವಿಕಟಾರ . . . ಹಳ ಪಾಪಾ |
ತ್ಮಕೆ ಧೂರ್ತೆ ವಿಗುಪ್ತದಬಲೆ ನಿದ್ರವ್ಯೆ ಮನಃ ||
ಪ್ರಕುಪಿತೆ ಪಿಂಗಳಲೋಚನೆ |
ವಿಕಳತೆ ಬರ್ಬರದ ಸುದತಿಯೆಂದೆನಿಸಿರ್ಪಳ್ || ೪೩ ||

ಇಲ್ಲದುದಂ ಬಯಸುವ ರತಿ |
ಯಲ್ಲಿ ಮನಂ ನಲಿವ ಬರ್ದೆ . . . .ಂಬಾಳದವಳ್ ||
ವಲ್ಲಭನ ಕೂರ್ಪ ಚದುರಿನ |
ಸೊಲ್ಲಿನವಳ್ ಕೋಶಲಾವನೀತಳಕುಱುವಳ್ || ೪೪ ||

ಕೂರ್ತಿನಿಯನ . . . .ಳ |
ತ್ಯಾರ್ತದೆ ದೃಢಸಂಗ . . . ಕೊನರ್ವ ಭಗೋ ||
ದ್ವರ್ತುಳ ದುಷ್ಕರ ಕರ್ಮನಿ |
ವರ್ತನೆಯರ್ ಕೋಸಲೋರ್ವಿಯಾ ಸ್ತ್ರೀರಾಜ್ಯಂ || ೪೫ ||

ಗಾಡಿಗೆ ನೆಲೆ ಗೊಲ್ಲಿತಿ ರ |
ತ್ಯಾಡಂಬರಕಾರ್ತಿ . . . ಯೆನಿಪ್ಪಳ್ ||
ನಾಡಂಗನೆ ಮಧ್ಯಸ್ತ್ರೀ |
ರೂಢಿಯನಾಂತಿರ್ಪ ನಿಶ್ಚರಿತ್ರೆ ಯೆನಿಪ್ಪಳ್ || ೪೬ ||

ಈ ಪೇಳ್ದ ದೇಶಜಸ್ತ್ರೀ |
ರೂಪಗುಣಪ್ರತತಿಭೇದಮಂ ತಿಳಿಗಖಿಳ ||
ವ್ಯಾಪಕವಿಶಾಲಮತಿಯುತ . . . |
ರೀಪತ್ತುಂ ಬಗೆಗೆ ವರ್ಪಿನಂ ಮನದೊಲವಿಂ || ೪೭ ||

ಗದ್ಯಂ

ಇದು ವಿದಿತಮದನ ಮುದ್ರಾಂಕಿತ ವಿದೂರಜನನಿಬಂಧನ
ಕಾರಾಗಾರಮುಮಭಿನವನಾಯಕನಾಯಿಕಾ
ಶೃಂಗಾರಸಾರೋದ್ಧಾರಮುಂ ಸಕಲ
ವಿಬುಧಸೇವ್ಯಮಾನಮುಂ
ಲಕ್ಷಣ ಕವೀಂದ್ರ
ವಿರಚಿತಮು
ಮಪ್ಪ
ಮನ್ಮಥ ವಿಜಯದೊಳ್
ಪಂಚಮಾಶ್ವಾಸಂ — ದೇಶಜವಿಭಾಗ ಸ್ತ್ರೀವರ್ಣನಾಧಿಕಾರಂ
ಸಂಪೂರ್ಣಂ.

—ಮಂಗಳ ಮಹಾಶ್ರೀ—

ಷಷ್ಠಾಶ್ವಾಸಂ

ಪ್ರಕೃತಿಭೇದವರ್ಣನಾಧಿಕಾರಂ

ಕಂ|| ಪ್ರಕಟಿಸುಗುಂ ವರವನಿತಾ |
ನಿಕರದೊಳುಱೆ ರಾಜಸಂ ಕರಂ ತಾಮಸ ಸಾ ||
ತ್ವಿಕದಸುವೆನೆ ತತ್ಕ್ರಮದಿಂ |
ಪ್ರಕೃತಿಗಳೆನಿಸಿರ್ಪ ವಾತಪಿತ್ತಶ್ಲೇಷ್ಮಂ ||೧||

ಚಂ|| ತಡೆದು ತೆರಳ್ವವೀರ್ಯವಸಿತಾಭರಣಾಕ್ಷಿನಖಂಗಳೆಯ್ದೆ ಕೆಂ |
ಪಡರ್ದ ಕುಚಂ ಹಿಮೋಷ್ಣತನುಹೀನಗುಣಂ ವೃಷಜಿಹ್ವೆಪೋಲ್ವ ನಾ ||
ಣಿಡೆ ಬಹುಭಕ್ತಿ ಬೇಸಗೆಯ ರಾತ್ರಿಯೊಳೊಂದುವಿಚ್ಛೆ ಯಿಂ |
ಪುಡುಗಿಗ ಮಾತು ಚಿತ್ರರತಿಯುಳ್ಳೊಡೆ ಮಾರುತದೇಹಿ ಯಂತವಳ್ ||೨||
ಕ್ಷಣಕುಪಿತ ಪ್ರಸನ್ನತಿಕೆ ಮಧ್ಯಗುಣಂ ಕಡುಗೆಂಪು ರಕ್ತಭೂ |
ಷಣನಖರಾಕ್ಷಿ ಶೀಘ್ರಚಲನದ್ರುತಿಪೇಶಲತೀಕ್ಷ್ಣಯೋನಿ ಬಿ |
ನ್ನಣದೆಸಕಂ ಬಿಸಿಲ್ನಿಡುಮೆಯ್ ಮಱೆಗಾಲದಿರುಳ್ ತ್ರಿಯಾಮದೊಳ್ |
ಪೊಣರ್ವ ರತಂ ಬೆಮರ್ ಕಟುಕಗಂಧವಿರಲ್ ಬಗೆ ಪಿತ್ತಮೊಂದಿದಳ್ ||೩||

ಮ|| ಸಲೆ ನೇಹಂ ಸಿತಭೂಷಣಂ ವೊಳೆ ದಲಗ್ಗ . . . ರುಗರ್ ಶ್ಯಾ |
ಮಲದೇಹಂ ರತಿಮಧ್ಯತೃಪ್ತಿ ಬಹುಶೈತ್ಯದ್ರಾವಣಂ ಸ್ನಿಗ್ಧಮಾಂ ||
ಸಲಗುಹ್ಯಂ ಮಧುರೋಕ್ತಿ ಯುತ್ತಮಗುಣತ್ವಂ ಗ್ರಂಥಿಗುಲ್ಫಂ ಹಿಮೋ |
ತ್ಕಲಿಮಗ್ರಂಥಿ . . . ಮವಾಂಛಿತರತಂ ಸಲ್ಗುಂ ಕಫಸ್ತ್ರೀಯರೊಳ್ ||೪||

ಕಂ|| ಪೈತ್ಯಕಫಸ್ತ್ರೀಯರ್ ಬಹು |
ಶೈತ್ಯೋಷ್ಣಂಬಡೆಗುಮೆಯ್ದೆಯಾದಿಪ್ರಸವಾ ||
ಪತ್ಯರ್ ದೊರೆಕೊಳೆ ವಾತಂ |
. . . ಂಥಳೊ ಮಿಕ್ಕಿರಲ್ ದೊರೆಕೊಳ್ಗುಂ ||೫||

ಗದ್ಯಂ

ಇದು ವಿದಿತಮದನ ಮುದ್ರಾಂಕಿತ ವಿದೂರಜನನಿಬಂಧನ
ಕಾರಾಗಾಮುಮಭಿನವನಾಯಕನಾಯಿಕಾ
ಶೃಂಗಾರಸಾರೋದ್ಧಾರಮುಂ ಸಕಲ
ವಿಬುಧಸೇವ್ಯಮಾನಮುಂ
ಲಕ್ಷಣ ಕವೀಂದ್ರ
ವಿರಚಿತಮು
ಮಪ್ಪ
ಮನ್ಮಥ ವಿಜಯದೊಳ್
ಷಷ್ಠಾಶ್ವಾಸಂ — ಪ್ರಕೃತಿಭೇದವರ್ಣನಾಧಿಕಾರಂ
ಸಂಪೂರ್ಣಂ

—ಮಂಗ ಮಹಾಶ್ರೀ—

ಸಪ್ತಮಾಶ್ವಾಸಂ

ಪ್ರಾಯೋಪಭೇದವರ್ಣನಾಧಿಕಾರಂ

ಕಂ|| ಪರಿಕಿಸೆ ಕಾಮಾಗಮದೊಳ್ |
ನಿರುತಂ ಪ್ರಾಯೋಪಭೇದವತಿಮುಖ್ಯತೆಯಿಂ ||
ದೊರೆವೆನಬಲೆಯರ ಗುಣವ |
ತ್ಸರದ ಪವಣ್ಬಗೆಯನಱಿವಿನಂ ಸಲೆ ವಿಬುಧರ್ || ೧ ||

ಮ|| ಕ್ರಮದಿಂ ಪನ್ನೆರಡಾಗೆ ಬಾಲಿಕೆಯದಿಪ್ಪತ್ತಾಗಿರಲ್ ಮುಗ್ಧೆ ಮ |
ಧ್ಯಮೆ ಮೂವತ್ತೊದವಲ್ ಪ್ರಗಲ್ಭೆ ನೆಱೆ ನಾಲ್ವತ್ತಾಗಿರಲ್ ವೃದ್ಧೆಯಾ ||
ಕ್ರಮಿಸಲ್ ಪಂಚದಶಾಬ್ದಸಂಖ್ಯೆ ಯಱುವತ್ತಾಗಲ್ಕೆ ತನ್ನಾಜ್ಞೆಯಂ |
ಪ್ರಮಿತಂ ಮಾಡಿ ಕಳಲ್ಚ'(ಗುಂ) ಕಡೆಗೆ ಪಂಚೇಷೂತ್ಕೆ ತತ್ಕಾಂತೆಯಂ || ೨ ||

ಚಂ|| ಪದನಱಿಪಲ್ಕಱಿಂ ನುಡಿಸಿ ಮೆಲ್ಲಗೆಯಿಂ ತಲೆಗುತ್ತಿ (ಮಾ) ಮಾನವಿ |
ರ್ದೊದವಿದ ಭೀತಿಯಿಂ ಮಱೆದು ನೋಡುತೆ ಲಜ್ಜೆಯೊಳೊಂದಿ ಹಾವಭಾ |
ವದ ಕುಱುಪೊಂದುಮುಂ ಪುಗದೆ ಸೊರ್ಕೆಳಸಲ್ ನೆವದಿಂದೆ ಬೆರ್ಚ್ಚಿ ನಿ |
ಲ್ಲದೆ ಕಡುಸಾರ್ದು ಮೊಪ್ಪುವಳೆ ಬಾಲಿಕೆ ಯೆಂದುಸಿರ್ವರ್ ಕಳಾವಿದರ್ || ೩ ||

ಚಂ|| ಒಳಸರಿದಿಪ್ಪ ಕೌಶಲದ ನಾಣ್ಬೆರಸೋಪನ ಮುಂದೆ ಲೀಲೆಯಿಂ |
ಸುಳಿವ ಮನಃಪ್ರಮೋದದೆ ಸುಸಿಲ್ಬಿನದಕ್ಕಿರದೆಯ್ದೆ ಚಿತ್ರದೊಳ್ ||
ತಳವೆಳಗಪ್ಪ ಪುಷ್ಪಮೃಗನಾಭಿಜ ಕುಂಕು [ಮಕರ್ಪುರಾ]ದಿಗ |
ಳ್ಗೆಳಸುವ ಬುದ್ಧಿಯಿಲ್ಲದಱ ಸತ್ಪದವರ್ತನೆ ಮುಗ್ಧೆಗೊಂದುಗುಂ || ೪ ||

ಉ|| ಪಿಂಗದೊಡಲ್ ಸುಗೂಢಹೃದಯಂ ಕಿಱಿದೊಂದಿದ ಲಜ್ಜೆ ಜಾಣ್ಮೆಯೊಳ್ |
ಸಂಗಳಿಸಿರ್ಪ ಚಾಟುವಚನಂ ನೆಱೆ ಡಾಳಕನಂ ತಗುಳ್ದು ಕೂ ||
ರ್ತಂಗಜಕೇಳಿಯೊಳ್ ತೊಡರ್ದು ನಿಲ್ವವೊಲಿಚ್ಛೆಗೆ ತರ್ಪ್ಪಬುದ್ಧಿ ನೀ ||
ಳ್ದಂಗವಿಬೋಧತತ್ಪರತೆಯುಳ್ಳೊಡೆ ಮಧ್ಯೆಯೆನಿಕ್ಕುಮಾವಗಂ || ೫ ||

ಮ|| ಎನಸು ವೈಶಿಕಶಿಕ್ಷೆಯೊಳ್ ಚಪಲೆ ಶೃಂಗಾರೋಜ್ವಲಾವಾಸೆ ಪು |
ರ್ಜನರಂ ಕೈತವದಿಂದೆ ಕೂರಿಸಿದವೊಲ್ ತನ್ನಿಚ್ಛೆಯಿಂ ಮಾಳ್ಪ ಮೋ ||
ಹನಸಂಪನ್ನಕೃತೋಪಚಾರಚತುರರ್ಗೀಪ್ಸಾಪ್ರದಪ್ರಾಜ್ಞೆಯಿಂ |
ಬಿನೊಳೊಂದಿರ್ಪ ರತಿಪ್ರಪಂಚೆ ಸತತಂ ಪ್ರಾಗಲ್ಭೆ ಶಾಸ್ತ್ರಜ್ಞರಿಂ || ೬ ||

ಮ|| ಅತಿಗಂಭೀರತೆಯಿಂ ಸಮಾನಗಳಿತಾಬ್ದಪ್ರಾಯಕಂಗೊಲ್ದು ಕಾ |
ಮಿತಮಂ ಕೊಟ್ಟೊಡಗೂಡುತಿರ್ಪ್ಪ ತರುಣೀಕಾಮೋಪದೇಶಂಗಳಿಂ ||
ಸತತಂ ಬಿತ್ತರಿಸಿರ್ಪ್ಪ ಮುಂಬರೆಯದೊಳ್ ತಾಗಿರ್ದುದಂ ಪೇಳ್ವ ಭಾ |
ವಿತನಂ ಕೈಮಿಗೆ ತೋರ್ಪ ಶೀಲವತಿಗಕ್ಕುಂ ವೃದ್ಧೆಯೆಂಬಾ ಪೆಸರ್ || ೭ ||

ಉ|| ಮೇಳದ ಪೆಣ್ಗಳಿಂ ತಿಳಿಪಿ ಬಾಲೆಯನಿಚ್ಛೆಗೆ ತಂದು ಮುಗ್ಧೆಯಂ |
ಕೇಳಿವಿಶೇಷದೊಳ್ ತೊಡರ್ದು ಮಧ್ಯಮೆಯಂ ಬಗೆದೋಱ ಪೊಲ್ವವೋಲ್ ||
ಕೌಳಿಕದಿಂ ಪ್ರಗಲ್ಭೆಯನಲಂಪಿನೊಳೆಂದುದುಗೆಯ್ದು ಪೆರ್ಮೆಯಿಂ |
ದಾಳಿಸಿ ವೃದ್ಧೆಯಂ ಚದುರರೀಕ್ರಮದಿಂದವೆ ಗೆಲ್ಗೆ ಸಂತತಂ || ೮ ||

ಗದ್ಯಂ

ಇದು ವಿದಿತಮದನ ಮುದ್ರಾಂಕಿತ ವಿದೂರಜನನಿಬಂಧನ
ಕಾರಾಗಾರಮುಮಭಿನವನಾಯಕನಾಯಿಕಾ
ಶೃಂಗಾರಸಾರೋದ್ಧಾರಮುಂ ಸಕಲ
ವಿಬುಧಸೇವ್ಯಮಾನಮುಂ
ಲಕ್ಷಣ ಕವೀಂದ್ರ
ವಿರಚಿತಮು
ಮಪ್ಪ
ಮನ್ಮಥ ವಿಜಯದೊಳ್
ಸಪ್ತಮಾಶ್ವಾಸಂ—ಪ್ರಾಯೋಪಭೇದವರ್ಣನಾಧಿಕಾರಂ
ಸಂಪೂರ್ಣಂ.
—ಮಂಗಳ ಮಹಾಶ್ರೀ—

ಅಷ್ಟಮಾಶ್ವಾಸಂ

ಮೋಹಭಾವೇಂಗಿತವರ್ಣನಾಧಿಕಾರಂ

ಕಂ|| ವಿದಿತಪುರಾಕೃತಪುಣ್ಯಾದಿ |
ನೊದವಿದ ಕಾಂತಾಮನಃಸುಖಪ್ರೀತಿ ಚತು ||
ರ್ವಿಧಮಾಯ್ತ್ತಱಿಂಗಭ್ಯಸಜನ |
ಸದೃಶಜಮಭಿಮಾನಸಂಭವಂ ವೈಷಯಿಕಂ || ೧ ||

ವನವಾರಿಕೇಳಿ ಶುಕಜ |
ಲ್ಪನಹಾಸ್ಯಂ ಗೀತಮುಖ್ಯವೀಣಾವಾದ್ಯಂ ||
ವಿನಯೋಕ್ತಿ ಶಿಲ್ಪವಿದ್ಯಾ |
ದ್ಯನುಭವದಿಂ ಪ್ರೀತಿಯಪ್ಪುದಭ್ಯಾಸಜನಂ || ೨ ||

ಆದರದಿಂ ಪ್ರಿಯನ ವಯೋ |
ಭೇದಗುಣೋಕ್ತಿಸ್ವಭಾವರೂಪಾಳಿ(ದಿ)ಗಳ ||
ನ್ಯೋದಿತಮಾಗಲ್ ಕೂರ್ತಿರೆ |
ಸಾದೃಶ್ಯಪ್ರೀತಿ ನಾಮದಿಂದೆಸೆದಿರ್ಕ್ಕುಂ || ೩ ||

ಅಱಿಪದೆ ಕಳಾವಿಶೇಷಮ |
ನೆಱಕದೆ [1]ಚುಂಬನನಖಕ್ಷತಾದಿಕ್ರಿಯೆಯಿಂ ||
ಮೆಱೆ [ದತಿ] ಸೌಖ್ಯಾತಿಶಯದೆ |
ನೆಱೆದಿರ್ದಭಿಮಾನಸಂಭವಂ ಪ್ರೀತಿ ಕರಂ || ೪ ||

ಪ್ರಿಯನ ಗುಣಕಥನಕೌಶಲ |
ನಯನೀತಿಪ್ರಭೃತಿಚಿಂತಿತವ್ಯಾಪಾರ ||
ಕ್ರಿಯೆಯಿಂದಂಗನೆಯರನನು |
ನಯದಿಂ ತತ್ಪ್ರೀತಿ ವೈಷಯಿಕಮೆಂದೆನಿಕುಂ || ೫ ||

ಉ|| ನೂತನಯೌವನಸ್ಥೆ ಮಧುಮತ್ತೆ ವಿಯೋಗನವಜ್ವರಾಂಗಿ ಕಾ |
ಮಾತುರೆ ನರ್ತನಸ್ಥಗಿತಗಾತ್ರೆ ಪಥಿಶ್ರಮೆ ಮಾಸಸೂತೆ ಮೋ ||
ಹಾತಿಶಯಪ್ರಪಂಚೆ ಯುಱುದಿಂಗಳಗರ್ಭಿಣಿ ಕೋಪಶಾಂತೆ ಸಂ |
ಜಾತಲಸದ್ವ್ರತಸ್ನಪನೆಯೊಳ್ ನೆರೆದಂದತಿಸೌಖ್ಯಮೆಯ್ದುಗುಂ || ೬ ||

ಮ||ಸ್ರ|| ಪದೆಪಿಂದಾತ್ಮೇಶನೊಳ್ ಕೇಕರರುಚಿಗೆದಱುತ್ತಾಂಡುಗಚ್ಚುರ್ತ್ತೆ ಧಮ್ಮಿ |
ಲ್ಲದ ಪೂವಂ ಸೂಸುತುಂ ಮೇಲ್ವೊದಕೆಯನನುಗೆಯ್ವುತ್ತೆ ಸೈತಾಗಿಸುತ್ತು ||
ಟ್ಟುದನಿಂತೀ ವ್ಯಾಜದಿಂ ಸೂಸುವ ಪುಳಕಮುಮಂ ತಾಳ್ವ ತತ್ಕಾಂತನೊಲ್ದ |
ಟ್ಟಿದ ವಿತ್ತಂಗೊಳ್ವ ತದ್ಧ್ಯಾನದೊಳೆ ಮನದೊಳ್ಪಾಟಕೂಡಿರ್ದ ಪೆಣ್ಗಳ್ || ೭ ||

1. . . ಡನನಖ

ಮ|| ಇನಿಯಳ್ ನಲ್ಲನ ಕೂಟದೊಳ್ ತಳೆದ ಭಾವಂ ಭಾವಿಸಲ್ಕೂರುಕಂ |
ಪನವೆಟ್ಟಂಗರುಹಂ ಬೆಳರ್ತ ತುಟಿ ಕೆಂಪೇಱಿರ್ದ ಮುಗ್ಧಾಕ್ಷಿ ಮೂ ||
ರ್ಛನಶೈಥಿಲ್ಯಕುಚಂ ಪ್ರಸನ್ನವದನಂ ದೇಹಶ್ರಮತ್ವಂ ಬೆಮ |
ರ್ವನಿ ಸೋಲ್ ದಂತನಖಕ್ಷತಂ ಸ್ಖಲಿತನೀವೀಬಂಧದಿಂ ಕೂಡುಗುಂ || ೮ ||

ಕಂ|| ಸುರತಸುಖಮೆಯ್ದುದಂಗನೆ |
ವರನಂ ತಳ್ಕೈಸಿ ಮೋಹನಂಬಿಡದಧರಂ ||
ಸ್ಫುರಯಿಸೆ ಕೋಪದೆ ಭಗಮಿ |
ಟ್ಟೊರಸಿಯೆ ತಾಂ ಸುಯ್ದು ಬಯ್ದು ಸುಱ್ರನೆ ಸುಯ್ವಳ್ || ೯ ||

ಮ||ಸ್ರ|| ಬಗೆ ಬೆಚ್ಚಂತಿರ್ದೊಡೇಂ ಕೂಟಕೆ ಮನವೆಳಸಲ್ ಸೋಂಕೆ ನಿಲ್ಲಳ್ ಪ್ರಮೋದಂ |
ಮಿಗೆ ಮಾತುಂಗುಟ್ಟಳೆಮ್ಮೊಳ್ ನಿನಗಭಿಲಷಮೇಕೆಂಬಳೊಲ್ದಿಯ್ದೆ ನೋಡಳ್ ||
ಮೊಗಮಿೀಯಳ್ ಚುಂಬನಕ್ಕೋಪನ ಕೆಳೆಯರೊಳಾಳಾಪಿಸಳ್ ನಣ್ಪನೊಕ್ಕು |
ಜ್ಜುಗಿಪಳ್ ವೈರಾಗ್ಯಮಂ ಸೆಜ್ಜೆಯೊಳೆ ಮುನಿಸುದಾಳ್ದಿರ್ದ ಪೆಣ್ ಸ್ವೇಚ್ಛೆಯಿಂದಂ || ೧೦ ||

ಮ|| ಸುರತಂ ತೀರ್ದಬಲಾಕಳಾಗಳಿತವಪ್ಪಾಸಾರ್ದುತೊಪ್ಪುಷ್ಣವಂ |
ಗರುಹಂ ಕಂಪನವಾಡುತಂಸವಿಱಿದೋಷ್ಠಂ ಮುಚ್ಚುಗಣ್ ಬಾಷ್ಪನಾ ||(?)
ಙ್ಗಿರತಾನಂದದೆ ರೆಘೋಂಪಿಸುತ್ತೊಲೆವ ದೇಹಂ ವೀಟಿಕಾಬ್ಜಪ್ರಿಯಂ |
ಸರಸೋನ್ಮಾದದ ಚೇಷ್ಟೆ ತತ್ಪ್ರಿಯನಿರೋಧಸ್ವಾಂತಮುಂ ರಂಜಿಕುಂ || ೧೧ ||

ಮ|| ಮಿಗೆ ಕೂರ್ತೀಕ್ಷಿಸಲೊಂದು ಚಿಂತಿಸಲೆರಡೞ್ ಸಂಕಲ್ಪಿಸಲ್ ಮೂಱು ನಿ |
ದ್ರೆಗೆಡಲ್ ನಾಲ್ಕು ಕೃಶತ್ವಮಂ ಪಡೆದಿರಲ್ಕೈಯ್ದನ್ನಪಾನಕ್ರಿಯಾ ||
ದಿಗಳಂ ಬಿಟ್ಟಿರಲಾಱು ನಾಣ್ದೊಱೆಯಲೇೞ್ ಭ್ರಾಂತೊಂದಿರಲ್ಕೆಂಟು ಮೂ |
ರ್ಛೆಗೊಳಲ್ಕೊಂಬತು ಸಾವಿಗುಜ್ಜುಗಿಸಲಕ್ಕುಂ ಪತ್ತವಸ್ಥಾಂತರಂ || ೧೨ ||

ಚಂ|| ಪೊಱಮಡಲೊಂದು ಕಾಯ್ಪೆರಡು ಕೂಳ್ಕೆ ಮೊಗಂದೆಗೆಯಲ್ಕೆ ಮೂಱು ಮ |
ತ್ತಱ ಮುನಿಯಲ್ಕೆ ನಾಲ್ಕು ನುಡಿಗೇಳದವೋಲಿರಲಯ್ದು ಮರ್ಮಮಂ ||
ಕುಱಿಪಿಡಲಾಱು ಬಚ್ಚಬಱಪಾಡಿನೊಳೇೞತಿನಿದ್ರೆಯೆಂಟು ಯೇ |
ಗುಱುನಿಲಲೊಂಬತದ್ರವರತಿತ್ವದೆ ಪತ್ತಿವು ಪೋದ ನಲ್ಮೆಗಳ್ || ೧೩ ||

ಕಂ|| ಅತಿಶಯದೆ ಮೋಹಭಾವೇಂ |
ಗಿತಮಂ ಬಿತ್ತರಿಪೊಡಂತದಪರಿಮಿತಂ ಕ ||
ಲ್ಪಿತವೊಪ್ಪುಱುವೆನ್ನಿಂದಂ |
ಮತಿಗೊಳಗಾದನಿತನೀಗಳಿಳೆಗಱ ಪೇೞ್ದೆಂ || ೧೪ ||

ಗದ್ಯಂ

ಇದು ವಿದಿತಮದನ ಮುದ್ರಾಂಕಿತ ವಿದೂರಜನನಿಬಂಧನ
ಕಾರಾಗಾರಮುಮಭಿನವನಾಯಕನಾಯಿಕಾ
ಶೃಂಗಾರಸಾರೋದ್ಧಾರಮುಂ ಸಕಲ
ವಿಬುಧಸೇವ್ಯಮಾನಮುಂ
ಲಕ್ಷಣ ಕವೀಂದ್ರ
ವಿರಚಿತಮು
ಮಪ್ಪ
ಮನ್ಮಥ ವಿಜಯದೊಳ್
ಅಷ್ಟಮಾಶ್ವಾಸಂ—ಮೋಹಭಾವೇಂಗಿತವರ್ಣನಾಧಿಕಾರಂ
ಸಂಪೂರ್ಣಂ.
—ಮಂಗಳ ಮಹಾಶ್ರೀ—

ನವಮಾಶ್ವಾಸಂ

ಪ್ರಮಾಣಾ[ಕಾಲವೇಗಕ್ರಮಾ] ಧಿಕಾರಂ

ಕಂ|| ಬಿಡದೆ ಮೋಹಪ್ರಪಂಚಂ |
ದೊಡೆವನುಭವಿಗಳ್ಗೆ ಸಾರಸತ್ವಗುಣಮುಮಂ ||
ಪಡೆದೊಳ್ಗೊಟಮುದೆಂದೊ |
ಳ್ಪೊಡರ್ವಣ್ನಂ ಪೇಲ್ವೆನಿರದೆ ತದ್ವಿಸ್ತರಮಂ || ೧ ||

ಎಸೆಗುಂ ಶಶವೃಷಹಯ[ರ್ಗು] |
ಲ್ಲಸಿತಧ್ವಜಮುಂ ಕುರಂಗಿ ಹಯಹಸ್ತಿಹಯ ||
ರ್ಗಸಮಾಸ್ತ್ರಗೆ ಹಯಮುಂ ಲೆ |
ಕ್ಕಿಸಲಾಱೊಂಬತ್ತು ಪನ್ನೆರಟ್ಬೆರಲುದ್ದಂ || ೨ ||

ಚಂ|| ನೆಗಲ್ದಿ ಶಶಂ ಕುರಂಗಿ ವೃಷನಶ್ವಿ ಹಯಂ ಗಜಸತ್ವೆಯೊಳ್ ಸಮಂ |
ಮೃಗಿ ವೃಷನಶ್ವಿವಾಡಬರೊಳುನ್ನತಿ ಯಲ್ಪರತಂ ಶಶಾಶ್ವಿ ನೆ ||
ಟ್ಟಗೆಯಭಿರಾಗನಾವೃಷರೊಳತ್ಯಧಿಕಂ ಮೃಗಿಯಶ್ವರಿರ್ವರೊಳ್ |
ಮಿಗೆ ಕಿಱಿದಾಗಿ ಸಂದುದಿಭಿಕಾಶಶದೊಳ್ ಸುಸಿಲೊಂಬತೀ ತೆಱಂ || ೩ ||

ಮ||ಸ್ರ|| ನಿಯತಂ ಪೇೞೊಂಬತುಂ ಯೋಗದೊಳಿರದೊಗೆಗುಂ ಮಂದಮಧ್ಯಸ್ಥಚಂಡ |
ತ್ರಯವೇಗೋದ್ಭೇದಮಂತಾರಚನೆ ಮೊಗದಿನಂ ಲಲ್ಲೆಗೆಯ್ವಲ್ಪಚಿಹ್ನ ||
ಪ್ರಯುತಂ ಸೈತೊಂದೆ ಮಂದಂ ಮೃದುಕಠಿನತರಾಳಾಪಸಂಶ್ಲೇಷಘಾತ |
ಕ್ರಿಯೆಯಿಂ ಮೆಯ್ಗೂಡೆ ಮಧ್ಯಂ ಚಲಿಸದೆ ತೊಡರ್ದತ್ಯುಗ್ರದಿಂ ಕೂಡೆ ಚಂಡಂ
|| ೪ ||

ಕಂ|| ಆದಿಮಧ್ಯಾಂತದೊಳ್ ಮದ |
ನೋದಿತ ಲಘುಮಧ್ಯ ಚಿರಸುಕಾಲತ್ರಯದಿಂ ||
ದಾದುದು ವೇಗಂ ಕಾದಲ |
ರ್ಗಾದಂ ಶ್ಲಥಮಧ್ಯಲಘುವೆಸರ್ ನೆಗಲ್ದುದಱಿಂ || ೫ ||

ಚಂ|| ಕಡುಗರಿದಾಗಿ ತೋರ್ಪಸಿಯದೇಹದ ತಗ್ಗಿದ ಕಕ್ಷವೇ ಸರಿ |
ಲ್ಗಿಡಿಗೊಡಲೀವ ಸಾಹಸದವಳ್ ಶ್ಲಥಮೊರ್ಮೊದಲುರ್ವಿತೋರ್ಪ ಮೇ || (?)
ಗಡರ್ದ ಕುಚಂ ಕುಬುದ್ಧಿ ರತಿಕಾತರಚಾಪಲದಂಗದಾಯತಂ |
ಬಡೆದುರು ಗೌರವರ್ಣದೆಳೆಯಳ್ ಜನಮಧ್ಯಮೆಯೊಂದಲೀತೆಱಂ || ೬ ||

ಕಂ|| ಬಾಲೆ ಘನೆಯಾಗೆ ಬಾಹ್ಯರ |
ತಾಲಂಬನದೊಳ್ಳಥತ್ವೆ?ಯಾಗಲ್ ಪ್ರೌಢ ||
ಸ್ತ್ರೀಲೀಲಾಭ್ಯಂತರರತಿ |
ಲೋಲತ್ವದೆ ಮಧ್ಯೆ ಮಧ್ಯಮತ್ವದೆ ನೆಗಲ್ಗುಂ || ೭ ||

ದೇಶಕಾಲಸ್ವಭಾವವಿ |
ಶೇಷಸಖೀಬೋಧೆಮಂತ್ರತಂತ್ರಾದಿಕಳಾ ||
ಕೌಶಲದಿಂ ಶ್ಲಥೆಯಂ ಚಲ |
ನಾಸೆಯನಾಗಿಸುಗೆ ರತಿಯ ಕಡೆಯೊಳ್ ಚದುರಂ || ೮ ||

ಮ||ಸ್ರ|| ಸುರತಪ್ರಾರಂಭಮೂರ್ಛಾಶ್ಲಥನಳಿಗಿಳಿಹಂಸಾಳಿಯುದ್ಯಾನಪದ್ಮಾ |
ಕರಮಂದಾನೀಳನಂತಾ ಪೊಸತಹ ಸಹಕಾರಾದಿಕಾಂತಪ್ರಸೂನೋ ||
ತ್ಕರಕೇಳೀಶೈಲಶೃಂಗಪ್ರಮುಖನಿವಹಮಂ ಮೇಣ್ ತರುವ್ರಾತಶಾಖಾ |
ಚರಕಾಪೇಯಂಗಳಂ ಜಾನಿಸೆ ಯೊಡೆದೊಸರ್ಗುಂ ಕೂಟದೊಳ್ ಭೂರಿವೀರ್ಯಂ ||
|| ೯ ||

ಕಂ|| ಸಮನಿಸೆ ಸಮಾನುಯೋಗ |
ಕ್ರಮಮುತ್ತಮಮುಚ್ಚನೀಚಸಂಯೋಗಂ ಮ |
ಧ್ಯಮಮತ್ಯುಚ್ಚರತಂ ನೀ |
ಚಮಾರ್ಗಯೋಗಂ ವಿಚಾರಿಸಲ್ಕತಿಕಷ್ಟಂ || ೧೦ ||

ಕಾಂತಾಜನೋಚ್ಚಗುಹ್ಯಾ |
ಭ್ಯಂತರಸಂಚಾರನೀಚಮೇಹನದಿಂ ಮೂ ||
ರ್ಚ್ಛಾಂತಂ ಸುಖ[1]ಮಾಗದು ವೀ |
ರ್ಯಂ ತಳರದು ಕಂಡು ಪಿಂಗದೆಯ್ದದು ಹರ್ಷಂ || ೧೧ ||

ಮೃದುನೀಚಮಾನಮನ್ಮಥ |
ಸದನಮನುಚ್ಚಧ್ವಜಾಭಿಘಾತಕ್ರಿಯೆಯಿಂ ||
. . . ನಮಂ ನೆಗಟಲ್ ನೋ |
ವೊದವಿಕ್ರ್ಕಮತೃಪ್ತಿಯದ್ರವತ್ವದಿನೆಂದುಂ || ೧೨ ||

ಸತಿಯರ್ ಋತುರಜಮಾನಾ |
ಗತಮ್ಮದುಮಧ್ಯೋಗ್ರಶಕ್ತಿಸೂಕ್ಷ್ಮಾಕೃತಿವೆ ||
ತ್ತತನುಗ್ರಹಯುಕ್ತಕಂಡೂ |
ತಿ . ತ್ರಿ ಯುತರ್ಗೆ ಪೊಯ್ವುದುಚ್ಚಧ್ವಜದಿಂ || ೧೩ ||

1. ದೊರಕದು

ಸಾಗಿಪುದೀಮಾರ್ಗದೆ ಕಾ |
ಮಾಗಮಿಕರ್ ಸತತಮುಂ ಪ್ರಮಾಣಂ ಕಾಲಂ ||
ವೇಗಂ ಕ್ರಮದಿಂ ನವವಿಧ |
ಮಾಗಲ್ ಮೂದೆಱದಿನೊದವಿದಿರ್ಪ್ಪತ್ತೇೞುಂ || ೧೪ ||

ಗದ್ಯಂ

ಇದು ವಿದಿತಮದನ ಮುದ್ರಾಂಕಿತ ವಿದೂರಜನನಿಬಂಧನ
ಕಾರಾಗಾರಮುಮಭಿನವನಾಯಕನಾಯಿಕಾ
ಶೃಂಗಾರಸಾರೋದ್ಧಾರಮುಂ ಸಕಲ
ವಿಬುಧಸೇವ್ಯಮಾನಮುಂ
ಲಕ್ಷಣ ಕವೀಂದ್ರ
ವಿರಚಿತಮು
ಮಪ್ಪ
ಮನ್ಮಥ ವಿಜಯದೊಳ್
ನವಮಾಶ್ವಾಸಂ—ಪ್ರಮಾಣ[ಕಾಲವೇಗ]ಕ್ರಮಾಧಿಕಾರಂ
ಸಂಪೂರ್ಣಂ.
—ಮಂಗಳ ಮಹಾಶ್ರೀ—

ದಶಮಾಶ್ವಾಸಂ

ಮರ್ಮಭೇದಾಧಿಕಾರಂ

ಕಂ|| ಪಲವಱಿಕೊಳ್ಳೇನಱಿಗೆ ಸುಸಿಲ್ |
ನೆಲೆಗುರುವುಪಚಾರ ಸಾಧನದ್ರವ್ಯಮನಾ ||
ಕುಲರಹಿತಮಪ್ಪ ಸೌಖ್ಯದ |
ನೆಲೆಯೆನಿಸುವ ಮರ್ಮಭೇದಮಂ ನೆಱಿ ಪೇೞ್ವೆಂ || ೧ ||

ಮ|| ನಗರೀ ಸುಸ್ಥಳನಿರ್ಮಿತಂ ಕುಸುಮಮಾಲಾಕೀರ್ಣಿತಂ ಚಿತ್ರಭಿ |
ತ್ತಿ ಗವಾಕ್ಷಂ ನವಧೂಪಗಂಧಮಿಳಿತಂ ದೀಪಪ್ರಭಾರಂಜಿತಂ ||
ಮೃಗನಾಭಿಪ್ರಯುತಾಂಬುಸೇಚನಕರಂ ಪ್ರೇಂಖದ್ವಿಪಾನಂ ಸುಕೇ |
ಳಿಗೃಹಂ ಭೋಗಿಜನಪ್ರಮೋದಜನಕಂ ತಾನಪ್ಪುದಿಂತಾವಗಂ || ೨ ||

ಉ|| ಕಾಂಚನಮಂಚಮಂಚೆನವಿರ್ಾಸೆಲೆದಟ್ಟೊಳುವೀಳೆಯಂ ಮನ |
ಕ್ಕಿಂಚರವೀವ ಪಕ್ಕಿಪಡೆ ಕೌಳುಡೆ ದೀವಿಗೆ ವೀಣೆ ಕಮ್ಮಲರ್ ||
ಮಿಂಚುವ ರನ್ನಗನ್ನಡಿ ವಿಲೇಪನಚಂದನವಾರಿ ಗಿಂಡಿ ಲಾ |
ಮಂಚದ ವೀಜನಂ ಪಲಸರಂ ಪಡಿಗಂ ರತಿಗೇಹಮೊಪ್ಪುಗುಂ || ೩ ||

ಮ|| ಮನಮಂ ಸೋಲಿಪ ಗಾಡಿವೆತ್ತೆಸೆವ ಪೆಣ್ಗೊಟಕ್ಕೆ ತತ್ಕಾಂತನಿಂ |
ಬಿನೆ ಕೊಟ್ಟೊಳ್ಪಿದನಿಂಗಿತಜ್ಞನಱಿವಂ ಸಂಗೀತಸಾಹಿತ್ಯರಂ ||
ಜನನುತ್ಸಾಹಿ ರತಿಪ್ರವೀಣನನುರೂಪಂ ಭೋಗಿ ದೇಶೀಯ ಮೋ |
ಹನ ಶೃಂಗಾರನತೀವಚಾಟುವಚನಂ ತಾನಾಗೆ ರಯ್ಯಂ ಕರಂ || ೪ ||

ವ|| ಆತನ ಸಹಾಯರ್ಕಳ್ :—

ಉ|| ಚಾರುಮೃದೂಕ್ತಿಯುಕ್ತ ನಮಲಂ ಕೃತಪುಣ್ಯ ನಜಾತಶತ್ರು ಗಂ |
ಭೀರ ನಮಂದ ನುಜ್ವಲಯಶಂ ರತಿರಾಗಿ ಕಳಾವಿಭೂಷಣಂ ||
ಧೀರನುಪಾಯವಂತನಭಿಮಾನಿ ಯುದಾರಮನಂ ಮನೋಭವಾ |
ಕಾರ ನಜೇಯನೆಯ್ದೆ ಶುಚಿ ಯೆಂದೆನಿಪಂದಱಿ ನಾಗರೀಕನಂ || ೫ ||

ಶಾ|| ಶೃಂಗಾರಪ್ರಿಯನಂಗಜೋಪಮಲಸದ್ರೂಪಂ ಕಳಾಪ್ರೌಢನು |
ತ್ತುಂಗೋರೋಜೆಯರಂಗಸಂಗನಿರತಂ ಚಾತುರ್ಯವರ್ಯಂ ಕರಂ ||
ಸಂಗೀತಾಯತಚಿತ್ತ ನಿಂಗಿತವಿದಂ ವ್ಯಂಗ್ಯಪ್ರಿಯಂ ನೀತಿಯು |
ಕ್ತಂ ಗಾಣಿಕ್ಯ ಗೃಹಾಂಗಣಾಟನವಿಲೋಲಂ ತಾನೆನಿಪ್ಪಂ ವಿಟಂ || ೬ ||

ಮ|| ಸತತಂ ಹಾಸ್ಯರಸಪ್ರಪಂಚನಿರತಂ ನಾನಾಕಲಾಕೌಶಲಂ |
ಮತಿಗನ್ಯಾರ್ಥಕವಾಣಿ ಕೀರ್ತಿವಿದ ನಾಸ್ಥಾನಪ್ರಪೂಜ್ಯಂ ಪುರಾ ||
ಕೃತಪುಣ್ಯಂ ಸ ಜನಪ್ರಿಯಂ ಸಕಲಭಾಷಾಕೋವಿದಂ ವಿಪ್ರಸಂ |
ತತಿಷಟ್ಕರ್ಮಯುತಂ ವಿದೂಷಕನೆನಿಪ್ಪಂ ಬಲ್ಲವರ್ ಭಾವಿಸಲ್ || ೭ ||

ಮ|| ವಿದಿತಂ ಗ್ರಾಮ್ಯವಚೋವಿಳಾಸನಿಧಿ ಸದ್ಧರ್ಮಾಶ್ರಯಂ ಶಾಸ್ತ್ರಸಂ |
ಪದ ನುರ್ವೀಸ್ತುತ ನಂಗನಾದ್ಯಖಿಳಭೋಗಂ ಗೋಷ್ಠಿವಂತಂ ಮನೋ ||
ಮುದನೆಲ್ಲೆಚ್ಚೆಸೆ? ವೇೞ್ದುದಂ ನೆಗಱ್ವನಾಳ್ದಂಗಿಷ್ಟಭೃತ್ಯಂ ವಿಲಾ |
ಸದಿ ನೊಪ್ಪಂಬಡೆದಿರ್ಪ ಸದ್ಗುಣಿಯುಮಪ್ಪಂ ಪೀಠಮರ್ದಾಹ್ವಯಂ || ೮ ||

ಉ|| ಪೂವಿನ ಪೊಱ್ತು ಸಾರಿವರೆ ಸಿಂಗರಗೈದನುರಾಗದಿಂ ಪ್ರಿಯಂ |
ಭಾವಜರಮ್ಯಕೇಳಿಗೃಹಮಂ ಪುಗುತಂದೊಡನೆಯ್ದೆ ತತ್ಸಖರ್ ||
ಠೀವಿ ಮಿಗಲ್ ಸಮಂತೊಱಗಿ ವಾಮವಿಭಾಗದಿ ನಲ್ಲಳಂ ಕಳಾ |
ಕೋವಿದನಿಚ್ಛೆಗಂಡಱಿದು ಮಚ್ಚಿಸಿ ಮಾೞ್ಕ ವಿನೋದಗೋಷ್ಠಿಯಂ || ೯ ||

ಚಂ|| ಪರಿಚರತತ್ಸಖರ್ ಸಹಚರರ್ ಕವಿಪಾಠಕಮುಖ್ಯರಂ ಬಹಿ |
ಷ್ಕರಿಸಿ ಮನೋಭವಾಜ್ಞೆಯೊಳೆ ಭೋಂಕನೆ ಮುಂಬಿದಸೂಸೆ ನಲ್ಲಳಂ ||
ಬರದೆ.... ವಿಟ್ಟೆರಱಿತ್ತೊಡೆಯ ಮಧ್ಯದೊಳೋವಿ ಮುಖಾರವಿಂದಮಂ |
ತ್ವರಿತದೆ ಚುಂಬಿಸುತ್ತೆ ನಿಱಿಯಂ ಕಡೆಸಾರ್ಚುಗೆ ಕಾಂತನಱ್ಕಱಿಂ || ೧೦ ||

ವ|| ತರುವಾಯೊಳಂ : —

ಮ|| ಬೆರಲಿಟ್ಟಾಡಿಸಿ ನೋೞ್ಕೆ ಮನ್ಮಥನಿವಾಸಂ....ಱಂ ಪಕ್ಷ. . . ಹಾದ್ರಂ |
ಕರಹೋದ್ರಂತದವೋಲ್ ಕರಾಂಗುಲಿಗಳಂ ಬಿಚ್ಚಿರ್ಪವೋಲ್ ತಗ್ಗು ಎ ||
ಬ್ಬಿರದೊಂದಾದರದೆಱ್ತು ನಾಲಗೆಯವೋಲ್ ತೋಱುಪ್ಪುದಂ ತಾಂ ಮೃದೂ |
ತರು ಕಿನ್ನರಾಂಗುಲಿಕಂ ಪ್ರಸಿದ್ಧದಳಿತಂ ಗೋಪ್ಯಿಕಾಖ್ಯಂಗಳಿಂ || ೧೧ ||

ಮ||ಸ್ರ|| ಸತತಂ ನಾಣ್ಬೇಡೊಳಿಟ್ಟಂಗುಲಿವಿಡಿದೆಣಿಸಲ್ ನಾಲ್ದೆಱ ನಾಡಿಲಿಂಗಾ |
ಕೃತಿಯಿಂದಾಂದೋಳಿತಂ ಸೀಳ್ದೊಸರ್ದಿರೆ ಯತ . . ಛತ್ರವಾಪೂರಿತಾರ್ದ್ರೀ |
ಕೃತದಿಂ ಪೂರ್ಣೇಂದುಶುಕ್ಲಂ ತಿಮಿರಮೊದವಿರಲ್ ಭೋಜನಸ್ನಾನಪಾನೋ |
ನ್ನತಿಯುರ್ವಿಂ ನಾಸಿಕಾಕಾರದೆ ಮಣಿಶಿಖರಂ ನಾಮದಿಂದೊಪ್ಪಿ ತೋರ್ಕುಂ ||೧೨||

ಚಂ || ಒಸರ್ವಿರ್ದೆವೋಷ್ಠಮುದ್ರೆ ತಿಳಿಮಧ್ಯಮದಂಗುಲಿಯೆತ್ತಿ ಮಿಕ್ಕುವಂ |
ಕುಸಿದಿರೆ ಹಸ್ತಿಹಸ್ತಮಧುವಂ ತುದಿಪಾಗಿಸಿ ಭೋಗಿಭಾಗದೊ |
ಳ್ಪೊಸೆವ ಮೊದಲ್ಪೆರಲ್ ನಿಮಿರ್ದ ತರ್ಜನಿ ವರ್ತಿಸೆಯರ್ಧಚಂದ್ರನೊಂ|
ದಿಸೆ ಕೆಲದಿರ್ಪೆರಲ್ನಡುವಣಂಗುಲಿಯಂ ಮುಕುಳಂ ನಿರಾಕುಳಂ ||೧೩||

ಕಂ|| ಮಾನಿನಿಯರ ಕೂಟದೊಳನು |
ಮಾನಿಸಿ ಭಾವಜ್ಞರಱಿಗೆ ನಾಲ್ದೆಱದಿಂ ಸ್ವಾ ||
ಧೀನಜವಿರೋಧಪರಾ |
ಧೀನಮೆನಲ್ಕೊಗೆವ ಗುಹ್ಯನಾಡೀಕ್ರಮಮಂ || ೧೪ ||

ಮ|| ಇನಿಯಳ್ಗುಣ್ಮೆ ಪದಂ ಮೊದಲ್ಸುರತದೊಳ್ ಸಾಜಂ ಪರೀಷಂಗ ಚುಂ |
ಬನ ಮುಖ್ಯಕ್ರಿಯೆಯಿಂ ಕುಳಿರ್ದೊಸರ್ದಿರಲ್ ಸ್ವಾಧೀನವಲ್ಪದ್ರವಂ ||
ಜನಿಸಲ್ ಬೆಚ್ಚಗೆ ನಿಂದು ನಿಂತದು ಪರಾಧೀನಂ ಸುಸಿಲ್ಗೆಯ್ವದಿ |
ರ್ದಿನಿತಾನುಂ ನೆರೆಯಲ್ಕೆ ಬರ್ಪ ಬಹುಳಂ ವೀರ್ಯಂ ವಿರೋಧಾಹ್ವಯಂ || ೧೫ ||

ಕಂ|| ತ್ರಿವಿಧಂ ರತಿಮೂರ್ಚ್ಛಾ ಭೇ |
ದವಿಶೇಷೋಕ್ತಂಗಳಾದಿಮಧ್ಯಾಂತಂಗಳ್ ||
ಸವನಿಸುಗುಮುಱಿಗೆ ಕಾಮುಕ |
ನಿವಹಂ ಕಾಮಿನಿಯರಂಗಚೇಷ್ಟೆಗಳಿಂದಂ || ೧೬ ||
ತಡವಿ ವರಾಂಗಮನಂಗನೆ |
ಯೊಡವೆರಸಲ್ ಪುಳಕವಶ್ರುಮೆಯ್ಗಂಪುಗುವೊ |
ಲ್ಗಡಣ ಬೆಳತ್ತಿರ್ಗೆ ಚಲನಂ |
ಬಡೆದೆಲ್ಚಱುಗುಂದಲಾದಿ(ಗಿ) ಮೂರ್ಚ್ಛೆಯೆನಿಕ್ಕುಂ || ೧೭ ||
ಪೊರ್ದಲೊಡಂ ಜ್ವರವಾದ ವೊ |
ಲಿರ್ದಳ ನಾಣ್ಬೇಡನಲೆದು ನಾಲಗೆಯಿಂದು ||
ರ್ದಿರ್ದಿರಲುಸಿರಾಡಿಸಿ ತುಟಿ |
ವೀರ್ದೊಂದಲ್ಕಾದ ಮೂರ್ಚ್ಛೆ ಮಧ್ಯಮಮೆನಿಕುಂ || ೧೮ ||
ಆದಿಮೂರ್ಚ್ಛಾಪ್ರಯೋಗದ |
ಭೇದಮದೆನಿತನಿತುಗೆಯ್ವು ನಾಲಗೆಯಿಂ ಗು ||
ಹ್ಯೋದರದೊಳಲೆಯೆ ನಲ್ಲ |
ಳ್ಗಾದರದಿಂ ಬರ್ಪ ಮೂರ್ಚ್ಛೆಯುತ್ತಮಮೆನಿಕುಂ || ೧೯ ||
ಭ(ವ)ರದುಣ್ಮುವಿಂದ್ರಿಯದ್ರವ |
ದಿರವದು ನಿರ್ಬಂಕೆ ಪುಟ್ಟೆ ಸಿತವರ್ಣಂ ಬಂ ||
ಧುರವಮಧುರಾಮ್ಲ ಕಷಾಯೋ |
ತ್ಕರರುಚಿಯೋರೊರ್ವಸತಿಯರೊಳ್ ದೊರೆಕೊಳ್ಗುಂ || ೨೦ ||
ಸುರತಾಲಯವಧಿಪಂ ತ |
ತ್ಪರಿಕರತತಿ ಸಿಕ್ಕು(ಸಿಂಹ)ಚಾಳಿಯೋನಿ ತದಭ್ಯಂ ||
ತರನಾಡಿ ತದ್ರವಮುಸಂ |
ದರ ಕಾಂತೋನ್ಮೂರ್ಚ್ಛೆ ಮರ್ೞುಭೇದದೊಳೆಸೆಗುಂ || ೨೧ ||

ಗದ್ಯಂ

ಇದು ವಿದಿತಮದನ ಮುದ್ರಾಂಕಿತ ವಿದೂರಜನನಿಬಂಧನ
ಕಾರಾಗಾಮುಮಭಿನವನಾಯಕನಾಯಿಕಾ
ಶೃಂಗಾರಸಾರೋದ್ಧಾರಮುಂ ಸಕಲ
ವಿಬುಧಸೇವ್ಯಮಾನಮುಂ
ಲಕ್ಷ್ಮಣ ಕವೀಂದ್ರ
ವಿರಚಿತಮು ಮಪ್ಪ
ಮನ್ಮಥ ವಿಜಯದೊಳ್
ದಶಮಾಶ್ವಾಸಂ — ಮರ್ೞುಭೇದಾಧಿಕಾರಂ
ಸಂಪೂರ್ಣಂ
—ಮಂಗಳ ಮಹಾಶ್ರೀ—

ಏಕಾದಶ್ವಾಸಂ

ಆಲಿಂಗನಾಧಿಕಾರಂ

ಕಂ|| ವಿವಿಧ ರತಿಗಳ್ಗೆ ಮೊದಲೆನಿ |
ಸುವ ಸಂಶ್ಲೇಷಪ್ರಭೇದವಿತ್ತಿರ್ಱ ನವಱಂ |
ದವನಱಗಜಾತಜಾತಂ |
ಪ್ರವರ್ತಿಕುಂ ಬೇಱೆವೇಱೆ ನಾಲ್ಕೆಂಟವಱೊಳ್ || ೧ ||
ಪ್ರಕಟಿಸುಗುಂ ಸ್ಪೃಷ್ಟಕವಿ |
ದ್ಧಕ ಘೃಷ್ಟಕ ಪೀಡನಾಹ್ವಯಾಶ್ಲೇಷಚತು ||
ರ್ಥಕಮಾಗುದ್ಯದ್ರತಿ ಸಾ |
ಧಕರಿಂದಮಜಾತಕೇಳಿ ಸಂಭೂತಂಗಳ್ || ೨ ||
ಸ್ತನಸಂಶ್ಲೇಷ ಲತಾವೇ |
ಷ್ಟನ ಜಘನೋರೂಪಗೂಢಯುಗ ವೃಕ್ಷಾರೋ ||
ಹ ನುತತಿಲತಂಡುಲಂ ಕ್ಷೀ |
ರನೀರ ಲಾಲಾಟಿಕಾಷ್ಟಕಂ ಜಾತರತಂ || ೩ ||

ವ|| ಉದಾಹರಣಂ :—

ಕಂ|| ರಭಸದೆ ಪೋಪಳ್ಗೆ ಯಿದಿ |
ರ್ವರುತಾಟಂದೊರ್ವನವನೆ ಮನದಂದದವಂ ||
ಗರುಹರಿನೀಕ್ಷಿಸಲವಳುಂ |
ನಿರೀಕ್ಷಿಸಲ್ **ಸ್ಪೃಷ್ಟ**ಕಾಖ್ಯಮುಪಗೂಹನಕ(ಮು)ಂ || ೪ ||
ಸಂತಸದಿಂ ಕುಳ್ಳಿರ್ದುಮ |
ದೆಂತಾದೊಡಮಿರ್ಪ ಗಾಡಿಕಾಱನನೊಲವಿಂ ||
ಪಿಂತಮರ್ದಪ್ಪಲ್ ಮುಗುಳ್ದುವ |
ನಂತೊಡರ್ದೊಡನಪ್ಪಿದಪ್ಪು **ವಿದ್ಧ**ಕಮೆನಿಕುಂ || ೫ ||
ಪೋಗಿ ಸತಿ ಕಟ್ಟಿಲೆಯೊಳನು |
ರಾಗದೆ ತೂರ್ಯತ್ರಯಾದಿ ವೈಚಿತ್ರ್ಯವ ನೋ ||
ಲ್ಪಾಗಳ್ ಪೆಱರನುಮವ ಸೋಂ |
ಕಾಗಿಸಲಂತದುವೆ **ಘೃಷ್ಟ**ಕಾಶ್ಲೇಷಾಖ್ಯಂ || ೬ ||
ನೆರವಿಯೊಳೆ ಪೊರ್ದಿ ಪೆಣ್ಣಂ |
ಸರಸಾಟದಿ ಭಿತ್ತಿಗೌಂಕಿ ಯಹಹಮೆನುತ್ತಾ ||
ದರದಿಂ ಬಿಗಿಬಿಗಿದಪ್ಪು |
ತ್ತಿರಲದೆ **ಪೀಡನಕ**ಮೆಂದೆನಿಪ್ಪಾಶ್ಲೇಷಂ || ೭ ||

ವ|| ಇವಜಾತಕೇಳಿಪರಿರಂಭಣಂಗಳ್ :—

ಕಂ|| ಅನುವಿಂ ಪಸೆಯೊಳೆ ಕುಳ್ಳಿ |
ರ್ದಿನಿಯನ ತೊಡೆಯೇಱಿ ಕಾಂತೆ ವಕ್ಷಸ್ಥಳಮಂ ||
ಘನಕುಚದಿ ನೊಂಕಿ ಯಾಲಿಂ |
ಗನಮಂ ಮಾಡುತ್ತಿರಲ್ **ಸ್ತನಾಶ್ಲೇಷಾಖ್ಯಂ** || ೮ ||

ಲಲನೆ ನಿಂದಿನಿಯನಡಿಯೊಳ್ |
ಬಲಗಾಲಂ ಸುತ್ತಿ ಚುಂಚುವಿಡಿದೀಂದುಟಿಯಂ ||
ನಲಿದೀಂಟುತೆಡದ ಕೆಯ್ಯಿಂ |
ಬಲಿದ[1]ಪ್ಪಲ್ಕಿನಿಯನದು **ಲತಾವೇಷ್ಟನಕಂ** || ೯ ||

ಒಱಗಿರ್ದೋಪನ ತೊಡೆಗಳ |
ನಿಱಿಂಕಿ ಜಂಘೆಗಳೊಳಬಲೆ ಮುಡಿದಿರ್ದುತ್ತುಂ ||
ಪೊಱವಾಱಿೊಳ್ ಪೊಱಗಂ ತಾಂ |
ನಿಱಿಸಲ್ **ಜಘನೋಪಗೂಹನದ** ಪೆಸರೆಸೆಗುಂ || ೧೦ ||

ಸ್ಮರರಸವೊಸರ್ದಂಗನೆ ಪ |
ಟ್ಟಿರೆ ಗುಹ್ಯದೆ ಲಿಂಗಮಿಟ್ಟು ತೊಡೆ ತೊಡೆಯೊಡೆ. . ||
ನಿರಲೊಂಕಿ ಯಿರ್ಕ್ಕುಱಿಂತ |
ಪ್ಪಿರಲಿಂ**ತೂರೂಪಗೂಹ**ನದ ಪೆಸರೆಸೆಗುಂ || ೧೧ ||

ಎಡಬಲನೊಂದಲ್ ಪ್ರಿಯನಿ |
ರ್ದೊಡೆಗಳೊಳಡಿ ಹಸ್ತಮಿಟ್ಟು ಶೇಷಕರಂ ಬೆಂ |
ಗಡೆಯೊಳಿರಲ್ ಸತಿ ಚುಂಬಿಸು |
ತಡರ್ದಿರೆ **ವೃಕ್ಷಾಧಿರೂಢ**ಮೆಂಬಾಶ್ಲೇಷಂ || ೧೨ ||

ಪ್ರಿಯರಾನಂದದೆ ಕೂರ್ತನು |
ನಯದಿಂ ಕುಳ್ಳಿರ್ದು ಕಟಿಯೊಳಿಟ್ಟಿರ್ದ ಕರ ||
ದ್ವಯಮಂ ತೆಗೆದೊಡನೋರೊ |
ರ್ಮ್ಮೆಯಿಡುತ್ತಿರೆ ಯದುವೆ ತಳ್ಕೆ **ತಿಲತಂಡುಲಕಂ** || ೧೩ ||

ಪಸೆಯೊಳ್ ಮಂಚದೊಳಾದೊಡ |
ಮೊಸೆದಿರ್ಪೋಪನೊಳೆ ಕಾಂತೆ ಬೆಚ್ಚಂದದೆ ರಾ ||
ಗಿಸಿ ನಾಣಂ ತೊಱೆದಾಲಿಂ |
ಗಿಸೆ ಬಲ್ಪಿಂ **ಕ್ಷೀರನೀರ**ಮೆಂಬಾಶ್ಲೇಷಂ || ೧೪ ||

---

1. ಪ್ಪಲ್ಪಿರಿಯ

ಕಂ|| ಸೊಗಯಿಪ ನಲ್ಲನ ಮೊಗದೊಳ್ |
ಮಿಗೆ ಪಣೆಯಿಟ್ಟಿರ್ದೆಯೊಳಗೆರ್ದೆ ದೃಗ್ಯುಗದೊಳ್ ದೃ ||
ಗ್ಯುಗಮಿಟ್ಟಪ್ಪುವ ಸತಿಯಿಂ |
ದೊಗೆಗುಂ **ಲಾಲಾಟಿಕಾ**ಹ್ವಯಂ ಸಂಶ್ಲೇಷಂ || ೧೫ ||

ವ|| ಇವಜಾತಕೇಳಿಸಂಶ್ಲೇಷಂಗಳ್.

ಕಂ|| ಬಿತ್ತರಿಸಿದೆನತಿಮುದದಿಂ |
ದುತ್ತಮರಱಿಗತನುಮತದೊಳೀರಾಱುತೆಱಂ ||
ಬಿತ್ತಾಲಿಂಗನಮಂ ತಗು |
ಳ್ಚುತ್ತವಳಂ ಪೆರ್ಚೆ ನಲ್ಲರಾನಂದಿಪಿನಂ || ೧೬ ||

ಗದ್ಯಂ

ಇದು ವಿದಿತಮದನ ಮುದ್ರಾಂಕಿತ ವಿದೂರಜನನಿಬಂಧನ
ಕಾರಾಗಾರಮುಮಭಿನವನಾಯಕನಾಯಿಕಾ
ಶೃಂಗಾರಸಾರೋದ್ಧಾರಮುಂ ಸಕಲ
ವಿಬುಧಸೇವ್ಯಮಾನಮುಂ
ಲಕ್ಷಣ ಕವೀಂದ್ರ
ವಿರಚಿತಮು
ಮಪ್ಪ
ಮನ್ಮಥ ವಿಜಯದೊಳ್
ಏಕಾದಶಾಶ್ವಾಸಂ —ಆಲಿಂಗನವರ್ಣನಾಧಿಕಾರಂ
ಸಂಪೂರ್ಣಂ.

—ಮಂಗಳ ಮಹಾಶ್ರೀ—

ದ್ವಾದಶಾಶ್ವಾಸಂ

ಚುಂಬನಾಧಿಕಾರಂ

ಕಂ|| ಕೃತಚುಂಬನಮಿಾರಾಱು ನಿ |
ಮಿತಕಂ ಸ್ಫುರಿತಾಧರೋತ್ತರಂ ವಿಘಟಿತಘ ||
ಟ್ಟಿತಸಂಘಟಜಿಹ್ವಕ ಪೀ |
ಡಿತಕಂ ಸಂಭ್ರಾಂತತಿರ್ಯಗನುವದನಾಖ್ಯಂ || ೧ ||

ಮುದದಭಿಮುಖವಾಗಿಸಿ ನು |
ಣ್ಪೊದವಿರೆ ಸಾದರ್ೋಪರೊರ್ವರೊರ್ವರ ದಂತ ||
ಚ್ಛದ ಪೀಯೂಷಮನಿರದೀಂ |
ಟಿದೊಡದು ಪೆಸರಿಂ **ನಿಮಿತಿ**ಕಾಖ್ಯಮನಾಳ್ಗಂ || ೨ ||

ತರಳೆಯಮುರ್ದುಟಿಯನೊರ್ಮೆಯೆ |
ವರನೀಂಟಲ್ ಕೂಡೆ ಬರಸೆಳೆಯಲೊಡನವ ನಾ ||
ದರದಿಂ ತನ್ನಧರಮನೀಂ |
ಟಿರಲೆಸೆಗುಂ **ಸ್ಫುರಿತ**ಚುಂಬನಂ ರತಿಯೆಡೆಯೊಳ್ || ೩ ||

ಲಲಿತಾಂಗಿ ಪಿಡಿಯಿಸು[ತ್ತಂ] (ಕ್ಷಿಂ) |
ಗುಲಿ[ಯಂ](ಯಿಂ)ದಡಿದುಟಿಯನೋಪನಧರೋಷ್ಠದೊಳಿ ||
ತ್ತ್ರೊಲವಿಂದೊತ್ತುತೆ ಪಲ್ಮು |
ಟ್ಟಲೀಯದೆಂ[1] ಜಲಿಸಲ**ಧರ**ಚುಂಬನಮೆನಿಕುಂ || ೪ ||

ಮೊದಲುಸಿರ್ದಧರವ್ಯತ್ಯಯ |
ಮೊದವಿನಿಯನಿನುಚ್ಚರಸನವಸಂ ಬರೆದಿಂ? ||
ಪೊದವಿದ ಮೇಲ್ದುಟಿವತ್ತಿಸಿ |
ಚದುರಿಂ ಸತಿ ಚುಂಬಿಪಂದ**ವುತ್ತರ**ಮೆನಿಕುಂ || ೫ ||

ಬರೆತೆಗೆದೋಪಳ ತುಟಿಯುಂ |
ಕರಶಾಖೆಗಳಿಂದೆ ಪಿಡಿದು ನಾಲಗೆಗೊನೆಯಿಂ ||
ಪರಿಮರ್ದಿಸಿ ಚುಂಬನಮುಂ |
ನರನಿರದುಜ್ಜುಗಿಸೆ **ವಿಘಟಿತಂ** ತಾನೆನಿಕುಂ || ೬ ||

ಮನದಾಣ್ಮನಧರಮಂ ಮಾ |
ನಿನಿ ನಾಲಗೆಗೊನೆಯೊಳಲೆದೆರಳ್ದುಟಿಯಂ ಚುಂ ||
ಬನಮಾಗಿಸುತುಂ ತಳದಿಂ |
ದೆ ನಯನಮಂ ಮುಚ್ಚೆ ಯದುವೆ **ಘಟ್ಟಿತ**ಮೆನಿಕುಂ || ೭ ||

---

1. ದೆತಾಂಜಲಿ

ಪೊಸಜವ್ವನಿಗಂ ಸಾಶ್ರುವಿ |
ನೆಸೆವೊಡಮಿಲ್ಲದೊಡಮೆರಡುತುಟಿಯಂ ಸತಿ ಚುಂ ||
ಬಿಸಲಂತೆ ಬಾಯೊಳಿಟ್ಟಧ |
ರಸವಿಯನವನುಂಗೆಗಣ್ಚುವೊಡೆ **ಸಂಘಟಿತಂ** || ೮ ||

ತರುಣಿಯ ಬಾಯೊಳ್ ಬಾಯಿ |
ಟ್ಟು ರಸನೆಯಿಂದೊಯ್ಯನಲೆದು ಜೀವೇಶಂ ಸಾ ||
ದರದಿಂ ಸೌಖ್ಯಾತಿಶಯಂ |
ದೊರೆಕೊಳೆ ಚುಂಬನಮನೊಡರ್ಚೆ **ಜಿಹ್ವಕ**ಮೆನಿಕುಂ || ೯ ||

ಸವಡಿದುಟಿವಿಡಿದು ನಲ್ಲಂ |
ತವಕದಿನಂಗುಷ್ಠತರ್ಜನಿಗಳಂ ಸೊಗಸು ||
ಣ್ಮುವಿನಂ ತೊಡರ್ದೊತ್ತಂಬದೆ |
ಸವಿಯಲ್ **ಪೀಡಿತಕ**ಚುಂಬನಂ ತಾನೆನಿಕುಂ || ೧೦ ||

ಪಿಂತೆ ಕಚಚುಬಕಮಂ ನಿಂ |
ದಾಂತಗ್ರೈಯಿಂದೆ ವಕ್ರಿಸಲ್ಕೊಲ್ಲದ . . . ? ||
ಕ್ರಾಂತಗೈದೋಪಳಂಕರ (?) |
ದಿಂ ತುಟಿವಿಡಿಸುತ್ತೆ ಚುಂಬಿಸಲ್ **ಭ್ರಾಂತಾಖ್ಯಂ** || ೧೧ ||

ಕೆಲಕೆ ಮೊಗದಿರಿಪಿದೊಡೆ ತಾಂ |
ಬಲಗೈಯಿಂದವಳ ಚುಬುಕಮಂ ಸದ್ಭ್ರಾಂತಂ ||
ಅಲೆದು ರಸನಾಗ್ರದಿಂ ಕೋ |
ಮಲೆ ವಲ್ಲಭನಧರವೀಂಟೆ **ತಿರ್ಯಗೆ**(ಮೆ)ನಿಕ್ಕುಂ || ೧೨ ||

ಮೊಗದೊಳ್ ಮೊಗವತ್ತಿಸಿ ಸೊಗ |
ಸೊಗೆವಿನಮೋರೊರ್ವರಾಕ್ಷಣದೆ ನಲ್ಲರ್ ನಾ |
ಲಗೆಗಳನೊಂದಿಸಿ ಪೋರಿಪ |
ಬಗೆ ನೆಗಟ**ನುವದನ** ಚುಂಬನಂ ತಾನೆನಿಕುಂ || ೧೩ ||

ಬಗೆ ಪದಿನಯ್ದೆಣಿಸಾ ಕ |
ಕ್ಷಗಳಸ್ತನಗಂಡಪಾರ್ಶ್ವಯುಗ್ಮಂ ಗಳ ದೃ ||
ಗ್ಯುಗವೋಷ್ಠನಾಭಿಜಘನಂ |
ಮೊಗಗಡೆ ಪಣೆಯೆಂಬ ಚುಂಬನದ ತಾಣಂಗಳ್ || ೧೪ ||

ತವೆ ಚುಂಬನಭೇದಂ ಮು |
ತ್ತೆ ವಿಚಾರಿಸಿ ನೋಡೆ ಬಿತ್ತರಿಸಿ ನಾಲ್ದೆಱದಿಂ ||
ಬೆವಹರಿಕುಂ ಸಂಕ್ರಾಂತ ಮು |
ಮುವಕಥಿತಂ ಪ್ರಾತಿಬೋಧ್ಯ ಸಾ(ಭಾ)ಯಿಕವೆಸರಿಂ || ೧೫ ||

ಪೊಸಕೂರ್ಮೆಯಿನೋಪಳ್ ಸೊಗ |
ಯಿಸೆ ಶಿಶು ಕೈಪಿಡಿಯರೂಪು ಪುತ್ಥಳಿಚಿತ್ರ ||
ಪ್ರಸರವನನ್ಯೋನ್ಯಂ ಭಾ |
ವಿಸಿ ಕುಱುಪಿಟ್ಟಂತು ಚುಂಬಿಸಲ್ **ಸಂಕ್ರಾಂತಂ** || ೧೬ ||

ಮೊದಲುದ್ದೇಶಿಸಿ ಪೇೞ್ದಂ |
ದದ ತತ್ತತ್ಸ್ಥಾನಮುಱುದು ಪಲ್ಲೊತ್ತುಗುರಂ ||
ಪುದಿಯಿಸಿ ದಂಪತಿಗಳ್ ಕೂ |
ಟದೆ ಚುಂಬಿಸುವಂದ **ಮುವಕಥಿತ** ಮೆನಿಸಿರ್ಕುಂ || ೧೭ ||

ಮಱೆದೊಱಗಿದೊಡಂ ಕೃತಕದಿ |
ನೊಱಗಿರ್ದಂದೋಪನಿನಿ(ನೆರ್ದೆ)ಯಳಂ ಚುಂಬಿಸಲಾ ||
ತೆಱದಿಂದವಳುಂ ಚುಂಬಿಸೆ |
ಮೆಱೆದಿರ್ಕುಂ ಪ್ರಾತಿಬೋಧ್ಯ ಸಾ(ಭಾ)ಯಿಕಯುಗಳಂ || ೧೮ ||

ಅವಧರಿಸಿಮಿಂತು ಬುಧರನು |
ಭವದಿಂ ಸುರತಶ್ರಮ ಪ್ರಕೀರ್ಣಸುಖಪ್ರೋ ||
ದ್ಭವಹೇತುವಪ್ಪ ಚುಂಬನ |
ವಿವರಮನೀರೆಂಟನತನುಸಂಜೀವನಮಂ || ೧೯ ||

ಗದ್ಯಂ

ಇದು ವಿದಿತಮದನ ಮುದ್ರಾಂಕಿತ ವಿದೂರಜನನಿಬಂಧನ
ಕಾರಾಗಾರಮುಮಭಿನವನಾಯಕನಾಯಿಕಾ
ಶೃಂಗಾರಸಾರೋದ್ಧಾರಮುಂ ಸಕಲ
ವಿಬುಧಸೇವ್ಯಮಾನಮುಂ
ಲಕ್ಷ್ಮಣ ಕವೀಂದ್ರ
ವಿರಚಿತಮು
ಮಪ್ಪ
ಮನ್ಮಥ ವಿಜಯದೊಳ್
ದ್ವಾದಶಾಶ್ವಾಸಂ — ಚುಂಬನಾಧಿಕಾರಂ
ಸಂಪೂರ್ಣಂ
—ಮಂಗಳ ಮಹಾಶ್ರೀ—

ತ್ರಯೋದಶಾಶ್ವಾಸಂ

ದಂತನಖಕ್ಷತಾಧಿಕಾರಂ

ಕಂ ||ಕುಸಮಾಸ್ತ್ರನಂಕದಾಳ್ಗಳ |
ಮಸೆದುಗುರಲಗೇಱು ದಂತಪವಿಹತಿಗಳನಾ |
ಗಿಸುವ ತತ್ಕ್ರಿಯೆಯನವನೊಂ |
ದಿಸುತಿರ್ಪೆಡೆಗಳುಮನಱಿಪಿದೆಂ ಪರಿವಿಡಿಯಿಂ || ೧ ||

ಗೆಲೆನೆಗೆದಲ್ಪಕ್ಷತಮಾ |
ಗಲಕ್ತಕಂ ಬೊರೆದ ದುಗುಲದೆಳೆವೋಲ್ ಬಱಿಯಂ ||
ಬಲಿದುರ್ವುಪೊಳೆಪು ಮೃದುತರ |
ಕಲುಷಾರ್ಜನವರ್ಣನಂ ನಖವ್ರಣಮೆಸೆಗುಂ || ೨ ||

ಶಂ|| ಪುಲಿಯುಗುರೋಳಿ ವಕ್ರಗತಿ ಕೋಮಲವಜ್ರಘನತ್ರಿರೇಖೆ ಮಂ |
ಡಲಕಶಶಪ್ಲುತಾರ್ಧಶಶಿ ತದ್ಗ್ರಹಣಂ ಶಿಖಿಭೇಕಪಾದವು ||
ತ್ಪಲಸರಸೀಜಪುಷ್ಪಯುಗಳಾಕೃತಿಸಪ್ತಮಕಂ ದ್ವಿಸಪ್ತಕಾ |
ಖಿಲನಖಘಾತಮಿಂತು ಪೆಸರ್ವೆತ್ತುವು ಷೋಡಶ ರೂಪಭೇದದಿಂ || ೩ ||

ಕಂ|| ತೊಡೆ ನಡು ಕಂಠತಟಂ ಬೆಂ |
ಗಡೆ ಹೃತ್ಕಟ ಕಕ್ಷಪಾರ್ಶ್ವ ಜಘನಂ ಗುಹ್ಯಂ |
ಪೆಡತಲೆ ಮೊಲೆ ಮುಂಗೈ ಪಣೆ |
ನಿಡುದೋಳ್ ಕರಪೃಷ್ಠಮಿವು ನಖಕ್ಷತದೆಡೆಗಳ್ || ೪ ||

ವಾ||ಷ|| ನಿಲಿಸು ಬೆಂಬರಿಯೊಳ್ ದ್ವಿಸಪ್ತಸಪ್ತಕವೂರು |
ಮೊಲೆಯೊಳೆಳೆವೆಱೆ ತದ್ಗ್ರಹಣವತನುಗ್ರಹದೆ ಮಂ |
ಡಲಕ ವುರದೊಳ್ ವಕ್ರಗತಿ ಭಾಳದೊಳೆ ಸೋಗೆ ಕರಪೃಷ್ಠದಲ್ಲಿ ||
ಪುಲಿಯುಗುರ್ಮುಂಗೈ ಕೊರಲ್ ಕಕ್ಷಭುಜದೆ ಕೋ |
ಮಲ ವಜ್ರಮೇಘತ್ರಿರೇಖೆ ಕಟಿ ಗತ ಪೆಡೆ |
ತಲೆ ಜಘನದೊಳ್ ಪಂಕಜೋತ್ಪಲಶಶಪ್ಲುತಂ ಪ್ಲವಪದಂಗಳನುಗುರ್ಗಳಿಂ || ೫ ||

ಚಂ|| ಎಳೆತಿರ್ದದಿರ್ದ ? ತೆಱನಪ್ರಗುರೊತ್ತುಗಳಿಂದವಂತಿರ |
ಳ್ದಳೆವಿದಿರೇಱು ಮಂಡಲಕಮೈದುಗುರಿಂ ಮಸೆದೌಂಕಿ ಸೀಱು ಸಂ |
ಗಳಸಿದ ರೇಖೆ ಕೇಕಿಯಡಿವಜ್ಜೆ ತದುತ್ಪಲಮುಂ ಶಶಪ್ಲುತಂ |
ಮಿಳಿದಿಡೆಯಾಗಿಯಯ್ದುಗೆರೆಯಂ ಕಡೆಗೂಡಿರಲುತ್ಪಲಾಂಕಿತಂ || ೬ ||

ಕಂ|| ಇವು ನಖಹತಕ್ರಿಯಾ.... |
ಸುವಿ....ರ್ಭಕ್ತಿ ಪ್ರಪಂಚಮಿಾತೆಱದಿಂ ಮಾ |
ಡುವುದುಱದನಿತಂ ವಿಟರನು |
ಭವಮುಖದಿಂ ಕೂರ್ತು ಕಾಮಿನೀಸಂಗಮದೊಳ್ || ೭ ||

ತಾಂಬೂಲರಾಗದಿಂ ಕಡು |
ಕೆಂಬೆಳಗಿಡಿದೋರಣಂ ಸಮಾನಂ ಮೊನೆಮೇ |
ಲಂಬುನಯಂ ಸಿರಕರಿಣತ |
ರಂಬಡೆದೆಸೆದಿರ್ಪ ಪಲ್ಗಳಿಂ ಹತಿಯೆಸೆಗುಂ ||೮||

ವಿನುತೋತ್ತರೋಷ್ಠನೇತ್ರ ರ |
ಸನೆಗಳನುಱಿದಿರ್ದ ಚುಂಬನಸ್ಥಾನದೆ ಮುಂ ||
ಪನೆಯಿಂ ದ್ವಿಭಾಗದೀರಾ |
ಱನೆ ಕುಱುಪಿಟ್ಟಂತು ಮಾಱ್ಕೆ ನಿರುತಂ ಕ್ಷತಮುಂ ||೯||

ವಾ||ಷ|| ದಂತಹತಿದಂಡವಣಿಯಜಪತ್ರದೊಳುಯಿಕಾ |
ರಾಂತಖಂಡಭ್ರಕಂ ಯೋಗದಂಡಚ್ಛತ್ರ |
ದಂತಗೂಢಂ ರತ್ನಹಾರಾರ್ಕಮಾಲೆ ಸರಸಿಜ ಬಿಂದುಚಂದ್ರತಾರಾ ||
ಸಂತತಿವರಾಹಚರ್ವಿತ ಪವಳಮಣಿಕಳಾ |
ದಂತವುರುಬಿಂದು ಮಾಲ್ಯಂ ಸಪ್ತಬಿಂದು ತಂ |
ದಿಂತು ಪೆಸರ್ವೆತ್ತ ಪದಿನಾಱುಮಂ ಬಿತ್ತರಿಪುದುಚಿತಸಂಸ್ಥಾನಮುಱದು ||೧೦||

ಕಂ|| ತಱಿಸಂದುದ್ದೇಶಿಸಿದೀ |
ತೆಱದಭಿಧಾನಾರ್ಥಮೊಂದಿ ಪನೆಯೇಱಿಂದಂ ||
ಬಱಿದು ರೂಪಿಡುಗೆ ಮಿಗೆ ಕೂ |
ರ್ತೆಱೆಯರ ಲಲಿತಾಂಗದಲ್ಲಿ ನೆಱೆ ಮೆಱೆವಿನೆಗಂ ||೧೧||

ಗದ್ಯಂ

ಇದು ವಿದಿತಮದನ ಮುದ್ರಾಂಕಿತ ವಿದೂರಜನನಿಬಂಧನ
ಕಾರಾಗಾರಮುಮಭಿನವನಾಯಕನಾಯಿಕಾ
ಶೃಂಗಾರಸಾರೋದ್ಧಾರಮುಂ ಸಕಲ
ವಿಬುಧಸೇವ್ಯಮಾನಮುಂ
ಲಕ್ಷಣ ಕವೀಂದ್ರ
ವಿರಚಿತಮು
ಮಪ್ಪ
ಮನ್ಮಥ ವಿಜಯದೊಳ್
ತ್ರಯೋದಶಾಶ್ವಾಸಂ—ದಂತನಖಕ್ಷತಾಧಿಕಾರಂ
ಸಂಪೂರ್ಣಂ.
—ಮಂಗಳ ಮಹಾಶ್ರೀ—

ಚತುರ್ದಶಾಶ್ವಾಸಂ

ರತ್ಯಧಿಕಾರವರ್ಣನಾಧಿಕಾರಂ

ಕಂ|| ರತಿರಾಗಿಗಳಱಿಗೆ ವಿಚಿ |
ತ್ರತರಾನೂನಬಂಧಕಾರಣ . . ಸನ ||
ಸ್ಥಿತಿವುತ್ತಾನಕ ತಿರ್ಯಕ |
ಸಿತಕಂ ಸ್ಥಿತಮಾಗತಂಗಳೆನೆ ಪಂಚವಿಧಂ ||೧||
ಉತ್ತಾನಶಯನದೊಳ್ ನಿಮಿ |
ರ್ದೆತ್ತಿದ ಸತಿಯೂರು ತನ್ನ ತೋಳ್ತೊಡೆಗಳ ಮೇ ||
ಲ್ವೆತ್ತೆ ಕುಳ್ಳಿರ್ದು ತನ್ನಂ |
ಬಿತ್ತರಿಸುತ್ತಿರ್ಪ ನಿಧುವನಂ **ಗ್ರಾಮ್ಯಾಖ್ಯಂ** ||೨||
ಸೈತು ಮೇಲಾಗಿ ಪಟ್ಟ |
ರ್ದಾ ತರುಣಿಯ ಊರು ತನ್ನ ಬಾಹ್ಯನಿತಂಬೋ ||
ಪೇತಮದಾಗಿರಲಿರ್ಪತಿ |
ಕಾತರದಿಂ ಕೂಡುವಂದಮದು **ನಾಗರಕಂ** ||೩||
ತಿಗವೆತ್ತಿ ಕರದೆ ತೊಡೆಗಳ |
ನಗಲಿಸಿ ಮೇಲಾಗಿ ಮಲಗಿದಬಲೆಯ ಮಡ ಸೋಂ ||
ಕಗಲದಿರಲ್ ಕಟಿಯೊಳ್ ಸ್ತನ |
ಯುಗಮಂ ಪಿಡಿದೋಪನೊಂದಲ**ುತ್ಪಲ್ಲಾಖ್ಯಂ** ||೪||
ಮೇಲಾಗಿ ಮಲಗಿ ಯೋನಿ ವಿ |
ಶಾಲಂಬಡೆದೊಪ್ಪೆ ತೋಳೆರಡುಮಂ ತೊಡೆಯಂ ||
ಲೀಲೆ ಮಿಗಿಲಡ್ಡಮೆತ್ತುವ |
ಬಾಲೆಯನೊಂದಲ್ ಪ್ರಿಯಂ **ವಿಜೃಂಭಿತ**ಕರಣಂ ||೫||
ಅಂಗತಮಲಂಗಿದೋಪಳ |
ತುಂಗಕುಚಂ ಪಿಡಿದು ಬರಿನಿತಂಬದೆ ಪತಿ ತ ||
ನ್ನಂಗುಷ್ಠದೊಳ್ ತಡಂದೊಡ |
ರ್ದಿಂಗಿತವಱಿದೊಂದಿರಲ್ಕೆ **ಸಂಘುಟ**ಕರಣಂ ||೬||
ತುರಿಪದೆ ಮೇಲಾಗೊಱಗಿದ |
ತರಳೆಯ ತೊಡೆಯೊಳ್ ಮಡಂಗಳಳ್ಳೆಗಳೊಪ್ಪಿ ||
ರ್ವೆರಲೆಡೆ ಕುಳ್ಳಿರ್ದಿನಿಯಂ |
ನೆರೆಯುತ್ತುಮಿರಲ್ಕೆ **ಊರುಪೀಡನ**ಕರಣಂ ||೭||
ಮಡದಿ ಮೆಲ್ಲಾಗಿಯೆರಡುಂ |
ತೊಡೆಗೂಡಿಸಿ ನೀಳ್ದುಪಟ್ಟಿರೆ ಮೇಲಿನಿಯಂ ||
ತೊಡರ್ದೊಱಗಿಯಂತೆ ಚುಂಬಿಸು |
ತೊಡಗೂಡುತ್ತಿರ್ಪೊಡದುವೆ **ಸಂಘುಟ**ಕರಣಂ ||೮||

ಪ್ರಿಯನಡ್ಡಲಾಗಿ ಮಲಗಿ ಸ |
ತಿಯೊಳಿರ್ದೊಡೆ ತನ್ನದೊಂದೆ ತೊಡೆಯೊಳಿರಲ್ ಪ್ರೀ ‖
ತಿಯಿನೊಸೆದಿರ್ವರುಮೊಡಗೂ |
ಡೆಯದಿಂತಿಂ**ದ್ರಾಣಿಭಿಕಾ**ಧಾನಂ ಕರಣಂ ‖ ೯ ‖

ಒರಗಿ ಬೆನ್ನೊಡ್ಡಿ ಪಾಸಿನೊ |
ಳಿಱಿಯಳ್ ತೊಡೆಗೂಡಿಸುತ್ತಗಲ್ಚುತ್ತಿರೆ ಮೆಯ್ |
ಮಱಿವಂತಾಣ್ಮಂ ಕೂಡುವ |
ತೆಱನಂಗಜಶಾಸ್ತ್ರಮತದೆ **ವೇಷ್ಟಿತ**ಕರಣಂ ‖ ೧೦ ‖

ಪಸೆಯೊಳ್ ಬೆನ್ನಡಿಯಾಗಿ |
ರ್ದಸಿಯಳ್ ತನ್ನೊಡನೆ ನೆರೆವ ಪುರುಷನ ಲಿಂಗಂ ‖
ಗಸಿಯುವರಾಂಗಂ ನೀಳ್ಕು |
ತ್ತೆಸಗುವ ರತಿ **ಬಾಡವಾ**ಭಿಧಾನಂ ಕರಣಂ ‖ ೧೧ ‖

ರಾಗಂ ಕೆಯ್ಮಿಗೆ ಬೆನ್ನಡಿ |
ಯಾಗಿ ಸಮಂತೊಱಗಿದಬಲೆ ಶಯ್ಯೆಯೊಳೆರಡೊಂ ‖
ದಾಗಿರಲೆತ್ತಿದ ತೊಡೆಗಳ |
ನಾಗಳ್ ಪ್ರಿಯನಪ್ಪಿ ನೆರೆವೊ**ಡುದ್ಭುಗ್ನಾ**ಖ್ಯಂ ‖ ೧೨ ‖

ಸೌಂದರಿ ನಿಷಣ್ಣ ಕಾಂತನ |
ದೊಂದಡಿಗೆ ವಿಧಿರಯಂ . . . ಮೆ ‖
ಲ್ಪಿಂದಿಟ್ಟನುನಯದಿಂ ನೆರೆ |
ದಂ **ದರ್ಥನಿಪೀಡಿತಾ**ಭಿಧಾನಂ ಕರಣಂ ‖ ೧೩ ‖

ತನು ತವಕದಿಂದೆ ಕುಳ್ಳಿ |
ರ್ದನಿಯನ ಕಾಲ್ವಿಡಿದು ಚರಣತಳಮಿಟ್ಟುರದೊಳ್ ‖
ವನಿತೆ ಮೇಲಾಗಿ ಪಟ್ಟ |
ರ್ದನುವಿಂ ಸಂಭೋಗಿಸಲ್ಕದು**ರಸ್ಫುರಣಾ**ಖ್ಯಂ ‖ ೧೪ ‖

ಪೊಱವಾಱನೆತ್ತಿ ಮೇಲಾ |
ಗೊಱಗಿದ ಕಾಮಿನಿಯ ಜಾನುಪಾರ್ಶ್ವದ್ವಯಮ ‖
ನ್ನಿಱಿಸಿ ತನ್ನೆರಡು ಬರಿಗಳೊ |
ಳಿಱಿಯಂ ಸಮಸಂದು ಕೂಡೆ **ಜಾನುಯುಗಾ**ಖ್ಯಂ ‖ ೧೫ ‖

ಬೆನ್ನೊಡ್ಡಿ ಪಾಸೊಳೊಂದಡಿ |
ಯನ್ನೀಡಿವಿಲಾಸದಿಂದೆ ಮತ್ತೊಂದಡಿಯಂ ‖
ಕನ್ನೆ ತೊಡರ್ದೋಪನಂ ಸತಿ |
ತಾಂ ನೆರೆಯಲ್ **ಪ್ರಸ್ತುತಂ** ಪೆಸರನೊಂದಿರ್ಕುಂ ‖ ೧೬ ‖

ಸಮಸಂದು ಕೂರ್ತು ಕೂಡುವ |
ರಮಣನನೆರಱ್ವಿಗಲೊಳೋಪನಂಘ್ರಿದ್ವಯಮುಂ ‖
ನಿಮಿರ್ದಿಟ್ಟಂಗತನೊಱಗಿ ಸು |
ಖಮನಾಗಿಸಲವನೊಳಂತ**ಸಾರಿಕ**ಕರಣಂ ‖ ೧೭ ‖

ವಲ್ಲಭೆ ಪತಿಯ ಪೆಗಲ್ಗೊಡೆ |
ಯಲ್ಲಿ ಪದಂದೊಡರ್ದು ಪಲ್ಲವಂ ಭೋಗಿಸುತಂ |
ವಲ್ಲಭನೊ . . . . . ನೆಱಗಿ |
ಪ್ಪುಲ್ಲಾಸದ ಕೇಳಿ **ವೇಣುದಾರಿತ**ಕರಣಂ ‖ ೧೮ ‖

ಅಲರ್ವಸೆಯೊಳೋಪಳೊಂದೆಡೆ |
ನಿಲೆ ಮೇಲಾಗೊಱಗಿ ಬರಿಯೊಳೆತ್ತಿದ ಮೊಳಕಾಲ್ ‖
ತೊಲಗದೆ ಮನದಾಣ್ಮನ ತಲೆ |
ನೆಲನಂ ಸೋಂಕುವವೊಲೊಂದೆ **ಸೂಲಚಿತಾ**ಖ್ಯಂ ‖ ೧೯ ‖

ನಲಿದಸಿತಕಪ್ರಿಯಂ ಕೂ |
ರ್ತಲರ್ವಸೆಯೊಳ್ ಬೆನ್ನನಿತ್ತೊಱಂಗಿದಳೆರಡುಂ ‖
ಚಲನಂ ತನ್ನಯ ನಾಭೀ |
ವಲಯದೊಳಿರ್ಪಂತಿರೊಂದೆ **ಕರ್ಕಟಕಾ**ಖ್ಯಂ ‖ ೨೦ ‖

ನಾರಿಯುತ್ತಾನಶಯನದೊ |
ಳೂರುಗಳಂ ಮೇಲಕೆತ್ತಿ ತೋರಂಗೊಂಬಾ ‖
ಕಾರದಿನಿರಿಸಲ್ ಪ್ರಿಯನೊ |
ಳ್ಕೋರಂತೊಡಗೂಡಲೊಪ್ಪುಗುಂ **ಪ್ರೇಂಖವೆಸರ್** ‖ ೨೧ ‖

ತೊಡರ್ದು ವಿಪರ್ಯಾಸದೆ ಕಿಱು |
ತೊಡೆ ತಿರ್ಯಕ್ಕಾಗೆ ನೆಗಪಿಯಂಗುಷ್ಠಯುಗಂ ‖
ಪಿಡಿದೋಪನೊಳಂಗನೆ ಬೆ |
ನ್ನಡಿಯಾಗಿರ್ದೊಂದೆ **ಪಂಕಜಾಸನ**ಕರಣಂ ‖ ೨೨ ‖

ಒಳಸಾರ್ಚಿ ಕಾಂತೆ ಮೊಳಕಾ |
ಲ್ಗಳೊಳಂ ತಾನೊಱಗಿ ಕೆಯ್ಗಳಂ ತಳಿವೆರಲೊ ‖
ಳ್ಗೊಳಿಸಿ ನಿಜೇಶನ ಗಳದೋ |
ಲಳಿಯಲ್ಕವನುಂ ತೊಡರ್ಚೆ **ಬಂಧುರಿತ**ರತಂ ‖ ೨೩ ‖

ಕೃತಬಂಧುರಿತ ಕ್ರೀಡಾ |
ಮತದೆ ತಗುಳ್ದಬಲೆ ತನ್ನ ಜಾನುದ್ವಯ ನಿ ‖
ರ್ಗತ ಹಸ್ತದ್ವಿತಯ ವ್ಯಾ |
ಪ್ತತೆಯಂ ನೆಗೞ್ದೊಂದೆ ಕಾಂತನೊಳ್ **ಫಣಿಪಾಶಂ** ‖ ೨೪ ‖

ಪದವೆತ್ತಿ ನೀಱೆಯುಂಗುಟ |
ದುದಿವಿಡಿದಂತದನೆ ಒರಗೆ ಜಾನುಗಳಂ ನಿ ||
ಲ್ಲದೆ ಒಳಕೆಯ್ದಿನಿಯಂ ಹ |
ಸ್ತದಿ ಕಂಠಂದೊಡರ್ದು ರಮಿಯಿಸಲ್ **ಸಂಯಮನಂ** || ೨೫ ||

ಮುಂತೊಡರ್ದಂಗತಮಾಗಿ ಸ |
ಮಂತೊಱಗಿದಳನ್ನು ಸವ್ಯಜಂಘಾಜಾನು ||
ಪ್ರಾಂತಂಗಳೊಳ್ ಯಥಾಕ್ರಮ |
ಮೆಂತಂತಮರ್ದಪ್ಪಿ ಕೂಡೆ **ನಮ್ರಾಖ್ಯ**ರತಂ || ೨೬ ||

ಮನದಾಣ್ಮನೊಡನೆ ಕೂರ್ಮಾ |
ಸನಕರಣದಿ ನೊಂದುವಬಲೆ ತನ್ನೂರುಗಳಂ ||
ಘನಸುಖಮೆಯ್ದುವಿನಂ ಬಿ |
ರ್ಚಿ ನಿರಂತರಮಾಗಿ ನೆರೆಯೆ **ಪರಿವರ್ತನಕಂ** || ೨೭ ||

ಕಟ್ಟೊಲ್ಮೆಯಿಂದೆ ಪಸೆಯೊಳ್ |
ಹೆಟ್ಟುಗೆ ಮೇಲಾಗಿ ಮಲಗಿರಲ್ ನುಣ್ದೊಡೆಯಂ ||
ಮೆಟ್ಟಿ ನಿಜೇಶಂ ಮೆಲ್ಲೆರ್ದೆ |
ವೆಟ್ಟುತ್ತೊಡಗೂಡುತಿರ್ಪೊಡದು **ಪೀಡನಕಂ** || ೨೮ ||

ಉ|| ಕಾಮಿನಿ ಮಗ್ಗುಲಾಗೊಱಗಿರಲ್ ತೊಡೆಯೊಳ್ ತೊಡೆಯಿಟ್ಟು ತತ್ಪ್ರಿಯಂ |
ಪ್ರೇಮದಿನಪ್ಪಿ ಚುಂಬಿಸಿ ಗಳಧ್ವನಿಗೆಯ್ದೊಡಗೂಡೆ **ಮುಗ್ಧಕಂ** ||
ನಾಮಮೊಡರ್ಚಿದಂತೆ ತೊಡೆಯಂ ಪೊಱಗಣ್ಗೊಳಗಣ್ಗೆ ಸಾರ್ಚುತುಂ |
ಕಾಮಜಲಪ್ರವಾಹಮೊದವಲ್ ರತಿಯಂ ಸಮೆಯಲ್ **ಪ್ರವರ್ತನಂ** || ೨೯ ||

ಕಂ|| ಒಂದಡಿಯನುಡುಗಿ ಕುಳ್ಳಿ |
ರ್ದೊಂದಡಿಯಂ ಪಿಡಿದಿನಿಯನಿದಿರೊಳ್ ಸ್ತ್ರೀಕೂಟಂ ||
ದಾಂತಿಱದಿಂ ಕುಳ್ಳಿ |
ರ್ದೊಂದಿ ಸುಖಂಬಡೆವ ಬಂಧಮದು **ಯುಗ್ಮಪದಂ** || ೩೦ ||

ಪಸರಿಸಿ ಕುಳ್ಳಿರ್ದಳ ಬರಿ |
ಗಸವಸದಿಂ ಕೆಯ್ಯನಿಟ್ಟು ಬಲ್ಪಿಂದಾಲಿಂ ||
ಗಿಸಿ ತಿಗಮಂ ಕಾದಲನಲು |
ಗಿಸುತುಂ ಸಂಭೋಗಿಸಲ್ **ವಿಮರ್ದಿತ**ಕರಣಂ || ೩೧ ||

ನಿಂದು ಸತಿ ಕಂಬದೊಳ್ ಕಂ |
ಠಂದೊಡದಿರ್ದೊಪನರ್ದನಂ ಜಾನುಗಳಂ ||
ಹೊಂದಿಯೆರ್ದಾಡೆ ಮೊಟಕೆ |
ಯ್ಯಿಂದಾಂತೊಡೆವೆರಸೆ **ಜಾನುಕರ್ಪರ**ಕರಣಂ || ೩೨ ||

ಭಿತ್ತಿಗೆ . . . ಗೊತ್ತೊಂದಡಿ |
ಯೆತ್ತಿದ ವಲ್ಲಭೆಯ ಗುಹ್ಯದೊಳ್ ಲಿಂಗಮನಿ ||
ಟ್ಟೊತ್ತಿ ನುಣ್ಗೊರಲನಮರ್ದ |
ಪ್ಪುತ್ತಿನಿಯಂ ನೆರೆಯೆ **ಸಿಂಹವಿಕ್ರಮ**ಕರಣಂ || ೩೩ ||

ಪಸೆಯೊಳ್ ಪ್ರಿಯೆ ತಲೆಮೊಲೆ ವ |
ತ್ತಿಸಿ ಮೊಟಕಾಲೂರಿ ಬಾಗಿ ತಿಗವೆತ್ತಿರೆ ಇಂ ||
ತೆಸಗಿ ಭಗದೊಳೆ ಧ್ವಜಂ ಪೋ |
ಗಿಸಿ ಪತಿ ಪಿಂದಾಗಿ ರಮಿಯಿಸ**ಲ್ಕಿಭ**ಕರಣಂ || ೩೪ ||

ಎರ್ದ ತಿಗ ವರ್ಧನಡುಕದೆ |
ಸಾರ್ದೂರುಗಳೆಸೆಯೆ ಬಾಗಿ ತಿರ್ಯಙ್ಮುಖಮಾ ||
ಗಿರ್ದಳನಡರ್ದಿನಿಯಂ ತುಟ |
ವೀರ್ದು ಕುಚಂಬಿಡಿದು ನೆರೆಯೆ ತಿರ್ಯಕ್ಕರಣಂ || ೩೫ ||

ಬಾಗಿಪದಯುಗಕೆ ಕಾಮಿನಿ |
ಕೆಯ್ಗಳನಿಟ್ಟೊಯ್ಯನಡಿಯಿಡಲ್ ಪ್ರಿಯನಡರ್ದಿಂ ||
ಬಾಗಿ ತಳವೂರುಪೃಷ್ಠವಿ |
ಭಾಗದೆ ಮನಮೊಲ್ದು ನೆರೆಯೆ **ಧೇನುಕ**ಕರಣಂ || ೩೬ ||

ಮಣಿದಿರ್ವರೊಳೊರ್ವರನುರ |
ವಣೆಯಿಂ ನೆರೆಯುತ್ತುಮೊರ್ವ ಕಾಂತೆಯ ಭಗಮಂ ||
ಪ್ರಣಯದೆ ತುದಿನಾಲಗೆಯಿಂ |
ನಣಿದಣಿಯದೆ ಸೊಗಸುಗೆಯ್ವಿನಂ **ಸ್ತ್ರೀಯುಗಲಂ** || ೩೭ ||

ಮುಂಬಾಗಿ ರಮಣಿ ತತ್ಪ್ರ |
ಷ್ಠಂ ಬಿಡಬಿಡದೊರ್ಪನೊಂದೆ ಮತ್ತೋಪನ ಲಿಂ ||
ಗಂಬಿಡಿದು ಬಾಯೊಳಡಸಿ ಸು |
ಖಂಬಡೆವೊಡೆ **ಪುರುಷಯುಗಲ**ಕರಣಮೆನಿಕ್ಕುಂ || ೩೮ ||

ರತಿತೃಪ್ತಿಪಡಿಸಲಾಱದ |
ಪತಿಗೊಲ್ದುಪಚರಿಸಿ ಕಾಮದೊದವಿಂದತ್ಯು ||
ನ್ನತಲಿಂಗಮಾಗೆ ಪುರುಷಾ |
ಯತದಿಂ ಸತಿ ನೆರೆಯೆ **ಕೃತಕಕೇತನ**ಕರಣಂ || ೩೯ ||

ಮದನೋದ್ರೇಕದೆ ಸತಿ ತುಱು |
ಪದೆ ನಿಲ್ಲದೆ ಪೊಯ್ದು ಬಯ್ದು ನಖಹತಿಗೆಯ್ದೋ ||
ವದೆನಲ್ ಸುಸಿಲಂ ಪ್ರಿಯನೊಳ್ |
ಮುದದಿಂದಮೊಡರ್ಚೆ **ರೌದ್ರರತಿ**ಯೆನಿಸಿರ್ಕುಂ || ೪೦ ||

ಪುರುಷಂ ಮೇಲಾಗಿರೆ ಸರ |
ಸಿರುಹಾಸನಮುಮನೆಸಗುತೆ ಶಯ್ಯಾತಲದೊಳ್ ||
ಕರಯುಗವ ನೂಂಕಿ ತಲೆಗಳ |
ನೆರಡಂ ತಿರಿಪುತ್ತೆ ರಮಿಯಿಸಲ್ **ಭ್ರಮರಾಖ್ಯಂ** || ೪೧ ||

ಧ್ವಜವೆತ್ತಿಪೊಱಗಿದಾಣ್ಮನ |
ನಿಜಕಟಿತಟದೊತ್ತುಗೊಂಡು ಕಾಮಿನಿ ಪದಪಂ ||
ಕಜಮಿಟ್ಟು ಚುಂಬಿಸುತಂ |
ಗಜಗೃಹಜಲಮೊಗೆವೊಲೊಂದೆ **ಮುದ**ಮೆನಿಸಿರ್ಕುಂ || ೪೨ ||

ಸಮಸಂದು ನೀಡಿ ಕಾಲ್ಗಳ |
ನಮರ್಩ ಮೇಲಾಗಿ ಮಲಗಿದೋಪನ ತೊಡೆಯೊಳ್ ||
ಕ್ರಮವಿಟ್ಟು ನಿಂದು ನಿಂದು ಸು |
ಖಮನೆಯ್ದುತ್ತಬಲೆ ನೆರೆವಿನಂ **ಚಟಕಾ**ಖ್ಯಂ || ೪೩ ||

ಅಲುಗದೆ ಮೋಹನಮುಂ ಕಾ |
ದಲನಂಗತನೊಱಗಿ ಬಳಿಯೊಳುಂಗುಟವುಂ ||
ಬಲಿದಿಟ್ಟು ರಮಣಿ ಹುದುಗಿ |
ರ್ದೊಲವಿಂ ಚುಂಬಿಸುತೆ ನೆರೆಯೆ **ಕುಕ್ಕುಟ**ಕಾಖ್ಯಂ || ೪೪ ||

ಸಾರ್ತಂದಲರ್ವಸೆಯೊಳ್ ಪ್ರಿಯ |
ನಾರ್ತದೆ ಮೇಲಾಗಿ ಮಲಗಿ ಮಡಿದೂರುಗಳಂ ||
ಮಾರ್ತೊಡೆಯೊಳಪ್ಪಿ ಬಲ್ಪಿಂ |
ಕೂರ್ತಂಗನೆಯುಪರಿಸುರತಮಿರೆ **ದರ್ದುರಕಂ** || ೪೫ ||

ಕಡೆಗೆ ನಿಮಿರ್ದೆತ್ತಿ ನಲ್ಲಂ |
ತೊಡೆಗಳನಂಗತನೆ ಪಟ್ಟೆರಲ್ ಕಿಬ್ಬರಿಯಿ ||
ರ್ದೆಡದ ಪದವಿಟ್ಟು ಕುಳ್ಳಿ |
ರ್ದೊಡನೆರ್ದೆವತ್ತಿಸುತೆ ಸುದತಿ ನೆರೆಯೆ **ವಿಶಾಖಂ** || ೪೬ ||

ನುಂಗೊರಲನಪ್ಪಿ ಕುಳ್ಳಿ |
ರ್ದಂಗನೆಯುತ್ತಾನಶಯನದೋಪನ ಚರಣಂ ||
ಬೆಂಗಡೆಯೊಳ್ ತೋಳ್ಮುಟ್ಟದೆ |
ಹಿಂಗದೆ ನೆಲಸುವವೊಲೊಂದೆ **ಮನ್ಮಥಪಾಶಂ** || ೪೭ ||

ವರನಂಗತನಿರೆ ತಿಗವೆ |
ತ್ತಿರೆ ಜಾನುಮನೊರ್ಮೆ ಪದಮನೊರ್ಮೆಯಿಡುತ್ತುಂ ||
ಬರಿದೊ (ಪೊ) ಯ್ದು ಸಿತಕವಲ್ಲಭೆ |
ನೆರೆಯಲ್ **ಪ್ರೇಂಖೋಲಿಕಾ**ಭಿಧಾನಂ ಕರಣಂ || ೪೮ ||

ಸರಿಯಾಗಿ ನೀಡಿ ಪದಮಂ |
ವರನಂಗತನೊಱಗೆ ಮುಂದುಪಿಂದಾಗಿ ತಳೋ ||
ದರಿ ಕುಳ್ಳಿರ್ದುಂಗುಟವುಂ |
ಭರದಿಂ ಚುಂಬಿಸುತೆ ನೆರೆಯೆ ತಾಂ **ವಿಮುಖಾಖ್ಯಂ** || ೪೯ ||

ಬಾಲೆ ಬಾಣಂತಿ ಯೋನಿವಿ |
ಶಾಲೆ ಋತುಸ್ನಾತೆ ಹರಿಣಿ ಗರ್ಭಿಣಿ ಕೃತಸಂ ||
ಸ್ಥೂಲೆಯತಿವೃದ್ಧೆ ನೀಳ್ದವಿ |
ಲೋಲಸ್ತನಯುಗೆಯರುಪರಿರತಿಯೊಳ್ ಸಲ್ಲರ್ || ೫೦ ||

. . . ಸುವಲ್ಲಿ . . |
. ಮೆಯದ ಕಡು . ಲಾತ . . ಯ್ದು ಸಂಪ್ರಸುತಂ ||
ಸಮತಳಮುಪಹಸ್ತಮದುಂ |
ವಿಮುಷ್ಟಿಯೆಂದಿಂತು ನಾಲ್ಬಿಱದೆ ವರ್ತಿಸುಗುಂ || ೫೧ ||

ಪ್ರಸುತಂ ಮಡಿದಯ್ವೆರಲೊಂ |
ದಿಸುವೊಡೆ **ವಿಮುಷ್ಟಿ** ಗಾಢಮಾಗಿರೆ ಪಡೆಯಲ್ ||
ಕುಸಿ [ಯ] ಲ್ಕುಪ**ಹಸ್ತಂ** ನೀ |
ಳ್ದಿಸೆಯಲ್ **ಸಮತಳ** ವೆನಿಕ್ಕುವೀ ನ್ಗಾಱ್ಕೆಗಳಿಂ || ೫೨ ||

ಶಿರವುಂ **ಪ್ರಸುತ**ಕದಿಂ ಪೆ |
ರ್ಱಿರಿಯಂ ನೈತಂಬಯುಗಲವುಂ **ಸಮತಳ**ದಿಂ ||
ದುರು**ಮುಪಹಸ್ತ**ದಿಂ ದುರು |
ತರಧೃತದೃಢ**ಮುಷ್ಟಿ**ಯಿಂದೆ ಬೆನ್ನಂ ಪೊಯ್ಗುಂ || ೫೩ ||

ಕೃತನಿನದಂ ಕ್ವಣಿತಂ ಸೂ |
ತ್ಕೃತರುದಿತಂ ಶ್ವಸಿತ ಪೂತ್ಕೃತಂ ಸ್ತನಿತಂ ಹೂಂ ||
ಕೃತಮೆಂದೇೞುತೆಱಂ ರಾ |
ಕೃತಮೆಂದುಂ ರಸನೆಯಿಂದೆ ಮತ್ತೊಂದೆಸಗುಂ || ೫೪ ||

ಘನನಿನದಂಬೋಲ್ **ಸ್ತನಿತ**ಮು |
ನನಲಂ ಕೊಂಡೊಡೆವ ಬಿದಿರವೋಲ್ **ಸೂತ್ಕೃತ**ಮುಂ ||
ವಿನುತ ಗಜಧ್ವನಿವೋಲ್ **ರೋ** |
ದನಮುಂ ವೀಣಾಸ್ವನಾಳಿವೋಲ್ **ಕ್ವಣಿತ**ಮುಮುಂ || ೫೫ ||

ಬದರಿಪಾತ ಜಲ ನಿ |
ನದವೋಲ್ **ಫೂತ್ಕೃ**ತಮನೆರಡು ನಾಸಾಪುಟದಿಂ ||
ದುದಯಿಪ **ಹೂಂಕೃತಮುಂ** ರತಿ |
ಪದ ಜನಿ(ಸಿ)ತ ಸ್ವನಿತಮುಂ ವಿಭಾಗಿಸಿ ನೆಗೞ್ಗುಂ || ೫೬ ||

ಸತಿಯರ್ ಪ್ರಿಯರೊಳ್ ನೆರೆವಾ |
ರ್ತತೆಯಿಂ ಮೆಯ್ವೆತ್ತಿ ಸೋತು ಪೇೞ್ವುದೆಗೆಯ್ವಾ ||
ಪ್ಪಿತಮಂ ಸತಿಸೋವುಳಿಯ |
ಜ್ಞತೆಯಂ ಗಾವಿಲಮೆನಿಪ್ಪುದಂ ಸೂತ್ಕೃತಕಂ || ೫೭ ||
ನವಿಲಂಚೆ ಪರಭೃತಂ ಪಾ |
ರಿವ ಲಾವಕಮೆಂಬ ಪಂಚಪಕ್ಷಿಗಳುಲಿ ಮ ||
ತ್ತೆ ವಿಶೇಷಖಗಸಮೂಹದ |
ರವಮೆಂತಂತುಚಿತದಿಂ ಗಳಧ್ವನಿ ಗೆಯ್ಗುಂ || ೫೮ ||
ಎನಿತೊಳವು ಬಂಧವರ್ತನೆ |
ಯನಿತಂ ವ್ಯಕ್ತತೆಯಿನುಸಿರ್ದೆನುೞಿದುವನಱಿಗಿಂ ||
ಬಿನ ರತಿಸಾಧಕರೆಂಬ |
ತ್ತುನಾಲ್ಕುಸಂಖ್ಯಾಪ್ರಮಾಣಮಪ್ಪನ್ನೆವರಂ || ೫೯ ||

ಗದ್ಯಂ

ಇದು ವಿದಿತಮದನ ಮುದ್ರಾಂಕಿತ ವಿದೂರಜನನಿಬಂಧನ
ಕಾರಾಗಾರಮುಮಭಿನವನಾಯಕನಾಯಿಕಾ
ಶೃಂಗಾರಸಾರೋದ್ಧಾರಮುಂ ಸಕಲ
ವಿಬುಧಸೇವ್ಯಮಾನಮುಂ
ಲಕ್ಷಣ ಕವೀಂದ್ರ
ವಿರಚಿತಮು
ಮಪ್ಪ
ಮನ್ಮಥ ವಿಜಯದೊಳ್
ಚತುರ್ದಶಾಶ್ವಾಸಂ—ರತಾಧಿಕಾರಂ
ಸಂಪೂರ್ಣಂ.
—ಮಂಗಳ ಮಹಾಶ್ರೀ—

ಪಂಚದಶಾಶ್ವಾಸಂ

ಭಾರ್ಯಾಧಿಕಾರಂ

ಕಂ|| ವರಿಸುಗೆ ಜಗಜ್ಜನಂ . . . |
ರಿಸಿ ಸವರ್ಣದೊಳನೂನ ಕನ್ಯಕೆಯಂ . . . ||
ತ್ತರದೆ ಧರ್ಮಾರ್ಥಕಾಮಂ |
ದೊರೆಕೊಳೆ ವರ್ತಿಸುವ ಪೂರ್ವಶಾಸ್ತ್ರಕ್ರಮದಿಂ || ೧ ||

ಶಾ|| ಶ್ಯಾಮಂ ಮೇಣ್ ಕನಕಪ್ರಭಂ ಲಲಿತಗಾತ್ರಂ ನೀಲಕೇಶಾಳಿ ಲ |
ಜ್ಜಾಮೂರ್ಧಂ ವದನಪ್ರಸನ್ನತಿಕೆ ಯಿಾಷನ್ನಿದ್ರೆಯುಂ ಭೋಜನಂ ||
ಕಾಮಾಕ್ರಾಂತಮನಂ ಸರೋಜಕಲಶಂ ಚಂದ್ರಾದಿಲೇಖಾಂಘ್ರಿ ಪ |
ದ್ಮಾಮೋದಂ ಸಲೆ ಸಂದ ಕನ್ಯಕೆಯರೊಳ್ ಕಾರ್ಯಂ ವಿವಾಹೋತ್ಸವಂ || ೨ ||

ಮ|| ಭ್ರಮಣಂ ನಿದ್ರೆ ಸರೋಮಜಂಘೆ ಮುಖಮುಂ ಬಹ್ವಾಸನಂ ನಿಷ್ಕುರೋ |
ಕ್ತಿಮನಂ ಖೇದವಕಾರಣಸ್ಮಿತವಿಶಾಲೋಷ್ಠಂ ಬೃಹತ್ಕುಕ್ಷಿ ವ ||
ಕ್ರಿಮರೂಪ . . . ದ ಪಿಂಗಳಾಕ್ಷಿ ಮಿಗೆ ಸೂಕ್ಷ್ಮೋದ್ಯಚ್ಛರೀರಂ ದೃಢ |
ಕ್ರಮಹಸ್ತಂ ನಿಡುವಲ್ಗಳಂಗನೆಯ ವೈವಾಹಂ ನರರ್ಗಕ್ರಮಂ || ೩ ||

ವ|| ತದನಂತರಂ ;

ಮ|| ಸ್ರ|| ಕಳೆದುದ್ವಾಹಕ್ರಿಯಾದಿತ್ರಿದಿನ ಮನಸು[1]ನೋಟಂಗಳಿಂ ತಣ್ಪುಗೆಯ್ದು |
ತ್ಸವ ? ದಿಂದಲ್ಲಿಂ ಬೞಿಕ್ಕಾಳಿಯರ ಕೃತಕದಿಂ ಸೆಜ್ಜೆಗೊಯ್ದೊಲ್ದು . . . ರಂ ||
ಕೊಳಕಂ ತಿರ್ದುತ್ತುಮಾಲಂಗಿಸಿ . . . ಪುಳಕಂ ಪೊಣ್ಮೆ ಮುಂಡಾಡಿ ಮರ್ಮ | ?
ಸ್ಥಳದೊಳ್ ಪೊಯ್ದಿಕ್ಕುತುಂ ನಾಣ್ಪೊೞಿಸಿ ಸುರತಮಂ ಭೋಗಿಗಳ್ ಮಾೞ್ಕೆ
ನಿಚ್ಚಂ || ೪ ||

ಚಂ|| ಜನನುತೆ ಪುಣ್ಯವಂತೆ ಯನುಕೂಲೆ ಸುಶೀಲೆ ಯಮೋಘವಾಣಿ ಚೆ |
ಲ್ವಿನ ಕಣಿ ಕಾಮಕೋವಿದೆ ವಿಶಾರದೆ ಬಂಧುರೆ ಸತ್ಕುಲೀನೆ ಸ ||
ಜ್ಜನೆ ಯಜಮಾನೆ ದಾನೆ ಗೃಹಕೃತ್ಯವಿಚಾರೆ ಗುಣಪ್ರಚಾರೆ ನಲ್ಲನೊ |
ಳನುರಾಗಿ ಭೋಗಿಯೆನಿಸಿರ್ಪವಳೊಳ್ ಮನವಾೞ್ತೆ ಯೊಪ್ಪುಗುಂ || ೫ ||

ಶಾ|| ವೈರಂ ಗಂಡನೊಳೊಪ್ಪು ತದ್ರಿಪುಗಳೊಳ್ ವಿದ್ರೂಪು ನಾಣ್ಗೇಡಿ ದು |
ಶ್ಚಾರಿತ್ರೆ ಪ . . . . ||
. . . . . . | . . . . |
. . . . . . ಳ್ಮಳನಾಳ್ವಂಗೊಂದುಗುಂ ದುರ್ಯಶಂ || ೬ ||

ಚಂ|| ಕೃತಕಿ ಕುತರ್ಕವಾದೆ . . ವಂಚಕಿ ಬೋಸರಗಿತ್ತಿ ವಂಶವ |
ರ್ಜಿತೆ ತಿರಿವಳ್ ಬಹುವ್ಯಸನಿ ಲಿಂಗಿನಿ ಪಾಱು ಪರೋಕ್ತಿ ಧೂರ್ತೆ ದು ||
ರ್ಮತೆ ಮ(ನು)ಡಿವಳ್ತಿತೊಟ್ತು ಬೆಲೆವೆಣ್ ಮುದುಗುಂಟಣಿ ದೈವಕಾರ್ತಿ ನಾ |
ಪಿತೆ ಕಥೆ ವೇೞ್ವ ತೇಪೆಯೊಡನಾಡಿದ ಪೆಂಡಿತಿಗುಂಟೆ ಸಜ್ಜನಂ || ೭ ||

---

1. ಮೋದಂಗಳಿಂ

ಉ|| ಕ್ರೂರನನನ್ಯನಂ ತರಳನಂ ನಗೆಗಾಱನನರ್ಥಚೋರನಂ |
ಜಾರನನಲ್ಪನಂ ಕುಟಿಲತಂತ್ರವಿಶಾರದನಂ ಪಸುಂಬನಂ ||
. . . ಚಿತ್ತನನಾಸೆಗೆಟ್ಟನಂ . . . . |
ಚಾರುವಿಲಾಸಿಯಂ ಸತಿಗೆ ಕಾಪಿಡಲಾಗದು ಬುದ್ಧಿಯುಳ್ಳವಂ || ೮ ||

ಚಂ|| ವಳಿಪಳಿತಾಂಗನಂ ಸುಜನನಂ ವ್ರತನಿಷ್ಮನನಿಷ್ಟನಂ ನಿರಾ |
ಕುಳನನ ಸೇವ್ಯರೂಪನನಕಷ್ಟಶಚಿತ್ತನನಾಸೆಗೆಟ್ಟನಂ ||
ಪಳಿಯನನಾಪ್ತನಂ ? ಮದನಂ ಸುಚರಿತ್ರನನಸ್ತಭೋಗನಂ |
ಕುಲಜನನೊಯ್ದು ಕಾಪಿಡುಗೆ ಕಾಂತೆಗೆ ಕಟ್ಟಭಿಮಾನಿಯಾದವಂ || ೯ ||

ಕಂ|| ನೆಗಟ್ದಾ ಮನೆವಾಟ್ತೆಯ ತೋ |
ಟಗೆ ಸಾಧನಮಪ್ಪ ಗುಣವಿಚಾರಂಗೆಯ್ಯ ||
ಲ್ಕಗಣಿತವದು ರೂಢಂ ಮೂ |
ಜಗಕದಱಿಂ ಪೇಳ್ದೆನಲ್ಪಮಾತ್ರೋಕ್ತಿಗಳಿಂ || ೧೦ ||

ಗದ್ಯಂ

ಇದು ವಿದಿತಮದನ ಮುದ್ರಾಂಕಿತ ವಿದೂರಜನನಿಬಂಧನ
ಕಾರಾಗಾಮುಮಭಿನವನಾಯಕನಾಯಿಕಾ
ಶೃಂಗಾರಸಾರೋದ್ಧಾರಮುಂ ಸಕಲ
ವಿಬುಧಸೇವ್ಯಮಾನಮುಂ
ಲಕ್ಷ್ಮಣ ಕವೀಂದ್ರ
ವಿರಚಿತಮು
ಮಪ್ಪ
ಮನ್ಮಥ ವಿಜಯದೊಳ್
ಪಂಚದಶಾಶ್ವಾಸಂ — ಭಾರ್ಯಾಧಿಕಾರಂ
ಸಂಪೂರ್ಣಂ
—ಮಂಗಳ ಮಹಾಶ್ರೀ—

ಷೋಡಶಾಶ್ವಾಸಂ

ಕುಲಟಾಧಿಕಾರಂ

ಉ|| ಕೈವಿಡಿದಾತ್ಮವಲ್ಲಭನಿರಲ್ಕುಲಟಾಂಗನೆಗನ್ಯಚಿತ್ತದು |
ಭಾರ್ವವಧರ್ಮ . . . ಗುಮಾಯುಜಸಂ ಕರಿದಕ್ಕುಮಾದೊಡಂ ||
ಕಾವನ ಪೂಸರಲ್ಗರೆಬರಲ್ಕು ಯವಸ್ಥೆಯೊಳೊಂದಿ ಜೀವಮುಂ |
ಕಾವುದಶಕ್ಯಮಾಗಿಯದಱಿಂದವೆ ಪಾದರಮುಂ ನೆಗಲ್ಬುವರ್ || ೧ ||

ಮ||ಸ್ರ|| ಪರದೇಶಕ್ಕೆಯ್ದಿ ನಲ್ಲಂ ತಡೆಯೆ ಪುರುಡಿಸಲ್ ಪೊಯ್ಯೆ ಮೆಯ್ಗುಂದಿ ಮುಪ್ಪಾ |
ಗಿರೆ ನೇಹಂ ಪಿಂಗೆ ವೈರಂ ನೆಲೆಗೊಳೆ ಬಿಱುವಾತಾಗೆ ದಾರಿದ್ರ್ಯವಾದಂ ||
ಬರೆ ಪೋಗಲ್ ಕಾಪು ತನ್ನಿಚ್ಛೆಯೊಳಱಿಯೆ ಕುಲಾಚಾರಮುಂ ಪೋಗೆ ಪರ್ಬ |
ಕ್ಕಿರದನ್ಯಗ್ರಾಮ ದೇವಾಲಯ ಪಿತೃಗೃಹಮುಂ ಸಾರ್ಚೆ ಪೆಣ್ಬಾಣ್ಬೆಯಕ್ಕುಂ || ೨ ||

ಉ|| ಗಾಡಿಯನಾಂತ ಜವ್ವನಿಗರೊಳ್ ಕಡೆಗಣ್ಗಳ ಸನ್ನೆದೋಱ ಮಾ |
ತಾಡಿ ಬೆಡಂಗಿನಿಂದೆ ಮುಡಿವಿರ್ಚಿದೊಡರ್ಚಿ ಕಲಲ್ಚಿ ನೀವಿಯುಂ ||
ಕೂಡಿಸಿ ತೋಳ್ಮೊದಲ್ಮೆಱೆದು ತೋಱಿ ವಿನೋದದಿನಲ್ಪ ವಸ್ತುವಂ |
ಬೇಡೆ ಧರಿತ್ರಿಯೊಳ್ ಬಗೆಯೆ ಜಾರೆಯವಳ್ ಮದನಾಗಮಜ್ಞರಿಂ || ೩ ||

ಮ|| ಪೊಱಗಂ ನಿಟ್ಟಿಪ ಪಾಣ್ಬನಡ್ಡ ಸುಟಿಯಲ್ ಸಂಕೇತಮುಂ ಮಾಳ್ಪ ಸೈ |
ವೆಱಗಾಗಿರ್ಪತಿಧೂರ್ತಕೋಟಲೆಗಳಂ ಮಾಳ್ಪಲ್ಕಱಿಂ ಕ್ರೀಡಿಸಲ್ |
ತೆಱಪಂ ಜಾನಿಸುತಿರ್ಪ ಕುಂಟಣಿಯರಂ ಸನ್ಮಾನಿಸುತ್ತಿರ್ಪ . . |
ನೆಱೆಯಂಗೊಳ್ಳಿದಳಂತೆ ತೋರ್ಪವಳೆ ಜಾರಸ್ತ್ರೀಯರೊಳ್ ಬಲ್ಲವಳ್ || ೪ ||

ಕೃತಕಸ್ವಾಂತೆ ಕುರಂಟೆ ಪುಷ್ಪವತಿ ವೇಷಾಗಾರಿ ನಾಣೆ . . |
. . ದ್ರೋಹಿ ತಪಸ್ವಿ ವೃದ್ಧೆ ಕಿಱುವೆಣ್ದೇವಳೆ ಗುಹ್ಯವ್ರಣಾ |
ನ್ವಿತೆ ದುರ್ಗಂಧಿನಿ ಕಾಲಗೋ . . .ಡಿಪ್ಪವಳ್ ಭೋಗವ |
ರ್ಜಿತೆ ದುಃಶೀಲೆ ವರಾಕಿ ಧೂರ್ತೆಯರೊಳೊಂಡಲ . .ದಂ ವಿಟಂ || ೫ ||

ಉ || . .ರದಂ . .ನಂ . . ಬರಿದೆ ದೂರುವನಂ . . . . ಂಡನಂ ಕುಲಾ |
ಚಾರವಿಹೀನನಂ ಕುಟಿಲನಂ ಪಱವಾನಿಸನಂ ಭಯಂಕರಾ |
ಕಾರನನಪ್ರಮಾಣಿಕನ . . ರಗೆಗೆಟ್ಟನಂ ಸದಾ |
ಕ್ರೂರನನಿಚ್ಛೆಗೆಯ್ದುಧನನಂಗನೆಯರ್ ನೆರೆಯಲ್ಕೊಡಂಬಡರ್ || ೬ ||

ಮ ||ಕಡುಚೆಲ್ವೊಂದಿದ ಜವ್ವನಂ ಮೆಱೆವ ನಾಣಂ ಕಾಯ್ವ ಪೇಳ್ದಂತೆಗೆ |
ಯ್ವೆಡರಂ ತೀರ್ಚುವ ಕಾಮತತ್ವದಱವೊಳ್ ಪಾರಂ ತಗುಳ್ವೀಪ್ಸಿತಂ |
ಗುಡುವೊಲ್ದಂತೊಡಗೂಡುವಾದರಿಸುವತ್ಯಾಸಕ್ತಿಯಿಂ ಜೋಲ್ವ ಕಂ |
ಗೆಡೆದಿರ್ದಲ್ಲಿಗೆ ಬರ್ಪವಂಗಬಲೆಯರ್ ಸೋಲ್ವರ್ ಮಹೋತ್ಸಾಹದಿಂ || ೭ ||

ಉ ‖ ಕಾಂತನವಜ್ಞೆಗೆಯ್ವ ಬಿನದಕ್ಕೊಳಗಪ್ಪ ನಿಜೇಚ್ಛೆಯಿಂ ಪುರಾ |
ಭ್ಯಂತರದೊಳ್ ತೊಳಲ್ವ ಬಹುಭೋಗದೆ ಬಾಳ್ವ ಬೆಡಂಗುವಾತನ |
ಶ್ರಾಂತಮೊಡರ್ಚುವಾಣ್ಮ ನನಗಲ್ಚಿದ ಜಾವನಕಾಲದೊಳ್ ವಿವಾ |
[1]ಹಾಂತದೊಳೀಪ್ರಕಾರದೆಳವೆಣ್ಗಳೊಳೊಂದುಗೆ ಕಾಮುಕವ್ರಜಂ ‖ ೮ ‖

ನೋಡಲೊಡಂ ತುಱುಂಬಿ ಮನಮಂ ನನೆಗೋಲ್ಗಿರದೀಡುಮಾಡಿ ಯೊ |
ಳ್ಗಾಡಿಯಿನೊರ್ಮೊದಲ್ಮುಳಿದು ಕಾಮಿಸಿ ಬರ್ಪವರ್ಗಂಜಿ ನಿಂದು ಮಾ |
ತಾಡದೆ ಪೋಪಿನಂ ಬಿಡದೆ ಬೆಂಬಲಿಯಂ ಚದುರಿಂದೆ ಸೋಲಮಂ |
ಮಾಡಿಯುಪಾಯಶಕ್ತಿಯೊಳೊಡರ್ಚುಗೆ ಸಾಧಕನಂಗಸಂಗಮಂ ‖ ೯ ‖

ಉ ‖ ತಾನ್ನೆಗಲ್ದುಜ್ಜುಗಕ್ಕೆಳಸಂದಗನೆಯಂ ಬಸಮಾಳ್ಪ ದೂತಿ ಮೆ |
ಲ್ಪಿನ್ನಣಿ ಮಾಲೆಗಾರ್ತಿ ಸಖಿ ಧಾತ್ರಿಕೆ ಲಿಂಗಿನಿ ದಾಸಿ ಶಾಸ್ತ್ರಸಂ ‖
ಪನ್ನೆ ವರಾಕಿ ಪಾರ್ಶ್ವಗೃಹವರ್ತಿನಿ ಯಾಚಕಿ ಸಾಧುವೇಷಸಂ |
ಪನ್ನೆಯರಾದಿಯಾದ ಸಹಕಾರಿಗಳಂ ಬಿಡದಿರ್ಕ್ಕೆ ಸದ್ವಿಟಂ ‖ ೧೦ ‖

ಕಂ ‖ ಒಳಗಾದಳೆನಗೆ ಸತಿಯೆಂ |
ದಳುಪಿಂ ತಿಳಿಸಂದು ಪೋಗದಾಳಿಯರಿಂದಂ ‖
ತಿಳಿಪಿ ನಿಜನಿಳಯಕೆಯ್ದಿಸಿ |
ಕಳವಳಿಸದೆ ಸುರತಸುಖವನೆಯ್ದುಗೆ ಚದುರಂ ‖ ೧೧ ‖

ಗದ್ಯಂ

ಇದು ವಿದಿತಮದನ ಮುದ್ರಾಂಕಿತ ವಿದೂರಜನನಿಬಂಧನ
ಕಾರಾಗಾರಮುಮಭಿನವನಾಯಕನಾಯಿಕಾ
ಶೃಂಗಾರಸಾರೋದ್ಧಾರಮುಂ
ವಿಬುಧಸೇವ್ಯಮಾನಮುಂ
ಲಕ್ಷಣ ಕವೀಂದ್ರ
ವಿರಚಿತಮು
ಮಪ್ಪ
ಮನ್ಮಥ ವಿಜಯದೊಳ್
ಷೋಡಶಾಶ್ವಾಸಂ— ಕುಲಟಾಧಿಕಾರಂ
ಸಂಪೂರ್ಣಂ.
—ಮಂಗಳ ಮಹಾಶ್ರೀ—

1. ಹಾಂತರೆಯಿಂ ಶ್ರೀಕಾರದೆರೆವೆಣ್ಗ (ಪಾ)

ಸಪ್ತದಶಾಶ್ವಾಸಂ

ವೇಶ್ಯಾಧಿಕಾರಂ

ಮ ‖ ಸಲೆ ಚಾತುರ್ವಿಧವರ್ಣದೊಳ್ ಜನಿಸಿ ಬಿಟ್ಟಾಚಾರಮಂ ಲಜ್ಜೆಯಂ |
ಕುಲಮಂ ಶೀಲಮನಿಷ್ಟರಂ ವಿಟರ್ಗೆ ಮಾತ್ಸರ್ಯಮಂ ಮನಕ್ಕೊಂದದಂ ‖
ತೊಲವಿಂಗಾಡಿ ಚತುರ್ವಿನೋದದೆ ಸುಸಿಲ್ಗೆಯ್ಯಲ್ಕೆ ಪಕ್ಕಾಗಿ ಕೋ |
ಮಲೆಯರ್ ವೇಶ್ಯೆಯರಪ್ಪರಂಗಭವತಂತ್ರಂ ಮೂರ್ತ್ತಿವೆತ್ತಂದದಿಂ ‖ ೧ ‖

[1]. . . . .
. . . .
. . . .
. . . . ‖ ೨ ‖

ಚಂ ‖ ತೊಡಹದ ಮೋಹವಿಚ್ಛೆಯಱಿದಪ್ಪಱಿಯಾಸೆ ಬೆಡಂಗುವಾತು ನಾ |
ಣುಡುಗಿದ ತೋಟಿ ಹೂಸಕದ ಕಾತರವಿಲ್ಲದ ಸೊರ್ಕು ಬೇಟವಾ ‖
ಱಿಡಿ ಕೃತಕದ್ರವತ್ವವತಿಕೈತವಪೊಂದಿದ ಮೂರ್ಛೆಯಾದಿಯಾ |
ಗೊಡರಿಪ ವೈಶಿಕಂಗಳಿವು ವೇಶ್ಯೆಗೆ ಭೂಷಣಮಾಗಿ ರಂಜಿಕುಂ ‖ ೩ ‖

ಉ ‖ ಹಿಂಗದ ನೋಟವಿಂಪಡರ್ದ ಜಾಣ್ನುಡಿ ತುಳ್ಕುವ ಕಾಂತಿ ರಂಜಿಪೊ |
ಳ್ಸಿಂಗರ ವೇಱುಜಾವನದ ಮೆಯ್ಸಿರಿ ಯೇಱ್ವ ಸುಲೋಮ ವಾಸ್ಯದೊಳ್ ‖
ಸಂಗಳಿಸಿರ್ಪ ಮೆಲ್ನಗೆ ಯೊಡರ್ಚಿದ ಲಜ್ಜೆ ವಿನೋದಗೋಷ್ಠಿಮಾ |
ಳ್ಪಿಂಗವಿಲಾಸಮುಖ್ಯ ಗುಣಮಿಂತಿವು ನಲ್ಲರ ಬೇಟದಾಗರಂ ‖ ೪ ‖

ಉ ‖ ಬೀಸುವ ತೆಂಬೆಲರ್ ಕುಳಿರ್ವ ಪೂಗೊಳನಾಣತಿಗೆಯ್ವ ತುಂಬಿಯ |
ಚ್ಚಾಸವನನ್ನಪು . . ವ ಪೋದುವ ಕನ್ನಡವಕ್ಕಿ ಕೆಂದಳಿ ‖
ರ್ವಾಸು ವಿಲೇಪನಂ ಬಹುಫಲಂ ನಱುದಂಬುಲ ವಚ್ಚಗಪ್ಪುರಂ |
ಸೂಸುವ ಜೊನ್ನದೊಳ್ಪು ಮೊದಲಾದುವು ನಲ್ಲರ ಬೇಂಟದಾಗರಂ ‖ ೫ ‖

ಮ‖ ಸ್ರ‖ ತವದಿಂಪಿಂ ಯುಂ ಪಣಂಗೊಂಡೇಱಿ ಬಱಿಯಂ . . . . |
. . . ನೋಱ್ಪಿನಂ . . . . ಣ್ಪಗೆಯ್ದು ‖
ಕ್ಕೆವದಿಂ ನಾನಾ ವ್ರತಾಚಾರದಿನತನುಕೃಶ . . . ಭಾ |
ವವನಾಂತೊಳ್ಪಿಂದೆ ವಿತ್ತಂದೆಗೆವವರ್ಗಳೆ ರಕ್ತಾಖ್ಯದಿಂದೊಪ್ಪಿ ತೋರ್ಕುಂ ‖ ೬ ‖

ಮ‖ ಚದುರಿಂದರ್ಥವ [ನೆಂತುಟು]ಂ ಕವರ್ದುಕೊಂಡೀಯಲ್ ವಿಟಂಗೇನುಮಿ |
ಲ್ಲದ ಪಾಂಗಂ ತಿಳಿದೊಳ್ಗುರುಳ್ ನಿಱಿಗಳಂ ಸೈತಾಗಿಸುತ್ತಿರ್ದು ದೂ ‖
ರದೆ ನಿಂದಬ್ಬೆ ಕನಲ್ವಳೇಱ್ ಸಮಯವಲ್ಲೆಂದೆಱ್ಬಿ ತಾಂ ದ್ವಾರದೇ |
ಶದೆ ನಿಂದನ್ಯನೊಳೊತ್ತೆಯಂ ಪಿಡಿವವಳ್ಗಕ್ಕುಂ ವಿರೋಧಾಹ್ವಯಂ ‖ ೭ ‖

1. ಮೂಲದಲ್ಲಿ (ಓಲೆಯಪುಸ್ತಕದಲ್ಲಿ) ಒಂದು ಪದ್ಯವನ್ನು ಬರೆಯುವದಕ್ಕಾಗುವಷ್ಟು ಸ್ಥಳವನ್ನು ಬಿಟ್ಟು ಅನಂತರ ಬರೆದಿರುವ ಪದ್ಯಕ್ಕೆ ಸಂಖ್ಯೆ "೩"ನ್ನು ಕೊಟ್ಟಿದೆ.

॥ ವಿಟಲಕ್ಷಣಂ ॥

ಮ॥ ಅನಘಂ ಗಂಡಗುಣಂತ್ರಿಕಾಲಸಮಯ ಪ್ರಾಜ್ಞಂ ವಿನೋದೈಕಶೀ ।
ಲನಧೀನಂ ಚತುರೋಕ್ತಿಯುಕ್ತ ನಭಿಮಾನಂ ಕಾರ್ಯದಕ್ಷಂ ಸುಹೃ॥
ಜನಸೇವ್ಯಂ ಸುಭಗಂಧನಾಢ್ಯನುರುಜಂ ಸನ್ಮೋಹಿಸದ್ವಂಶಸ ।
ಜ್ಜನನಂ ನರ್ಮಸಮೇತನೆಂದೆನಿಸುವಂ ವೇಶ್ಯಾಪ್ರಿಯಂ ವೈಶಿಕಂ ॥ ೮ ॥

1॥ ಕುವಿಟ ಲಕ್ಷಣಂ ॥

ಮ॥ ಗಳಪಂ ನಿಷ್ಠುರಭಾಷಣಂ ಕುಪಿತ ನನ್ಯಸ್ತ್ರೀರತಂ ದೋಷಿ ಸಂ ।
ಚಳಚಿತ್ತಂ ಕಡುಪಾಱುಲೊ . . . . . ದುರುಳಂ ಗರ್ವೋದ್ಧತಂ ಕಾಳಿಕಂ ॥
ಖಳನಜ್ಞಂ ಶಠನೇಳಿದಂ ವಿಕೃತವೇಷಂ ಮಾನಭಂಗಂ ಭಯಾ ।
ಕುಳಿತಂ ರೂಪವಿಕಾರಿಯಪ್ಪೊಡಧಮಾಖ್ಯಂ ವೈಶಿಕವ್ರಾತ[ದೊ]ಳ್ ॥ ॥ ೯ ॥

ಚಂ॥ ತನಗೊಳಗಾಗದರ್ಥಮನಪೇಕ್ಷಿಸಿ ಯನ್ಯರನಾಸೆಗೆಯ್ವ ಮಾ ।
ನಿನಿಯರ ಚಿತ್ತಮಂ ಸೆಳೆವ ವೈಶಿಕದೌಷಧಿ ಧೂಪ ದೀಪ ಮೋ ॥
ಹನತಿಲಕಂ ದ್ರವೀಕರಣನಂಗಜಮಂದಿರವರ್ತಿ.... ।
ಪನವಿನತಂ ಪ್ರಯೋಗಿಸುವ ನಾವನವಂ ಪೊಸತಪ್ಪ ಮನ್ಮಥಂ ॥ ೧೦ ॥

ಕಂ॥ ಪ್ರಮದಾಜನ . . . ಯು ।
ತ್ತಮೆ ಮಧ್ಯಮೆ ಯಧಮೆಯೆಂದು ಗುಣನಾಮಂಗಳ್ ॥
ಸಮುಚಿತ ಯಥಾಕ್ರಮದೆ . . . ।
. . . ಮಹೀತಳದೊಳ್ ತ್ರಿಭೇದದಿಂ ನಂದಿ . . . . ॥ ೧೧ ॥

ಉ॥ . . . ಪೊಂದಿದ ಪ್ರಕಟಕೋಪಿತೆ ತತ್‌ಕ್ಷಣ ಸುಪ್ರಸನ್ನೆ . . . ।
. . . ರವಿಶೇಷ ಭೋಗಯುತೆ ಕಾಂತನ ದುರ್ಗಣಕೀರ್ಷ್ಯೆ ಚಿತ್ತದೊಳ್ ॥
ಸೇರದ ಸದ್ಗುಣಾಢ್ಯೆ ವಿನಯೋಕ್ತಿಸಮುಗ್ರೆ ಸುಸಿಲ್ಬೆಡಂಗಿ ಶೃಂ ।
ಗಾರನಿವಾಸೆ ಮೋಹಿ ಯೆನಲುತ್ತಮೆ ಪೆಣ್ಗಳೊಳೆಂದು ಬಣ್ಣಿಕುಂ ॥ ೧೨ ॥

ಚಂ॥ ಮಡಗದ ಕೋಪವಾತ್ಮಸಖಿಯರ್ ತಿಳಿಪಲ್ ಬಗೆಗೊಳ್ವ ಬುದ್ಧಿ ನಾ ।
ಣ್ಗೆಡೆಯೆನೆ ಧೂರ್ತವೃತ್ತಿಗೆ ಮೊಗಂಗುಡದಾಱಿಗೊಂಡು ಕಾಡುವಾ ॥
ಱಿಗತನಂ ಪೊದಲ್ವ ತವಕಕ್ಕುರದಿರ್ಪ ಮನಂ ಪ್ರಿಯಾಪ್ರಿಯಂ ।
ಬಡೆದ ಪಟೂಕ್ತಿಮುಖ್ಯ ಗುಣಮುಳ್ಳೊಡೆ ಮಧ್ಯಮೆ ಯಪ್ಪಳುರ್ವಿಯೊಳ್ ॥ ೧೩ ॥

ಮ॥ ತಿಳಿಪಲ್ಕಾಯ್ವ ನಿಜೇಶ್ವರಂ ಮುಳಿಯೆ ಮೆಯ್ವೆರ್ಚಿದ್ರ್ಪ ಸನ್ಮಾನ್ಯರಂ ।
ಪಟುಕೆಯ್ದಾತ್ಮವಿಕಾರಿಗಳ್ಗೆಳಸುವನ್ಯಾಸಕ್ತಿಯಿಂ ತೊೞ್ತಿರೊಳ್ ॥
ಕೆಳೆಯಂ ಮಾಳ್ಪ ನಖಾಂಕತಾಡನ ರತಿವ್ಯಾಪಾರದೊಳ್ ಸಲ್ವ ಚಾ ।
ಪಳಭಾವಂ ನೆರೆದಿರ್ಪ ಕೈತವೆಗೆ ಸಲ್ಗುಂ ನೀಚೆ ಯೆಂಬೀ ಪೆಸರ್ ॥ ೧೪ ॥

1. ಕುವಿಟಂಗೆ (ಪಾ)

ಕಂ॥ ಮನಮೊಸೆದು ಭಾವಿಸುಗೆ ಬುಧ ।
ಜನವೋಪರೊಳೆಸೆವ ಪಾಣ್ಬೆ ಜಾರವಿಟರ್ ತಾ ।
ವೆನಿಪರ ತತ್ತದ್ಗುಣ ಸಂ ।
ಜನಿತವಿಭೇದಕಕಳಾಪ ಮಿಂತೀ ಕ್ರಮದಿಂ ॥ ೧೫ ॥

ಗದ್ಯಂ

ಇದು ವಿದಿತಮದನ ಮುದ್ರಾಂಕಿತ ವಿದೂರಜನನಿಬಂಧನ
ಕಾರಾಗಾರಮುಮಭಿನವನಾಯಕನಾಯಿಕಾ
ಶೃಂಗಾರಸಾರೋದ್ಧಾರಮುಂ ಸಕಲ
ವಿಬುಧಸೇವ್ಯಮಾನಮುಂ

ಲಕ್ಷಣ ಕವೀಂದ್ರ
ವಿರಚಿತಮು
ಮಪ್ಪ

ಮನ್ಮಥ ವಿಜಯದೊಳ್

ಸಪ್ತದಶಾಶ್ವಾಸಂ—ವೇಶ್ಯಾಧಿಕಾರಂ
ಸಂಪೂರ್ಣಂ.
—ಮಂಗಳ ಮಹಾಶ್ರೀ-

ಅಷ್ಟದಶಾಶ್ವಾಸಂ

ವಶ್ಯಾಧಿಕಾರಂ

ಕಂ|| ಆರಯೆ ಸಮಸಂದಿಚ್ಛಿಗೆ |
ಸೇರದೊಡನ್ಯೋನ್ಯಮಂ ಬಸಂಗೆಯ್ಯುವ ಸಂ ||
ಸಾರಸುಖವೀವ ಮಂತ್ರೋ |
ಚ್ಚಾರಣೆಯಂ ಮಂತ್ರತಂತ್ರಮಂ ನೆಱೆ ಪೇೞ್ವೆಂ || ೧ ||

ಕಂ|| ಮೊದಲೊಳು ಲಕ್ಷಿಪಂಗೀ....... |
ವುದು ತದ್ವೇ (ದ್ವ) ಶಮಾಂಶ . . . . . ||
. . . . |
ಶದೆಯರ್ಘ್ಯಂ ಗೊಡುವುದಲ್ಲಿ ಮಂತ್ರಂ ಸಿದ್ಧಂ || ೨ ||

ಕಂ|| ವರ ಓಂಕಾರದೆ ದಂತೀ |
ಶ್ವರರಾಡ್ಕ್ಯಾಮಾನಯಾನಯಾ ಕ್ರೋಂ ಸ್ವಾಹಾ ||
ಕರಮಂತ್ರದೆ . . . . |
. . . . ಷಂ || ೩ ||

ಕಂ|| ಸಲೆ "ಚಾಮುಂಡಿ ಹುಲು ಹುಲು |
ಚುಲು ಚುಲು ತಾಂ ಸ್ವವಶಮಾನಯ ಸ್ವಾಹಾ" ಯೆಂ ||
ದಲಸದೆ ಮಂತ್ರಿಸು ಪೂಗಳ |
. . . . || ೪ ||

ಪ್ರಿಯದಿಂದ "ಮದಮದಯ ಮಾ |
ದಯ ಆದಯ ಹಂಸ ಹ್ರೀಂ ಸ್ವಾಹಾ ನಯ" ಯೆಂ ||
ದಯುತ ಜಪಮೆಣಿಸಿ ಕಾಮಿನಿ |
. . . . || ೫ ||

ಮ|| ಸ್ರ|| ಬರೆದಾ ಸ್ತ್ರೀನಾಮ ಹೃದ್ಗರ್ಭಿತಮನಲಗೃಹದ್ವಂದ್ವಮಂ ಷಟ್ಪದಾಭ್ಯಂ |
ತರಕೆಲ್ಲಂ ಸ್ವಸ್ತಿಕಾಲೇಖ್ಯಮನವೞ ವಿದಿಙ್ಮಧ್ಯಕಾರ . . . ||
. . . . ಪಾಶಾಲೇಖನಂ ಗೂ |
ಡಿರಲಾಜ್ಯಂ . . . ದೀಪಾಗ್ನಿಗೆ ಪಿಡಿದೊಡನಾಕರ್ಷಣಂ ಸಿದ್ಧಮಕ್ಕುಂ || ೬ ||

ಮ|| ನಿಶೆ ಲಾಕ್ಷಾರಸದಿಂದೆ ಸಾಧಿ . . . . |
. . . . . ಬೞಿಯೊಳ್ ತೀವಿರೆ ಭುಜಪತ್ರಾಂತಸ್ಥಮಾಗೊಪ್ಪೆ ನಿ ||
ರ್ಮಿಸಿ ತತ್ಪಾದದ ಧೂಳಿ ಪುತ್ತಳಿಯ ಗುಹ್ಯಸ್ಥಾನದೊಳ್ ಪೂೞ್ದು ಜಾ |
. . . . ನೀ ಮಧ್ಯದೊಳ್ || ೭ ||

ಮ|| ಪೆಸರಂ ಭೂರ್ಜದೊಳಿಟ್ಟು ಸಂಘಟಿತ ವೈಂ ಹ್ರೀಂ ಕ್ರೀತದೊಳೆದ್ದಸಮೆ |
ಯ್ದಿಸೆಯಲ್ಕೀ ನಡುವೊಪ್ಪಿರೆ . . . . . . ||
. . . . . ಗಂಧಯುಗಜಾತಕರ್ಪಷ್ಮದಿಂದಂ ತ್ರಿಲೋ |
ಹ ಸುವೇಷ್ಟೀಕೃತಮಾಗೆ ಮಾಡಿ ಧರಿಸಲ್ ಸ್ತ್ರೀವಶ್ಯಮಕ್ಕುಂ ದಿಟಂ || ೮ ||

ಉ|| ತೀ . . . . ಸರ್ಷಪಂ |
ಗೂಡಿ ಚಿತಾಗ್ನಿಯೊಳ್ ಶಬದ ಕರ್ಪಟಮಾಲ್ಯನಖಾಳಿಕೇಶಮಂ ||
ಜೋಡಿಸಿಯಾಲಗಟ್ಟಿಗೆಯೊಳಾನಯ ಯಕ್ಷಿಣಿ . . . . . |
. . . . ಸಾಧಕನಲ್ಲಿಗೆಯ್ದುಗುಂ || ೯ ||

ಕಂ|| ಘನಸಾರಕನ್ಯಕಾ ರೋ |
ಚನ ಸಿತಶರಪುಂಖ ಯರ್ಕ ಗಿರಿಕರ್ಣಿಕೆ ಚಂ ||
ದನ ವಿಷ್ಣುಕ್ರಾಂತಿಯ . . |
. . . . || ೧೦ ||

ಕೇರೆಯ ಪಿತ್ತಂ ಕನಕದ |
ಬೇರುಂ . ಶಿಖಾಸ್ಥಿ ಕಲ್ಕಭಾವನೆಯಂ ತಾಂ ||
ಕೂರಸಿಯೊಳ್ ಪಿಡಿದಂಜನ |
ಸಾರಮನಿಂಬಾಗಿ ತಿಲಕಮಿಡೆ ವಶ್ಯಕ [ರಂ] || ೧೧ ||

ಮ|| . . . . ಸೂತಂ ಲಿಂಗಿ ಮಾತಂಗಿಯಂ |
ಗಮ . . . ಟಂಕಂ ವತ್ಸಭೀಕಟ್ಪಲಬೀಜಂ ಪುತ್ತುಪರ್ಣಭೂಜಲ ||
ಭ್ರಮ ಕೀಟಂ ಸಿತಗುಂಜಿ ನ . . . . |
. . . ಡೆ ದಿಕ್ಕುರ್ಮೊಲ್ಲದವಳೊಲ್ಗುಂ ಚೂರ್ಣದೊಳ್ ನಿಕ್ಕುವಂ || ೧೨ ||

ಮ|| ಅಡಿವೆಜ್ಜಂಗಳೆದಿಟ್ಟು ಭಾಂಡಮನಧಃಕುಂಡಾಗ್ರದೊಳ್ ತೀವಿ ಕ |
ರ್ಪುರದುನ್ಮತ್ತದಮೂ . . . . ||
. . . ಕೂಡಿದ ಬಟ್ಟೆಯೊಳಪಾಮಾರ್ಗೇಂಧನಜ್ವಾಲೆಯಿಂ |
ಪಿದಿದುಪ್ಪಂ ಮಧುರಾದಿಭೋಜನದೊಳಿಕ್ಕಲ್ . ರಾ ಮುಂಪೇ . . || ೧೩ ||

ಕರವೀರಂ ಮುಗುಳ್ಗಬ್ಬು ಮಲ್ಲಿಗೆಗಳ . ಕಲ್ಹಾರಿಕ . ಭಿ ವಿಂ |
ದಿರ . ವೃಶ್ಚಿಕ . . . . ಕೃಷ್ಣಧು ||
ತ್ತುರವಾ . . ಕರ್ಣಕರ್ದಮಸಮೇತಂ ಮರ್ದನಂಗೆಯ್ದು ಸಾ |
ಧ್ಯ ರುತುಸ್ನಾನಮನಾಂತ ತದ್ದಿನದೊಳಿಕ್ಕಲ್ ನಲ್ಮೆ ಮೆಯ್ವೆರ್ಚುಗುಂ || ೧೪ ||

ಕಂ|| ಸವನಿಸಿ ಸಿತಸಿದ್ಧಾರ್ಥೋ |
ದ್ಭವ ತೈಲವಿಮಿಶ್ರಮಟ್ಟು ದಾಡಿಮಪಂಚಾಂ ||
ಗವನಬಲೆಯೋನಿಗೂಡಿ ನೆ |
ರೆವೊಡವಳುಂ ಪುರುಷಮಿಶ್ರಮಂ ಪಡೆದಿರ್ಪಳ್ || ೧೫ ||

ಕಂ|| ಮಾಲತಿಯ ಕುಸುಮವುಂ ಕಟು |
ತೈಲಂ ಬೆರಸಟ್ಟು ಯೋನಿದೊಡೆದೊಡಗೂಡಲ್ ||
ಲೋಲೇಕ್ಷಣೆಯಂ ತಾಂ ಬಹು |
ಕಾಲಂ ಬಿಡದೋಪನಗಲದಿರ್ಪನಮೋಘಂ || ೧೬ ||

. ಲೆನಾಗಬಲೆ ಶತಾವರಿ |
ನೆಲದೊಳ್ ಕೊಳ್ಗುಳಿ [ಕೆ] ಕುನಟ ಗೋಕ್ಷುರಕಂ ಕ ||
ಟ್ಫಲವುಂ ಸಿತದುಗ್ಧ ದೆ ಕಾ |
ದಲನೀಂಟಲ್ ಸತಿ ಸಹಸ್ರಕೊರ್ವನೆ ಸಾಲ್ಗುಂ || ೧೭ ||

ಮ|| ಗಿರಿ ಕೂಷ್ಮಾಂಡ ಸಮುದ್ರಶೋಕೆಯ ಘೃತಂ ಭಲ್ಲಾತಬೀಜಾಸ್ಥಿ ಮೋ |
ಚರಸಂ ಶಿಗ್ರು ವರಾಲ ಕೋಷ್ಮ ಹಯಗಂಧಂ ದ್ರಾಕ್ಷೆಯಷ್ಟೀ ಶತಾ ||
ವರಿ ಜಾತೀಫಲ ಜೀರಕದ್ವಿತಯಚೂರ್ಣಂ ತತ್ಸಮಾನಾಖ್ಯಶ |
ರ್ಕರೆಯಿಂದಾಕಳ ಪಾಲೊಳೀಂಟೆದೊಡೆ ವೀರ್ಯಂ ಸತ್ವಮುಂ ಪೆರ್ಚುಗುಂ || ೧೮ ||

ಮ|| ಮುನಿಪುಷ್ಪಂ ಮಧು ಸಿಂಧುಜಾತ ಕಣ ಪಥ್ಯಾ ಟಂಕಣಂ ತುತ್ಥ ರೋ |
ಚನ ಪಾರಾವತವಿಷ್ಟಿ ಮಾತುಲ ಶಿಲಾ ಯಷ್ಟೀ ಹಿಮಂ ಕುಂಕುಮಂ ||
ಕನಕಂ ಪಿಪ್ಪಲಿ ಕಾಮ ಗುಂಜಿ ನಿಜವೀರ್ಯಂ ಪಾರದಂಗೂಡಿ ಯೆ |
ಳ್ಪನಿತಂ ಮೋಹನಮೂರ್ಧಕೆ(ಮೆ)ೀಱಸೆ ದೃಢಸ್ಥೂಲಂ ಬಲಂ ಪೆರ್ಚುಗುಂ ||೧೯||

ಕಂ|| ವರಹಯಲಾಲೇಂದ್ರಿಯ್ಯೀವಾ |
ಸುರಿ ಜಾತಿಪರ್ಣಕುಸುಮ ಮಂಜಿಷ್ಠೆಗಳಂ ||
ಪುರುಷನಾತ್ಮಧ್ವ(ಧ್ವಿ)ಜಾಗ್ರ |
ಕ್ಕೊರೆದು ಸುಸಿಲ್ಗೆಯ್ಯೆ ಕಾಂತೆ ತೊಳ್ತಳ್ತಿರ್ಪಳ್ || ೨೦ ||

ಮೊಲೆಯ . . . . ಂತಹಿ |
ಮಲ . ಮರುಣಮುನಿಪ್ರಸೂನವೆರಡಂ ತಾಂ ಪಿ ||
(ಪ್ಪಲ) ಸಸಿ . . . ಜೇನೆಯ್ಯಂ ಲಿಂ |
ಗಲೇಪನಂಗೆಯ್ದು ನೆರೆಯೆ ನಾರಿಯರೊಲ್ಗುಂ || ೨೧ ||

ಕಡುವೆಳ್ಪಡರ್ದೆಕ್ಕೆಯ ಬೇ |
ರ್ಮಡಗಿದ ಕಾರ್ಪಾಸವರ್ತಿ ಪಂದಿಯ ಬಸೆಯಿಂ ||
ಪಡರ್ದ ಸೊಡರ್ ಸುಸಿಲೊಡ್ಡಿಯ |
. ಡತಿರ್ಪನ್ನೆವರಮಿಂದ್ರಿಯಂ ತಡೆದಿಕ್ಕುಂ || ೨೨ ||

ಸಿತಕಮಲ ಕೇಸರ ಕ್ಷೌ |
ದ್ರ ತಿಲಂ ದೇವಿ ಚಟಕಹೃದಂ ಮಹಿಷೀ ||
ಘೃತ ಕಲ್ಕಭಾಭಿಲೇಪನ |
ಕೃತದಿಂ ನಿಜವೀರ್ಯ . . ಕೂಡಲ್ ನಿಲ್ಕುಂ . . || ೨೩ ||

ಕಂ|| ಸ್ವರಸ[1]ದೆವಜ್ರಿ ಖಂಡಮ |
ನರದಾಮಳ(ರ)ಸಾರಗಂಧದೊಳ್ ಬಹುವಾರಂ ||
ಪರಿಭಾವಿಸಿ [ಮೇಣ್] ಜೇನೆ |
ಯ್ವೆರಸಿ ವಿಟರ್ ನೆರೆಯೆ ಮೋಹನಂ ವರ್ಧಿಸುಗುಂ || ೨೪ ||

ಜಲ·ಸೂತ ಟಂಕಣಂ ಸೈಂ |
ಧಲವಣ ಹಯಗಂಧ ಪಾರದಂ ಬಜೆ ಬೃಹತೀ ||
ಫಲ ಹಿಮಮೆಂಬಿವಱಿಂ ಲಿಂ |
ಗಲೇಪನಂ ಗೆಯ್ಯೆ ಯುರ್ವಿ ಮುಸಲಂಬೋಲ್ಗುಂ || ೨೫ ||

ಮಗಧರುಹಂ ಮಧು ಶಕ್ಕೆಯ |
ಹಗಿನುದಧಿಜ ಸೂತ ಟಂಕಣಂ ವೇಹಾ(ವಹ)ತ ||
ಮುಗುಳಿನಿತಂ ಮರ್ದಿಸಿ ಶಿ |
ಶ್ನೆಗೆ ತೊಡೆದೊಂದಲ್ ಭಗದ್ರವಂ ಪಿರಿದಕ್ಕುಂ || ೨೬ ||

ಘುಸೃಣ ಸಹಕಾರ ಪದ್ಮಕ |
ಸಸಿ ಕೌಸುಂಭಾಸ್ಥಿ ದಾಡಿಮತ್ವಜ್ಮಾದ್ರಂ ||
ಬಿಸಜರಜಂ ಹರಿಚಂದನ |
ರಸದುತ್ತ . . . ದುರ್ಗಂಧಹರಂ || ೨೭ ||

ಸಿರಿಖಂಡವೊಡೆ ಪಚ್ಚೆಯ |
ಗುರುಱನುಮಂ ಭದ್ರಮುಸ್ತೆ ಕರ್ಬಾಸಂ ಸ ||
ಜ್ಜ ರಸಮೆಂದಿವಱ |
. . . . || ೨೮ ||

ಕಂ|| . . . . ಹಂ ಭೋಗಿಸೆ |
. . . ತೀರ್ಗ ಬೆಸರಂ ಸುರದಾ ||
ಕವಿಶಾ . . . . |
. . . . ಯ ಸಂಸಾರಂ || ೨೯ ||

. . ಕ್ಸಮ ಸಿಂಪಿ ಬಡೆಗಿ . . . |
. . ಮ . . ಜ ಲಜ್ಜಾಮೂಲಂ ||
ಮುನಿಪುಷ್ಪತ್ರವಲ್ಲಿಯುಂ |
. . . . ನ ಬಾಗಿಲಂ ಬಂಧಿಸುಗುಂ || ೩೦ ||

. . . . |
. . . . ದ್ಧನಾಂಗುಲಿಕೆ ಶಿಶ್ನಂ ||
ಬೆರಸೊರಸಲ್ ಕ್ಷಣದೊಳ್ ವಿ |
ಸ್ತರಮಕ್ಕುಂ ಹಸ್ತಿನೀಭಗದ್ವಾರದವೋಲ್ || ೩೧ ||

1. ಸದನ ಶ್ರಿಂಖಂಡ

ಕಂ|| ವರವಶ್ಯಾಕರ್ಷಣ ಮು |
ಖ್ಯ ರಚನೆಯಂ ಕೊಂಡು ಕೊ . . . . ||
. . . . ನೆನಗೆ ದೃಷ್ಟಾಂ |
ತರಮಾಗಿಯೆ ತೋಱದನಿತನಿಲ್ಲಿಗೆ ಪೇೞ್ದೆಂ || ೩೨ ||

ಮನಕಚ್ಚರಿ ಕರ್ಣರಸಾ |
ಯನಮುಱವರ್ಗತನುಸಂನಿ(ವಿ)ಧಾನಂ ದೋರ್ಪಂ ||
ಜನಮಾರ್ಗೀಕೃತಿ ನಿಜವಿಭ |
. . . . ಕವಿಮಲ್ಲಂ || ೩೩ ||

ಮ|| ಪಱದೊಳ್ಗಬ್ಬಿಗರಲ್ಕಱಿಂದುಸಿರ್ದ ಕಾವ್ಯಂ ನವ್ಯಮೆಂದೊಳ್ಪು ಕೈ |
ಗಱಧಿರ್ಪಱದ ಕಬ್ಬಮಂ ಪಳೆಯಱಂ ದಾಯ್ತೆಂತಿದೆಂದಲ್ತಿಮಾ ||
ಳ್ಪುಱ ಕಲ್ಗಬ್ಬ . . . . ಗೆಯ್ಕುದು |
ಜ್ಜಳಿಪೀ ಮನ್ಮಥಶಾಸ್ತ್ರಮಂ ಕಿವಿಗೊಱಲ್ದಿರ್ಕೆಳ್ಗೆ ಸಂಸಾರಿಗಳ್ || ೩೪ ||

ಚಂ|| ಅಗಲಿರಲೊಂದು ಗೂಡಿಸುವ ಜೇವ(ಜೇನ)ರಸಂ . . . . |
. . . . ಕ್ಷಿಸುವ ಕೂರದರಂ ಬಸಮಾಗೆ ಮಾಳ್ಪ ಜಾ ||
ಣ್ಮೆಗೆ ನೆಲೆಯಪ್ಪ ವಿತ್ತಗರ ಚಿತ್ತಮನೀಱ್ಕೆಳಿಗೊಳ್ವ ಸದ್ಗುಣಂ |
ನೆಗಲ್ದದಱಂದೆ ನಿಲ್ಕೆ ಪರೆದೀ ಕೃತಿ ಭೂ [ಭುವನಾಂತರಾಳದೊಳ್] || ೩೫ ||

[1]ಗದ್ಯಂ

ಇದು ವಿದಿತಮದನ ಮುದ್ರಾಂಕಿತ ವಿದೂರಜನನಿಬಂಧನ
ಕಾರಾ[2]ಗಾರಮುಮಭಿನವನಾಯಕನಾಯಿಕಾ
ಶೃಂಗಾರಸಾರೋದ್ಧಾರಮುಂ ಸಕಲ
ವಿಬುಧಸೇವ್ಯಮಾನಮುಂ
ಲಕ್ಷಣ ಕವೀಂದ್ರ
ವಿರಚಿತಮು
ಮಪ್ಪ
ಮನ್ಮಥ ವಿಜಯದೊಳ್
ಅಷ್ಟಾದಶಾಶ್ವಾಸಂ —ವಶ್ಯಾಧಿಕಾರಂ
ಸಂಪೂರ್ಣಂ.
—ಮಂಗಳ ಮಹಾಶ್ರೀ—

ಮನ್ಮಥ ವಿಜಯಂ ಸಂಪೂರ್ಣಂ

---

1. ಭದ್ರಂಭೂಯಾತ್. ಕರಕೃತಮಪರಾಧಂ ಕ್ಷಂತುಮರ್ಹಂತಿಸಂತಃ | . . ಗೃಹಂ ವಿಚಿನ್ವ್ರ | ಕಾಂತಾಕರಸ್ಥಾಪಿತಕಾಮದಂಡರಸ್ಯಾಥಂ ಚುಂಬತಿ ಧನ್ಯಯೇನ ॥ . . ಸ್ಮಸ್ಮರಾಮಿ ಪುರುಷಾಯತತಾಂಡವಾನಾಂ | ಆಲೋಲಮೌಕ್ತಿಕಲತಾ ಲುಳಿತಸ್ತ... ॥ ಎಂಬ ಪದ್ಯಖಂಡಗಳು ಮೂಲಪ್ರತಿಯ ಕೊನೆಯ ಓಲೆಯ ಕೊನೆಯಲ್ಲಿವೆ.

2. ಗಾರಾಯಿತಾ......ಮಂತ್ರೌಷಧಿಪ್ರಕರಣಂ ಸಮಾಪ್ತಂ. (ಪಾ)

ಪರಿಶಿಷ್ಟ ೧

ಈ ಮನ್ಮಥವಿಜಯದ ಪದ್ಯಗಳಿಗೆ ಸಂವಾದಿಯಾದ ಕೊಕ್ಕೋಕನ ರತಿರಹಸ್ಯದ ಪದ್ಯಗಳ ಆಶ್ವಾಸ ಪದ್ಯಸಂಖ್ಯೆಗಳನ್ನು ಸೂಚಿಸುವ ಪಟ್ಟಿಕೆ

ಮನ್ಮಥವಿಜಯದ			ಕೊಕ್ಕೋಕನ ರತಿರಹಸ್ಯದ			
ಆ.	ಪದ್ಯ(ಸಂ)		ಆ.	ಪರಿ.	ಪ.	
೧	೧–೨೨	ಈ ಕವಿಯ ಮಂಗಳ ಶ್ಲೋಕ ಪೂರ್ವಕವಿಸ್ತವ, ತನ್ನ ಗ್ರಂಥ ವಿಚಾರ ಮೊದಲಾದ ಪೀಠಿಕೆ.	೧	೧	೯	ಕವಿಯ ಮಂಗಳ ಶ್ಲೋಕ, ಪೂರ್ವಕವಿ ವಾತ್ಸ್ಯಾಯನಾದಿ ವರ್ಣನ, ಕಾಮಶಾಸ್ತ್ರ ಪ್ರಯೋಜನ.
೨	೨		೧	೧	೧೦	
,,	೩		,,	,,	೧೧–೧೩	
,,	೪		,,	,,	೧೪–೧೫	
,,	೫		,,	,,	೧೬–೧೭	
,,	೬		,,	,,	೧೮–೧೯	
,,	೭		,,	,,	೨೦	
,,	೮		,,	,,	೨೨	
,,	೯		,,	,,	೨೧	
,,	೧೦		,,	,,	೨೩	
,,	೧೧ ರಿಂದ ೧೭ರ ವರೆಗಣ ವಿಷಯವು ಕೊಕ್ಕೋಕದಲ್ಲಿ ಹೇಳಿಲ್ಲ.					
೩	೨		೧	೨	೧	
,,	೩		,,	,,	೨-೪	
,,	೪ ರಿಂದ ೮ ರ ವರೆಗಣ ವಿಷಯವು ಕೊಕ್ಕೋಕದಲ್ಲಿಲ್ಲ.					
,,	೧೨–೧೩		,,	,,	೧೯–೨೦	
,,	೧೪–೧೫		,,	,,	೨೧–೨೨	
,,	೧೬		,,	,,	೨೩	
,,	೧೭–೧೮		,,	,,	೨೪–೨೫	
,,	೧೯–೨೦		,,	,,	೨೬–೨೭	
,,	೨೧–೨೨		,,	,,	೨೮–೨೯	

ಮನ್ಮಥವಿಜಯದ		ಕೊಕ್ಕೋಕನ ರತಿರಹಸ್ಯದ		
ಆ.	ಪದ್ಯ(ಸಂ)	ಆ.	ಪರಿ.	ಪ.
೩	೨೩-೨೪	೧	೨	೩೦
,,	೨೫	,,	,,	೧೭
	೨೬ - ೨೭ ಕೊಕ್ಕೋಕನಲ್ಲಿಲ್ಲ.			
೪	೨	೧	೪	೧೪
,,	೫	,,	,,	,,
,,	೩	,,	,,	೧೫
,,	೧೨	,,	,,	,,
,,	೪	,,	,,	೧೬
,,	೧೦	,,	,,	೧೭
,,	೧೩	,,	,,	,,
,,	೧೧	,,	,,	೧೮
,,	೯	,,	,,	೧೮
		ರಾಕ್ಷಸ, ಮುನಿ, ಕಿನ್ನರಾಂಶ ಇಲ್ಲ.		
೫	೩	೧	೫	೬
,,	೧೦	,,	,,	೫
,,	೨೧	,,	,,	೪
,,	೨೭	,,	,,	೧೨
,,	೨೮	,,	,,	೧೧
,,	೩೬	,,	,,	,,
,,	೪೦	,,	,,	೨
,,	೪೪	,,	,,	೭
,,	೪೬	,,	,,	೧
	ಇಲ್ಲಿ ಮಗಧ ಮೊದಲಾದ ಇನ್ನೂ (೪೪+೯) ೩೫ ದೇಶದ ಸ್ತ್ರೀಯರನ್ನು ಹೆಚ್ಚಾಗಿ ಹೇಳಿದೆ.	ಇಲ್ಲಿ ಅವನ್ತಿ, ಬಾಹ್ಲಿಕ, ಮಹಾರಾಷ್ಟ್ರ, ಪಾಟಲಿಪುತ್ರ, ದ್ರಮಿಡ ವನವಾಸಿ, ಇರಾವತ್ಯಾದಿ ನದೀ ತೀರದ ಜನರನ್ನು ಹೆಚ್ಚಾಗಿ ಹೇಳಿದೆ.		
೬	೨, ೩, ೪	೧	೪	೫ ರಿಂದ ೧೩ರ ವರೆಗೆ.
೭	೨	೧	೪	೧ (ಮುಗ್ಧೆಯಿಲ್ಲ) ಮಧ್ಯಮೆ.
,,	೩ ರಿಂದ ೭	,,	,,	೪
೮	೨	,,	,,	೩೩

ಮನ್ಮಥವಿಜಯದ		ಕೊಕ್ಕೋಕನ ರತಿರಹಸ್ಯದ		
ಆ.	ಪದ್ಯ(ಸಂ)	ಆ.	ಪರಿ.	ಪ.
೮	೪	೧	೪	೩೪
,,	೩	,,	,,	೩೫
,,	೫	,,	,,	೩೬
,,	೬	,,	,,	೨೭
೯	೨	೧	೩	೧
,,	೩	,,	,,	೨-೪
,,	೧೦	,,	,,	೫
,,	೪-೧೪	,,	,,	೧೨-೧೪
೧೦	ಕೊಕ್ಕೋಕನಲ್ಲಿಲ್ಲ.		ಇಲ್ಲ.	
೧೧	೪	೧	೬	೧
,,	೫	,,	,,	೨
,,	೬-೭	,,	,,	೩
,,	೨-೩	,,	,,	೪
,,	೯	,,	,,	೫
,,	೧೨	,,	,,	೬-೭
,,	೧೩	,,	,,	೮
,,	೧೪	,,	,,	೯
,,	೧೧	,,	,,	೧೦
,,	೧೦	,,	,,	೧೧
,,	೮-೧೫	,,	,,	೧೨
೧೨	೨-೩	,,	೭	೨
,,	೭	,,	,,	೩
,,	೧೧, ೧೨, ೧೦, ೬, ೪, ೫	,,	,,	೪-೫
,,	೮-೧೩	,,	,,	೬
,,	೧೭	,,	,,	೭
,,	೧೬-೧೮	,,	,,	೮-೯
೧೩	೪	೧	೮	೧
,,	೩	(ತೆಲುಗು ಮುದ್ರಣ) ಪು ೮೭ರಲ್ಲಿ ಒಂದು ತೆಲುಗು ಕಂದದಲ್ಲಿ ೬-ನ್ನು ಮಾತ್ರ ಹೇಳಿದೆ.		
,,	೫-೬	೧	೮	೪-೫
,,	೯-೧೦	೧	೯	

ಮನ್ಮಥವಿಜಯದ ಆ.	ಪದ್ಯ(ಸಂ.)	ಕೊಕ್ಕೋಕನ ರತಿರಹಸ್ಯದ ಆ.	ಪರಿ.	ಪ.
೧೪	೧	೨	೧೦	೧೧, ೧೨
,,	೨, ೩, ೪			೧೩, ೧೪, ೧೫
	೫, ೯, ೬, ೧೦, ೧೧,			೧೬, ೧೭, ೧೮
	೨-೭, ೧೩–೧೬			೧೯, ೨೦, ೨೧, ೨೨
	೧೧–೧೯, ೨೦–೨೧, ೨೩-೨೪, ೨೫			೨೩, ೨೪, ೨೫
	೨೬-೨೭-೨೮, ೨೯, ೮,೨೦			೩೪, ೩೬, ೩೭
	೩೦, ೩೧, ೩೨, ೩೩, ೨೨, ೩೪			೩೮, ೩೯, ೪೨, ೪೩
	೩೬, ೩೮			೨೨a, ೪೭, ೪೬, ೫೦
,,	೫೦	,,	,,	೬೦
,,	೫೧, ೫೨, ೫೩	,,	,,	೭೦
,,	೫೪-೫೭	,,	,,	೭೧
,,	೫೮	,,	,,	೭೨
೧೫	೧	೨	೧೧	೧
,,	೨	,,	,,	೨
,,	೩	,,	,,	೩
,,	೪	,,	,,	೮, ೯
,,	೫	,,	೧೨	೧–೫
೧೬	೧೦	,,	,,	೯೫
೧೮	೧-೩	೩	೧	೪, ೫
,,	೪	,,	,,	೬, ೭, ೯
,,	೫	,,	,,	೮
,,	೧೨	,,	,,	೨೧-೨೨